ವಿಶ್ವವಾಣಿ

ವಿಶ್ವಾಸವೇ ವಿಶ್ವ

ವಿಶ್ವವಾಣಿ ಗ್ಲೋಬಲ್ ಫೋರಮ್

ಭಾರತ ಹಾಗೂ ಫ್ರಾನ್ಸ್ ವಿಶೇಷ ನಿಯೋಗದ ಸಮ್ಮುಖದಲ್ಲಿ
ಕರ್ನಾಟಕ ಹಾಗೂ ಫ್ರಾನ್ಸ್
ಸಾಂಸ್ಕೃತಿಕ ಸಮ್ಮಿಲನ ಹಾಗೂ ಕನ್ನಡಿಗರ ಜಾಗತಿಕ ಸಮಾವೇಶ

ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಪ್ಯಾರಿಸ್‌ನ ರಾಯಲ್ ಗಾರ್ಡನ್‌ನಲ್ಲಿ

ಮಂಗಳವಾರ , 04 ನವೆಂಬರ್ 2025
ರಾಯಲ್ ಗಾರ್ಡನ್, ಪ್ಯಾರಿಸ್

PARVA GROUP

AMRITH NONI

DIAGO FINANCE
BUILD YOUR FUTURE

MRG group
Redefining Lifestyle & Hospitality

ದಿವ್ಯ ಸಾನ್ನಿಧ್ಯ

ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ
ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ,
ಭೋವಿ ಗುರುಪೀಠ, ಬಾಗಲಕೋಟೆ - ಚಿತ್ರದುರ್ಗ

ಶ್ರೀ ಪ್ರಭು ನೀಲಕಂಠ ಸ್ವಾಮೀಜಿ
ಮೂರು ಸಾವಿರ ಮಠ - ಬೈಲಹೊಂಗಲ

ಮುಖ್ಯ ಅತಿಥಿಗಳು



ಶ್ರೀ ಬಸವರಾಜ ಹೊರಟ್ಟಿ
ಗೌರವಾನ್ವಿತ ಸಭಾಪತಿಗಳು
ಕರ್ನಾಟಕ ವಿಧಾನಪರಿಷತ್

ಶ್ರೀ ಶಿವರಾಜ್ ತಂಗಡಗಿ
ಹಿಂದುಳಿದ ವರ್ಗಗಳ ಕಲ್ಯಾಣ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ಅಧ್ಯಕ್ಷತೆ

ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕರು
ವಿಶ್ವವಾಣಿ, ವಿಶ್ವವಾಣಿ ಟಿವಿ, ಪ್ರವಾಸಿ ಪ್ರಪಂಚ

ಇದು ಕನ್ನಡ ಪತ್ರಿಕೋದ್ಯಮದಲ್ಲೇ ಹೊಸ ದಾಖಲೆ

ವಿಶ್ವವಾಣಿ ಪತ್ರಿಕೆಯ 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ವಿಶ್ವವಾಣಿ ಗ್ಲೋಬಲ್ ಫೋರಂ ಆಶ್ರಯದಲ್ಲಿ ವಿದೇಶಿ ನೆಲದಲ್ಲಿ ಆಯಾ ದೇಶದ ನಿಯೋಗದ ಸಹಭಾಗಿತ್ವದೊಂದಿಗೆ ನಡೆಯುವ ವಿಶಿಷ್ಟ ಕಾರ್ಯಕ್ರಮ. ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿಯ ಪರಿಚಯ ಈ ಕಾರ್ಯಕ್ರಮದ ಆಶಯ. ಈ ವಿನೂತನ ಕಾರ್ಯಕ್ರಮ ಈಗಾಗಲೇ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ಡೀವ್ಸ್, ಜಪಾನ್, ಕತಾರ್, ರಷ್ಯಾ ಜಾರ್ಜಿಯಾ ಹಾಗೂ ಭೂತಾನ್ ದೇಶಗಳಲ್ಲಿ ಯಶಸ್ವಿಯಾಗಿ ನಡೆದಿದೆ. ಇದೀಗ ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿರುವ ರಾಯಲ್ ಗಾರ್ಡನ್‌ನಲ್ಲಿ ಹನ್ನೊಂದನೇ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ ನಡೆಯುತ್ತಿದೆ.

ಸಮಾಚಾರ ಸಣ್ಣದಲ್ಲ

ಅನಧಿಕೃತ ಕಟ್ಟಡ ತೆರವು ಮಾಡಿಸಿ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ಅಪರ ಆಯುಕ್ತರು (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ನೇತೃತ್ವದಲ್ಲಿ ಸೋಮವಾರ ಎಂಜಿನಿಯರಿಂಗ್ ವಿಭಾಗದ ಸಮನ್ವಯ ಸಭೆ ನಡೆಸಲಾಯಿತು. ಪೂರ್ವ ನಗರ ಪಾಲಿಕೆ ವ್ಯಾಪ್ತಿ ಯಲ್ಲಿ 8 ವಿಭಾಗಗಳು, 24 ಉಪ ವಿಭಾಗಗಳು ಹಾಗೂ 50 ವಾರ್ಡ್ ಗಳನ್ನು (ಕರಡು) ರಚಿಸಿದ್ದು, ಇನ್ನೊಂದು ವಾರದೊಳಗೆ ಎಲ್ಲಾ ಕಾರ್ಯಪಾಲಕ, ಸಹಾಯಕ ಕಾರ್ಯಪಾಲಕ, ಹಾಗೂ ಸಹಾಯಕ ಅಭಿಯಂತರರು ತಮ್ಮ ವಿಭಾಗ, ಉಪವಿಭಾಗ ಹಾಗೂ ವಾರ್ಡ್ ಮಟ್ಟದ ಎಂಜಿನಿಯರಿಂಗ್ ವಿಭಾಗಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಯನ್ನು ಹೊಂದಿರಬೇಕು ಎಂದು ನಿರ್ದೇಶನ ನೀಡಿದರು. ಬಿಟಿಪಿ ಅಸ್ತ್ರಂ, ರಸ್ತೆ ಗುಂಡಿ ಗಮನ ಹಾಗೂ ಸಹಾಯ ಆಪ್‌ಗಳಲ್ಲಿ ದಾಖಲಾಗಿರುವ ರಸ್ತೆ ಗುಂಡಿ ಮುಚ್ಚುವ ಕಾರ್ಯದ ಪ್ರಗತಿ ಮಾಹಿತಿಯನ್ನು ನವೀಕರಿಸಿ, ಪೂರ್ಣಗೊಂಡ ಕಾರ್ಯಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ಅಸ್ತ್ರಂ ಆಪ್ ನಲ್ಲಿ ಅಪ್‌ಲೋಡ್ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮುಂದಿನ ದಿನಗಳಲ್ಲಿ ಆಯುಕ್ತರು, ಅಪರ ಆಯುಕ್ತರು ಹಾಗೂ ಮುಖ್ಯ ಅಭಿಯಂತರರು ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡುಗಳಿಗೆ ವೇಳಾ ಪಟ್ಟಿಮಾಡಿಕೊಂಡು ಪ್ರತಿ ದಿನ ಭೇಟಿ ನೀಡಿ, ವಾರ್ಡ್ ಮಟ್ಟದ ಸ್ಥಳೀಯ ಅಭಿವೃದ್ಧಿ ಕಾರ್ಯಗಳ ಪರಿಶೀಲನೆ ನಡೆಸಲಾಗುವುದು ಅಲ್ಲಿ ಕಂಡುಬರುವ ಸಮಸ್ಯೆಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂದು ತಿಳಿಸಿದರು. ಈ ವೇಳೆ ಮುಖ್ಯ ಅಭಿಯಂತರರಾದ ಲೋಕೇಶ್ ಹಾಗೂ ಕೃಷ್ಣಮೂರ್ತಿ ಸೇರಿದಂತೆ ಎಲ್ಲಾ ವಿಭಾಗಗಳ ಕಾರ್ಯಪಾಲಕ ಮತ್ತು ಸಹಾಯಕ ಕಾರ್ಯ ಪಾಲಕ ಅಭಿಯಂತರರು ಇದ್ದರು.

ಕೃತಿಕಾ ಕೊಲೆ ಬಳಿಕ ಸ್ನೇಹಿತೆಗೆ ಸಂದೇಶ ಕಳುಹಿಸಿದ್ದ ಆರೋಪಿ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆ ವೈದ್ಯೆ ಡಾ.ಕೃತಿಕಾರೆಡ್ಡಿ ಕೊಲೆ ಪ್ರಕರಣದ ಆರೋಪಿಯಾಗಿರುವ ಪತಿ ಡಾ. ಮಹೇಂದ್ರರೆಡ್ಡಿ ವಿರುದ್ಧ ತನಿಖೆ ತೀವ್ರಗೊಳಿಸಿರುವ ಪೊಲೀಸರಿಗೆ ಹಲವು ಸ್ಫೋಟಕ ವಿಚಾರಗಳು ತಿಳಿದು ಬಂದಿವೆ.

ಪೊಲೀಸರು ಆರೋಪಿಯ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ವಶಕ್ಕೆ ಪಡೆದು ತಾಂತ್ರಿಕ ವಿಶ್ಲೇಷಣೆಗಾಗಿ ಎಫ್‌ಎಸ್‌ಎಲ್‌ಗೆ ರವಾನಿಸಿದ್ದಾರೆ. ಆರೋಪಿ ಮಹೇಂದ್ರರೆಡ್ಡಿ ತನ್ನ ಆಪ್ತ ಸ್ನೇಹಿತೆಯೊಂದಿಗೆ ನಡೆಸಿರುವ ಚಾಟಿಂಗ್ ಬಹಿರಂಗವಾಗಿದೆ. ಇಂತಹ ಸಂದೇಶಗಳನ್ನು ಫೋನ್ ಪೇ ಮೂಲಕ ಕಳುಹಿಸುತ್ತಿದ್ದ. ಒಂದರಲ್ಲಿ ಐ ಕಿಲ್ಡ್ ಮೈ ವೈಫ್ ಬಿಕಾಸ್ ಆಫ್ ಯು ಎಂಬ ಸಂದೇಶ ಕಳುಹಿಸಿದ್ದ ಎಂಬ ಸಂಗತಿ ತನಿಖೆ ವೇಳೆ ಬಯಲಾಗಿದೆ. ಈ ಸಂದೇಶವನ್ನು ಅಳಿಸಲು ಸಾಕಷ್ಟು ಬಾರಿ ಯತ್ನಿಸಿದರೂ ಆಗಿರಲಿಲ್ಲ.

ಸ್ನೇಹಿತೆಯೊಂದಿಗೆ ನಡೆದ ಪೂರ್ಣ ಚಾಟ್ ಹಿಸ್ಟರಿಯನ್ನು ಪೊಲೀಸರು ರಿಟ್ರೀವ್ ಮಾಡಿದ್ದಾರೆ. ಜತೆಗೆ ವೈಯಕ್ತಿಕ ಮಾತುಕತೆಗಳೂ ಬಹಿರಂಗವಾಗಿವೆ. ಈ ಹಿನ್ನೆಲೆಯಲ್ಲಿ ಆ ಯುವತಿಯನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ. ಡಾ.ಕೃತಿಕಾರೆಡ್ಡಿಯ ಆರೋಗ್ಯ ಸಮಸ್ಯೆಯಿಂದ ಪತಿ ಮಹೇಂದ್ರರೆಡ್ಡಿ ಬೇಸರಗೊಂಡಿದ್ದರು. ನನಗೆ



ವೈಯಕ್ತಿಕ ಜೀವನವೇ ಇಲ್ಲ ಎಂದು ಅಸಮಾಧಾನ ಹೊರಹಾಕಿದ್ದರು. ಪತ್ನಿಯಿಂದ ವಿಚ್ಛೇದನ ಪಡೆದರೆ ಆರ್ಥಿಕವಾಗಿ ನಷ್ಟವಾಗಬಹುದು ಎಂಬ ಭೀತಿಯಿಂದ ಪತ್ನಿಯ ಆರೋಗ್ಯ ಸಮಸ್ಯೆಯನ್ನೇ ಬಂಡವಾಳ ಮಾಡಿಕೊಂಡು ಕೊಲೆ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಯೋಜನೆಯ ಭಾಗವಾಗಿ ಕೃತಿಕಾರೆಡ್ಡಿ ದೇಹದ ತೂಕಕ್ಕೆ ಅಗತ್ಯವಿದ್ದ 7-8 ಎಂ.ಎಲ್. ಅನಸ್ತೇಶಿಯಾ ಬದಲು 15 ಎಂ.ಎಲ್. ಪ್ರಮಾಣದಲ್ಲಿ ನೀಡಿದ್ದರೆಂಬುದು ತನಿಖೆಯಿಂದ ಈಗಾಗಲೇ ಬಯಲಾಗಿದೆ. ಈ ಆಧಾರದ ಮೇಲೆ ಮಹೇಂದ್ರರೆಡ್ಡಿಯನ್ನು ಪೊಲೀಸರು ಬಂಧಿಸಿದ್ದು, ಆತನ ಸ್ನೇಹಿತೆಯನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ.

ಮಹಿಳೆಯ ಮೇಲೆ ಪೊಲೀಸರಿಂದ ಮನಸೋ ಇಚ್ಛೆ ಹಲ್ಲೆ ಆರೋಪ

ಬೆಂಗಳೂರು: ಮಹಿಳೆಯೊಬ್ಬರ ಖಾಸಗಿ ಅಂಗಗಳಿಗೆ ಒದ್ದು ವರ್ತೂರು ಪೊಲೀಸರು ಮನಸೋ ಇಚ್ಛೆ ಹಲ್ಲೆ ಮಾಡಿದ್ದಾರೆಂಬ ಗಂಭೀರ ಆರೋಪ ಕೇಳಿ ಬಂದಿದೆ. ಪಶ್ಚಿಮ ಬಂಗಾಳದ ಮಹಿಳೆ ಸುಂದರಿ ಬೀಬಿ (34) ಹಲ್ಲೆಗೊಳಗಾದ ಮಹಿಳೆ. ಬೇಬಿಯ ತಲೆ, ಬೆನ್ನು, ಕೈ- ಕಾಲು ಹಾಗೂ ಖಾಸಗಿ ಅಂಗಗಳ ಮೇಲೆ ಮೇಲೆ ವರ್ತೂರು ಪೊಲೀಸರು ಹಲ್ಲೆ ಮಾಡಿದ್ದು, ರಕ್ತ ಹೆಪ್ಪುಗಟ್ಟಿ ನಡೆದಾಡಲು ಆಗದ ಪರಿಸ್ಥಿತಿಯಲ್ಲಿದ್ದಾರೆ.

ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ನಲ್ಲಿ ಸುಂದರಿ ಬೀಬಿ ಮನೆ ಕೆಲಸ ಮಾಡುತ್ತಿದ್ದರು. ಮನೆಯಲ್ಲಿ ಹಣ ಬಿದ್ದಿರುವುದು ತೆಗೆದುಕೊಂಡು ಮನೆ ಮಾಲೀಕರಿಗೆ ಕೊಡಲು ಹೋಗಿದ್ದಾರೆ. ಇದನ್ನ ಸಿಸಿಟಿವಿಯಲ್ಲಿ ಗಮನಿಸಿದ ಅಪಾರ್ಟ್‌ಮೆಂಟ್ ಫ್ಲ್ಯಾಟ್‌ನಲ್ಲಿ ಮಾಲೀಕರು ಬೀಬಿ ಮೇಲೆ ಹಲ್ಲೆ ಮಾಡಿ, ಪೊಲೀಸರಿಗೆ ಒಪ್ಪಿಸಿದ್ದಾರೆ. ಬಳಿಕ ಠಾಣೆಯಲ್ಲಿ ಪೊಲೀಸರು ಮನಬಂದಂತೆ ಥಳಿಸಿದ್ದಾರೆಂದು ಆರೋಪಿಸಿದ್ದಾರೆ. ಘಟನೆಯ ಕುರಿತು ಹಲ್ಲೆಗೊಳಗಾದ ಕುಟುಂಬ, ಪ. ಬಂಗಾಳದ ರಾಜ್ಯಸಭಾ ಸದಸ್ಯ ಹಾಗೂ ಪ.ಬಂಗಾಳದ ವಲಸೆ ಕಾರ್ಮಿಕರ ಕಲ್ಯಾಣ ಮಂಡಳಿಯ ಅಧ್ಯಕ್ಷ ಸಮೀರ್ ಉಲ್‌ಗೆ ವಿಚಾರ ತಿಳಿಸಿದ್ದಾರೆ. ಕೂಡಲೇ ಪಶ್ಚಿಮ ಬಂಗಾಳದ ಸಿಎಂ ಕಚೇರಿಗೆ ಸಮೀರ್ ಉಲ್ ಬೆಂಗಳೂರು ಪೊಲೀಸರ ಕ್ರೌರ್ಯದ ವಿಷಯ ಮುಟ್ಟಿಸಿದ್ದಾರೆ. ಬೆಂಗಳೂರು ಪೊಲೀಸರ ಈ ವರ್ತನೆಗೆ ಪಶ್ಚಿಮ ಬಂಗಾಳದ ಸಿಎಂ ಕಚೇರಿ ಅಸಮಾಧಾನ ವ್ಯಕ್ತಪಡಿಸಿದೆ.

ಮಾಲೀಕರ ಶ್ವಾನವನ್ನು ನೆಲಕ್ಕೆ ಬಡಿದು ಕೊಲೆ

ಬೆಂಗಳೂರು: ಮನೆ ಮಾಲೀಕರು ಸಾಕಿದ್ದ ಶ್ವಾನವನ್ನು ಮನೆ ಕೆಲಸದ ಮಹಿಳೆ ಅಮಾನವೀಯವಾಗಿ ಹತ್ಯೆಗೈದಿರುವ ಘಟನೆ ಬೆಳಕಿಗೆ ಬಂದಿದೆ. ಅಕ್ಟೋಬರ್ 31ರಂದು ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಗೂಫಿ ಎಂಬ ಶ್ವಾನವನ್ನು ಮನೆ ಕೆಲಸದಾಕೆ ಪುಷ್ಪಲತಾ ನೆಲಕ್ಕೆ ಬಡಿದು, ಕತ್ತು ಬಿಗಿದು ಹತ್ಯೆಗೈದಿರುವುದು ಲಿಫ್ಟ್‌ನಲ್ಲಿ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಕೆಲಸದಾಕೆಯ ಕ್ರೂರ ಕೃತ್ಯವನ್ನು ಮನೆ ಮಾಲೀಕರಾದ ರಾಶಿ ಪೂಜಾರಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಶ್ವಾನ ಪ್ರಿಯರಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಸಾಕು ನಾಯಿ ನೋಡಿಕೊಳ್ಳಲು ಪುಷ್ಪಾಲತಾಳನ್ನು ನೇಮಿಸಿಕೊಳ್ಳಲಾಗಿತ್ತು. ಅಕ್ಟೋಬರ್ 31ರಂದು ನಾಯಿಯನ್ನು ವಾಕಿಂಗ್‌ಗೆ ಕರೆದೊಯ್ದಿದ್ದ ಪುಷ್ಪಲತಾ ಲಿಫ್ಟ್‌ವೊಳಗೆ ಬರುತ್ತಿದ್ದಂತೆ ನೆಲಕ್ಕೆ ಬಡಿದು, ಬೆಲ್ಟ್‌ನಿಂದ ಕತ್ತು ಬಿಗಿದು ಸಾಯಿಸಿದ್ದಾಳೆ. ಬಳಿಕ ನಾಯಿಯ ಕಳೇಬರವನ್ನು ಅಮಾನವೀಯವಾಗಿ ಎಳೆದು ತಂದು ಇದ್ದಕ್ಕಿದ್ದಂತೆ ಸಾವನ್ನಪ್ಪಿತು ಎಂದು ಆರೋಪಿ ಸುಳ್ಳು ಹೇಳಿದ್ದಾಗಿ ಶ್ವಾನದ ಮಾಲೀಕರು ಹೇಳಿದ್ದಾರೆ. ಬಳಿಕ ಅನುಮಾನಗೊಂಡು ಮಾರನೇ ದಿನ ಸಿಸಿಟಿವಿ ದೃಶ್ಯಗಳನ್ನು ಪರಿಶೀಲನೆ ಮಾಡಿದಾಗ ಕೆಲಸದಾಕೆಯ ಕೃತ್ಯ ಬೆಳಕಿಗೆ ಬಂದಿದೆ. ಸದ್ಯ ರಾಶಿ ಪೂಜಾರಿ ಅವರು ನೀಡಿದ ದೂರಿನ ಮೇರೆಗೆ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆಯಡಿ ಪುಷ್ಪಲತಾ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿ ಪುಷ್ಪಲತಾಳನ್ನು ವಶಕ್ಕೆ ಪಡೆದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬೈಕ್‌ಗೆ ಉದ್ದೇಶಪೂರ್ವಕವಾಗಿ ಡಿಕ್ಕಿ ಹೊಡೆದ ಕ್ಯಾಬ್ ಚಾಲಕ

ಬೆಂಗಳೂರು: ನಗರದಲ್ಲಿ ನಿತ್ಯ ರೋಡ್‌ರೇಜ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕೆ.ಆರ್.ಪುರಂ ಫ್ಲೈಓವರ್‌ನಲ್ಲಿ ಮತ್ತೊಂದು ರಸ್ತೆ ಗಲಭೆ ಪ್ರಕರಣ ವರದಿಯಾಗಿದೆ. ಕ್ಯಾಬ್ ಚಾಲಕನೊಬ್ಬ ಉದ್ದೇಶಪೂರ್ವಕವಾಗಿ ತನ್ನ ಕಾರನ್ನು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ಈ ಘಟನೆಯಲ್ಲಿ ಬೈಕ್ ಸವಾರ ಮತ್ತು ಹಿಂಬದಿ ಸವಾರ ಇಬ್ಬರೂ ಗಾಯಗೊಂಡಿದ್ದಾರೆ. ಅಕ್ಟೋಬರ್ 31 ರಂದು ಮಧ್ಯಾಹ್ನ 1.15 ರ ಸುಮಾರಿಗೆ ಈ ಘಟನೆ ನಡೆದಿದ್ದು, ಕ್ಯಾಬ್‌ನ ಹಿಂದೆ ಚಲಿಸುತ್ತಿದ್ದ ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಇಡೀ ದೃಶ್ಯ ಸೆರೆಯಾಗಿದೆ. ವಿಡಿಯೋ ತುಣುಕಿನಲ್ಲಿ ಕ್ಯಾಬ್ ಚಾಲಕ ಮತ್ತು ದ್ವಿಚಕ್ರ ವಾಹನ ಸವಾರರು ರಸ್ತೆಯ ಮಧ್ಯೆ ತೀವ್ರ ವಾಗ್ವಾದದಲ್ಲಿ ತೊಡಗಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಕೆಲವೇ ಕ್ಷಣಗಳಲ್ಲಿ, ಕ್ಯಾಬ್ ಚಾಲಕ ಏಕಾಏಕಿ ಬಲಕ್ಕೆ ತಿರುಗಿ ಮೋಟಾರ್ ಸೈಕಲ್‌ಗೆ ಗುದ್ದಿದ್ದಾನೆ. ಈ ಡಿಕ್ಕಿಯ ಪರಿಣಾಮದಿಂದ ದ್ವಿಚಕ್ರ ವಾಹನದ ಇಬ್ಬರೂ ಸವಾರರು ಸಮತೋಲನ ಕಳೆದುಕೊಂಡಿದ್ದಾರೆ. ಹಿಂಬದಿ ಸವಾರ ರಸ್ತೆಗೆ ಉರುಳಿ ಗಾಯಗೊಂಡರೆ, ಬೈಕ್ ಸವಾರರ ಸ್ವಲ್ಪ ಪರದಾಟದ ನಂತರ ಮೋಟಾರ್ ಸೈಕಲ್ ಅನ್ನು ನಿಯಂತ್ರಿಸಲು ಯಶಸ್ವಿಯಾಗಿದ್ದಾರೆ.

ಈ ಘಟನೆ ಸಂಬಂಧ ವೈಟ್‌ಫೀಲ್ಡ್‌ನ ಉಪ ಪೊಲೀಸ್ ಆಯುಕ್ತ ಕೆ. ಪರಶುರಾಮ್ ಅವರು ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದು, ಗಾಯಗೊಂಡ ಇಬ್ಬರು ಸವಾರರನ್ನು ಸಂಪರ್ಕಿಸಲಾಗಿದೆ. ಆದರೆ, ಅವರು ಯಾವುದೇ ದೂರು ದಾಖಲಿಸಲು ನಿರಾಕರಿಸಿದ್ದಾರೆ ಎಂದು ತಿಳಿಸಿದ್ದಾರೆ. ಆದರೂ ಘಟನೆಗೆ ಕಾರಣನಾದ ಕ್ಯಾಬ್ ಚಾಲಕನ ವಿರುದ್ಧ ಮಹದೇವಪುರ ಪೊಲೀಸ್ ಠಾಣೆಯಲ್ಲಿ ಸ್ವಯಂಪ್ರೇರಿತವಾಗಿ ಅರ್ಜಿ ದಾಖಲಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ತಂತ್ರಜ್ಞಾನದ ಮೂಲಕ ಸಮಾಜಕ್ಕೆ ಕೊಡುಗೆ ನೀಡಿ

ಬೆಂಗಳೂರು: ತಂತ್ರಜ್ಞಾನವನ್ನು ಕಲಿತು ಸಮಾಜದ ಶ್ರೇಯೋಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಹೊಸದಿಲ್ಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಸಂಗಮೇಶ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಬೆಂಗಳೂರಿನ ಸಾಯಿ ವಿದ್ಯಾ ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗವು ರಾಜಾನುಕುಂಟೆಯಲ್ಲಿ ಆಯೋಜಿಸಿದ್ದ 'ಕೈಗಾರಿಕಾ ಅನ್ವಯಿಕೆಗಳಿಗೆ ಸುಧಾರಿತ ವಸ್ತುಗಳು-2025' ಎಂಬ ವಿಷಯ ಕುರಿತು ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿ, 'ಯುವ ಸಮೂಹ ಸುಧಾರಿತ ತಂತ್ರಜ್ಞಾನವನ್ನು ಹೆಚ್ಚು ಬಳಸಿಕೊಳ್ಳಬೇಕು. ಈ ಮೂಲಕ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದ ಅವರು, ಕೈಗಾರಿಕೆಗಳಲ್ಲಿ ಸುಧಾರಿತ ವಸ್ತುಗಳನ್ನು ಬಳಸುವ ಮೂಲಕ ಮೆಕ್ಯಾನಿಕಲ್ ಕ್ಷೇತ್ರದ ನಾವೀನ್ಯತೆಗೆ ಒತ್ತು ಕೊಡಬೇಕು' ಎಂದು ಸುಧಾರಿತ ತಂತ್ರಜ್ಞಾನಗಳ ಕಾರ್ಯವೈಖರಿಯನ್ನು ವಿವರಿಸಿದರು.

ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆದ ಕಾರ್ಯಾಗಾರದಲ್ಲಿ ನಾನಾ ಎಂಜಿನಿಯರಿಂಗ್ ಕಾಲೇಜು ಗಳಿಂದ 50ಕ್ಕೂ ಹೆಚ್ಚು ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡು ಕಾರ್ಯಾ ಗಾರದ ಸದುಪ ಯೋಗ ಪಡೆದರು. ಕಾರ್ಯಾಗಾರದ ಕಾರ್ಯದರ್ಶಿ ಗಳಾದ ಡಾ. ಎಸ್. ರಾಘವೇಂದ್ರ, ಎಸ್‌ವಿಐಟಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಟಿ.ಎನ್. ಮಂಜುನಾಥ, ಉಪ ಪ್ರಾಂಶುಪಾಲರಾದ ಡಾ. ಕೆ. ಲಕ್ಷ್ಮಿನಾರಾಯಣಚಾರಿ ಮತ್ತಿತರರು ಹಾಜರಿದ್ದರು.

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)(CIN : L65922DL2005PLC136029)** (**''ಸೆಕ್ಯೂರ್ಡ್ ಕ್ರೆಡಿಟರ್''**) ಇವರಿಗೆ ಮಾರ್ಟ್‌ಗೇಜ್ ಮಾಡಲಾದ / ಚಾರ್ಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ನೀರಜ್ ಕುಮಾರ್ ಸಿಂಗ್ ಮತ್ತು ನೀತಾ ಕುಮಾರಿ** ಇವರಿಂದ **ಸಾಲ ಖಾತೆ ನಂ. HHLBAN00248843** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **16.10.2025**ರ ತನಕದ ಬಡ್ಡಿ **ರೂ. 33,08,597/- (ರೂಪಾಯಿ ಮೂವತ್ತ ಮೂರು ಲಕ್ಷ ಎಂಟು ಸಾವಿರದ ಐದು ನೂರ ತೊಂಬತ್ತ ಏಳು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **17.10.2025**ರಿಂದ ಭವಿಷ್ಯದ ಬಡ್ಡಿಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ''**, **''ಏನಿದೆಯೊ ಹಾಗೆ''**, ಮತ್ತು **''ಯಾವುದೇ ರಿಕೋರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **21.11.2025**ರಂದು **ಸಂಜೆ 05.00 ರಿಂದ ಸಂಜೆ 06.00 ರವರೆಗೆ**ರ ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 44,55,000/- (ರೂಪಾಯಿ ನಲವತ್ತ ನಾಲ್ಕು ಲಕ್ಷ ಐವತ್ತ ಐದು ಸಾವಿರ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್‌ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 4,45,500/- (ರೂಪಾಯಿ ನಾಲ್ಕು ಲಕ್ಷ ನಲವತ್ತ ಐದು ಸಾವಿರದ ಐದು ನೂರು ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಫ್ಲಾಟ್ ಸಂಖ್ಯೆ-004, **ನೆಲಮಹಡಿ, ಶ್ರೀ ವಾಣಿ ಸಿಂಫನಿ, ಹಳೆಯ ಸರ್ವೆ ಸಂಖ್ಯೆ**-30/23, **ಹೊಸ ಸರ್ವೆ ಸಂಖ್ಯೆ**-30/35, **ತಿರುಪಾಳ್ಯ ಗ್ರಾಮ, ಜಿಗಣಿ, ಆನೇಕಲ್, ಬೆಂಗಳೂರು, ಕರ್ನಾಟಕ** - 560099.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ದಿನಾಂಕ : 28.10.2025
ಸ್ಥಳ : ಬೆಂಗಳೂರು

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ
ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLABNE00495736 1. ಮಾಂಡೋ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್ 2. ಆಯೇಷಾ ಸುಲ್ತಾನಾ 3. ಮೊಹಮ್ಮದ್ ಖಾದರ್‌ಖಾನ್ ದುರಾನಿ 4. ಎನ್ ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್	ಹಂತ 1 ರಲ್ಲಿ 05 ಘಟಕಗಳು ಮತ್ತು ಹಂತ 2 ರಲ್ಲಿ 38 ಘಟಕಗಳು, ಅರೌಂಡ್ ದಿ ಮ್ಯಾಂಗೋ ಯೋಜನೆಯಲ್ಲಿ, ಆಸ್ತಿ ಹೊಂದಿರುವ ಸರ್ವೆ ಸಂಖ್ಯೆ 63/1, ಸರ್ವೆ ಸಂಖ್ಯೆ 64, ಸರ್ವೆ ಸಂಖ್ಯೆ 65/1, ಸರ್ವೆ ಸಂಖ್ಯೆ 65/2, ಸರ್ವೆ ಸಂಖ್ಯೆ 66/5 ಗುಂಜೂರು ಗ್ರಾಮ, ಬೆಂಗಳೂರು 560087, ಕರ್ನಾಟಕ ದಲ್ಲಿ ಸ್ಥಿತವಾಗಿದೆ	03.08.2025	ದಿನಾಂಕ 13.10.2025 ರಂತೆ ರೂ. 2,33,41,504.38/- (ರೂಪಾಯಿ ಎರಡು ಕೋಟಿ ಮೂವತ್ತ ಮೂರು ಲಕ್ಷ ನಲವತ್ತ ಒಂದು ಸಾವಿರದ ಐದು ನೂರ ನಾಲ್ಕು ಮತ್ತು ಪೈಸೆ ಮೂವತ್ತ ಎಂಟು ಮಾತ್ರ)
2.	ಸಾಲ ಖಾತೆ ನಂ. HLLABNE00502341 1. ಮಾಂಡೋ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್ 2. ಆಯೇಷಾ ಸುಲ್ತಾನಾ 3. ಮೊಹಮ್ಮದ್ ಖಾದರ್‌ಖಾನ್ ದುರಾನಿ 4. ಎನ್ ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್	ಹಂತ 1 ರಲ್ಲಿ 05 ಘಟಕಗಳು ಮತ್ತು ಹಂತ 2 ರಲ್ಲಿ 38 ಘಟಕಗಳು, ಅರೌಂಡ್ ದಿ ಮ್ಯಾಂಗೋ ಯೋಜನೆಯಲ್ಲಿ, ಆಸ್ತಿ ಹೊಂದಿರುವ ಸರ್ವೆ ಸಂಖ್ಯೆ 63/1, ಸರ್ವೆ ಸಂಖ್ಯೆ 64, ಸರ್ವೆ ಸಂಖ್ಯೆ 65/1, ಸರ್ವೆ ಸಂಖ್ಯೆ 65/2, ಸರ್ವೆ ಸಂಖ್ಯೆ 66/5 ಗುಂಜೂರು ಗ್ರಾಮ, ಬೆಂಗಳೂರು 560087, ಕರ್ನಾಟಕ ದಲ್ಲಿ ಸ್ಥಿತವಾಗಿದೆ	03.08.2025	ದಿನಾಂಕ 13.10.2025 ರಂತೆ ರೂ. 1,98,69,395.40/- (ರೂಪಾಯಿ ಒಂದು ಕೋಟಿ ತೊಂಬತ್ತ ಎಂಟು ಲಕ್ಷ ಅರವತ್ತ ಒಂಬತ್ತು ಸಾವಿರದ ಮುನ್ನೂರ ತೊಂಬತ್ತ ಐದು ಮತ್ತು ಪೈಸೆ ನಲವತ್ತು ಮಾತ್ರ)
3.	ಸಾಲ ಖಾತೆ ನಂ. HLLABNE00502291 1. ಮಾಂಡೋ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್ 2. ಆಯೇಷಾ ಸುಲ್ತಾನಾ 3. ಮೊಹಮ್ಮದ್ ಖಾದರ್‌ಖಾನ್ ದುರಾನಿ 4. ಎನ್ ಡಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ 5. ಮಹಾಬೀರ್ ಪ್ರಸಾದ್ ಅಗರ್ವಾಲ್ (ಖಾತರಿದಾರ) 6. ಮುಕುಲ್ ಅಗರ್ವಾಲ್ (ಖಾತರಿದಾರ)	ಹಂತ 1 ರಲ್ಲಿ 05 ಘಟಕಗಳು ಮತ್ತು ಹಂತ 2 ರಲ್ಲಿ 38 ಘಟಕಗಳು, ಅರೌಂಡ್ ದಿ ಮ್ಯಾಂಗೋ ಯೋಜನೆಯಲ್ಲಿ, ಆಸ್ತಿ ಹೊಂದಿರುವ ಸರ್ವೆ ಸಂಖ್ಯೆ 63/1, ಸರ್ವೆ ಸಂಖ್ಯೆ 64, ಸರ್ವೆ ಸಂಖ್ಯೆ 65/1, ಸರ್ವೆ ಸಂಖ್ಯೆ 65/2, ಸರ್ವೆ ಸಂಖ್ಯೆ 66/5 ಗುಂಜೂರು ಗ್ರಾಮ, ಬೆಂಗಳೂರು 560087, ಕರ್ನಾಟಕ ದಲ್ಲಿ ಸ್ಥಿತವಾಗಿದೆ	03.08.2025	ದಿನಾಂಕ 13.10.2025 ರಂತೆ ರೂ. 5,45,75,417.12/- (ರೂಪಾಯಿ ಐದು ಕೋಟಿ ನಲವತ್ತ ಐದು ಲಕ್ಷ ಎಪ್ಪತ್ತ ಐದು ಸಾವಿರದ ನಾಲ್ಕು ನೂರ ಹದಿನೇಳು ಮತ್ತು ಪೈಸೆ ಹನ್ನೆರೆಡು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಏಆರ್‌ಎಫ್‌ಏಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಪೇದೆ ವಿರುದ್ಧ ಅತ್ಯಾಚಾರ ಆರೋಪ: ಪ್ರಕರಣ ರದ್ದು

ಬೆಂಗಳೂರು: ಮದುವೆಯಾಗುವುದಾಗಿ ಭರವಸೆ ನೀಡಿ ಅತ್ಯಾಚಾರ ನಡೆಸಿದ ಆರೋಪದಲ್ಲಿ ಮಹದೇವಪುರ ಪೊಲೀಸ್ ಠಾಣೆಯ ಪೇದೆ ಫಕೀರಪ್ಪ ಹಟ್ಟಿ (30) ವಿರುದ್ಧ ದಾಖಲಾದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಮೂವರು ಮಕ್ಕಳ ತಾಯಿಯೊಬ್ಬರು ದಾಖಲಿಸಿದ್ದ ದೂರನ್ನು ತಿರಸ್ಕರಿಸಿದ್ದು, ದೂರುದಾರೆಯ ವೈವಾಹಿಕ ಸ್ಥಿತಿಗತಿಯೇ ಮದುವೆ ಭರವಸೆಯ ಕಲ್ಪನೆಯನ್ನು ಅಸಂಭವಗೊಳಿಸುತ್ತದೆ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತೀರ್ಪು ನೀಡಿದೆ.

ಪ್ರಕರಣದ ಹಿನ್ನೆಲೆ: 2019ರ ಅಕ್ಟೋಬರ್‌ನಲ್ಲಿ ದೂರುದಾರೆ ಮನೆ ಮಾಲೀಕರೊಂದಿಗೆ ಭೋಗ್ಯ ಹಣ ವಾಪಸಾತಿ ವಿವಾದದಲ್ಲಿ ದೂರು ದಾಖಲಿಸಲು ಮಹದೇವಪುರ ಠಾಣೆಗೆ ತೆರಳಿದ್ದರು. ಆಗ ಠಾಣೆಯ ಪೇದೆ ಫಕೀರಪ್ಪ ಅವರ ಮೊಬೈಲ್ ಸಂಖ್ಯೆ ಪಡೆದು ಸಂಪರ್ಕ ಆರಂಭಿಸಿದ್ದರು. ಇಬ್ಬರ ನಡುವೆ ಸಂದೇಶ ವಿನಿಮಯದಿಂದ ಪ್ರೀತಿ ಬೆಳೆಯಿತು. ಆ ನಂತರ ದೈಹಿಕ ಸಂಬಂಧ ಏರ್ಪಟ್ಟು, ಸುಮಾರು ಎರಡೂವರೆ ವರ್ಷಗಳ ಕಾಲ ಮುಂದುವರಿದಿತ್ತು. 2022ರ ಅಕ್ಟೋಬರ್ 15ರಂದು ದೂರುದಾರೆ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿ, ಫಕೀರಪ್ಪ ಮದುವೆಯಾಗುವುದಾಗಿ ಭರವಸೆ ನೀಡಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿದ್ದರು. ನ್ಯಾಯಾಲಯದ ಆದೇಶದ ಮೇರೆಗೆ ಪೊಲೀಸರು ತನಿಖೆ ನಡೆಸಿ, ಐಪಿಸಿ ಸೆಕ್ಷನ್ 376 (ಅತ್ಯಾಚಾರ), 323 (ಸ್ವಯಂಪ್ರೇರಿತ ನೋವು), 417 (ವಂಚನೆ), 506 (ಜೀವ ಬೆದರಿಕೆ) ಅಡಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಆದರೆ ಫಕೀರಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ, ದೋಷಾರೋಪ ಮತ್ತು ವಿಚಾರಣೆ ರದ್ದತಿಗೆ ಮನವಿ ಮಾಡಿದ್ದರು. ದೂರುದಾರೆ 2012ರಲ್ಲಿ ಮದುವೆಯಾಗಿ ಮೂವರು ಮಕ್ಕಳಿದ್ದಾರೆ. ಪತಿಯೊಂದಿಗೆ ಅನ್ಯೋನ್ಯತೆ ಇಲ್ಲದಿದ್ದರೂ, ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದಿದ್ದರು. ಅಲ್ಲದೆ ಆದರೆ ಮದುವೆಯಾಗದ ಸ್ಥಿತಿಯಲ್ಲಿಲ್ಲ, ಆದ್ದರಿಂದ ಮದುವೆಯಾಗುತ್ತೇನೆ ಎಂಬ ಭರವಸೆಯೇ ಅಸಂಭವ ಎಂದು ವಾದಿಸಿದ್ದರು.

3 ವರ್ಷಗಳ ಕಾಲ ಇಬ್ಬರ ನಡುವೆ ಸಮ್ಮತಿಯ ಸಂಬಂಧ ಹೊಂದಿದ್ದರು. ಪ್ರತಿಯೊಂದು ಮುರಿದ ಭರವಸೆಯೂ ಸುಳ್ಳು ಭರವಸೆಯಲ್ಲ. ಪ್ರತಿಯೊಂದು ವಿಫಲ ಸಂಬಂಧವನ್ನೂ ಅತ್ಯಾಚಾರವೆಂದು ಪರಿಗಣಿಸಲಾಗುವುದಿಲ್ಲ, ಎಂದು ಪೀಠ ಸ್ಪಷ್ಟಪಡಿಸಿದೆ. ತೀರ್ಪಿನಲ್ಲಿ ಹೈಕೋರ್ಟ್ ಸುಪ್ರೀಂಕೋರ್ಟ್ ನೀಡಿದ ಅನೇಕ ತೀರ್ಪುಗಳನ್ನು ಉಲ್ಲೇಖಿಸಿತು. ಸಮ್ಮತಿಯ ಸಂಬಂಧ ಮತ್ತು ಅತ್ಯಾಚಾರ ನಡುವೆ ಸ್ಪಷ್ಟ ವ್ಯತ್ಯಾಸವಿದೆ. ಸಮ್ಮತಿಯಲ್ಲಿ ನಿರ್ಮಿತವಾದ ದೈಹಿಕ ಸಂಬಂಧವನ್ನು ನಂತರ ಅತ್ಯಾಚಾರ ಎಂದು ಪರಿವರ್ತಿಸಲಾಗುವುದಿಲ್ಲ ಎಂಬ ನಯೀಮ್ ಅಹ್ಮದ್ ಹಾಗೂ ಅಮೋಲ್ ಭಗವಾನ್ ನೇಹುಲ್ ಪ್ರಕರಣಗಳ ಉಲ್ಲೇಖ ಹೈಕೋರ್ಟ್ ನೀಡಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸಹಕಾರ ಸಂಘಗಳ ಉಪನಿಬಂಧಕರು(ನಿ: 441), ಸೌಹಾರ್ದ ಸಹಕಾರಿಗಳ ದವಾ ಪಂಚಾಯಿತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಸೌಹಾರ್ದ ಸಹಕಾರ ಸೌಧ, 68, 1ನೇ ಮಹಡಿ, 17&18ನೇ ಅಡ್ಡ ರಸ್ತೆ, ಮಧ್ಯೆ ಮಾರ್ಗೋಸಾ ರಸ್ತೆ, ಬೆಂಗಳೂರು-560055

[illegible]

ಮಾನ್ಯ [illegible] ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ [illegible]

ಸಿ.ಮಿಸ್.ನಂ. 775/2024

[illegible]

ಸಾರ್ವಜನಿಕ ಸೂಚನೆ

ನಾನು ರೋಹಿಣಿ ಟಿ.ಎಸ್., ನಂಜಪ್ಪ ಟಿ.ಸಿ. ಅವರ ಪುತ್ರಿ, 26/6, 2ನೇ ಕ್ರಾಸ್, 1ನೇ ಬಿ ಮುಖ್ಯ ರಸ್ತೆ, ಸುಲ್ತಾನಪಾಳ್ಯ, ವಿಭಾಗ ಸಂಖ್ಯೆ 46, ಗಣೇಶ್ ಬ್ಲಾಕ್, ಬೆಂಗಳೂರು ಉತ್ತರ ಜಿಲ್ಲೆ ಎಂಬ ವಿಳಾಸದಲ್ಲಿ ವಾಸಿಸುತ್ತಿದ್ದೇನೆ. ನಾನು ಈ ಮೂಲಕ ಘೋಷಿಸುತ್ತೇನೆ: ವಿದ್ಯಾನಗರ, ತುರುವೇಕೆ ಪಟ್ಟಣ, ತುಮಕೂರು ಜಿಲ್ಲೆ, ಕರ್ನಾಟಕ - 572227 ಎಂಬ ಸ್ಥಳದಲ್ಲಿರುವ ಕೆಳಕಂಡ ಆಸ್ತಿಗೆ ಸಂಬಂಧಿಸಿದ ಮೂಲ ಕ್ರಯಪತ್ರ ಕಳೆದುಹೋಗಿದೆ:
ಸೈಟ್ ಸಂಖ್ಯೆ: 24 513 270 ಅಸೆಸ್ಮೆಂಟ್ ಸಂಖ್ಯೆ: 1801 ವಾರ್ಡ್ ಸಂಖ್ಯೆ: 5 ದಾಖಲೆ ಸಂಖ್ಯೆ: 2877 ದಾಖಲಾದ ದಿನಾಂಕ: 23-03-2001 ದಾಖಲಾದ ಸ್ಥಳ: ಉಪನೋಂದಣಿ ಕಚೇರಿ, ತುರುವೇಕೆ
ನಾನು ಈ ದಾಖಲೆಗಾಗಿ ಬಹುಶ್ರಮಪಟ್ಟು ಹುಡುಕಿದರೂ, ಅದು ಪತ್ತೆಯಾಗಿಲ್ಲ. ಆದ್ದರಿಂದ, ನಾನು ಸಂಬಂಧಿತ ಉಪನೋಂದಣಿ ಕಚೇರಿಯಿಂದ ಪ್ರಮಾಣಿತ ನಕಲು ಪಡೆಯಲು ಉದ್ದೇಶಿಸುತ್ತಿದ್ದೇನೆ. ಯಾರಾದರೂ ಈ ದಾಖಲೆ ಪತ್ತೆಹಚ್ಚಿದ್ದರೆ ಅಥವಾ ಯಾವುದೇ ಆಕ್ಷೇಪಣೆ ಹೊಂದಿದ್ದರೆ, ದಯವಿಟ್ಟು ತಕ್ಷಣ ನನ್ನನ್ನು ಸಂಪರ್ಕಿಸಬೇಕು.
ಸಂಪರ್ಕ: 96118 59161
ಇಮೇಲ್: info.rightwayadvisors@gmail.com

PUBLIC NOTICE

ಇದರಿಂದ ಸಾರ್ವಜನಿಕರಿಗೆ ತಿಳಿಸಲಾಗುವುದು: ಖಾತೆ ನಂ. 1031/5 (BBMP PID NO. 83-19-62) ಹೊಂದಿರುವ ಆಸ್ತಿ ಮಾಲೀಕರು ನಾವು ಎಂಬುದಾಗಿ ತಿಳಿಸಲಾಗುತ್ತದೆ. ಈ ಆಸ್ತಿ 1264 ಚ.ಅಡಿ ವಿಸ್ತೀರ್ಣ ಹೊಂದಿದ್ದು, "H.A. Sanitary Board, ತಿಪ್ಪಸಂದ್ರ ಗ್ರಾಮ, ಬೆಂಗಳೂರು" ವ್ಯಾಪ್ತಿಯಲ್ಲಿದೆ.
ಈ ಆಸ್ತಿಗೆ ಸಂಬಂಧಿಸಿದ ಮಾರಾಟದ ದಾಖಲೆ 19.06.1995 ರಂದು Amit Goel (D.D. Goel ಅವರ ಪುತ್ರ) ಅವರ GPA ಹೋಲ್ಡರ್ Vinit Goel ಮೂಲಕ Alfred Arambhan ಅವರಿಗೆ ಮಾರಾಟ ಮಾಡಲಾಗಿದೆ. ಈ ಮಾರಾಟದ ದಾಖಲೆ ಸಂಖ್ಯೆ 2653/1995-96, ಬೆಂಗಳೂರು ಉಪ- ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಲಾಗಿದೆ. ಈ ದಾಖಲೆ ಕಳೆದುಹೋಗಿದ್ದು ಪತ್ತೆಯಾಗಿಲ್ಲ.
ಈ ಸಂಬಂಧ, ಇದೇ ವಿಷಯದ ಕುರಿತು ಸಾರ್ವಜನಿಕ ಸೂಚನೆ 13.10.2015 ಪ್ರಕಟಿಸಲಾಗಿತ್ತು. ಈ ಅವಧಿಯಲ್ಲಿ ಯಾರಿಂದಲೂ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಸಲ್ಲಿ ಸಲಾಗಿಲ್ಲ.
ಆದರಿಂದ, ಈ ಆಸಿಗೆ ಸಂಬಂಧಿಸಿದ ಯಾವುದೇ ಹಕ್ಕು ಆಕ್ಷೇಪಣೆಗಳಿಲವೆಂದು ಪರಿಗಣಿಸಲಾಗಿದೆ.

ಸಹಕಾರ ಸಂಘಗಳ ಉಪನಿಬಂಧಕರು(ನಿ: 441), ಸೌಹಾರ್ದ ಸಹಕಾರಿಗಳ ದವಾ ಪಂಚಾಯಿತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಸೌಹಾರ್ದ ಸಹಕಾರ ಸೌಧ, 68, 1ನೇ ಮಹಡಿ, 17&18ನೇ ಅಡ್ಡ ರಸ್ತೆ, ಮಧ್ಯೆ ಮಾರ್ಗೋಸಾ ರಸ್ತೆ, ಬೆಂಗಳೂರು-560055

ವಾದಿ : ಮುಖ್ಯ ಕಾರ್ಯ ನಿರ್ವಾಹಕರು ಶ್ರೀ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ನಂ.589, 23 ,12ನೇ ಕ್ರಾಸ್ 37ನೇ ಮುಖ್ಯರಸ್ತೆ, ಬೆಂಗಳೂರು -560098
ಪ್ರತಿವಾದಿಗಳು :
1. ವ್ಯಾಜ್ಯ ಸಂಖ್ಯೆ ಡಿ ಆರ್ ಡಿ/ಕರಾ ಸೌ ಸಮಂಸ ನಿ /528/2025-26- ಶ್ರೀ . ಸಂ. ದೀಶ್.ಬಿ ಎಸ್ 2ನೇ ವಾರ್ಡ 1ನೇ ಮೈನ್ 6ನೇ ಕ್ರಾಸ್ ರಾಜಕುಮಾರ್ ರಸ್ತೆ ವಿಜಯನಗರ ರಮನಗ ಬೆಂಗಳೂರು ಗ್ರಾಮಂತರ-562159
2. ವ್ಯಾಜ್ಯ ಸಂಖ್ಯೆ ಡಿ ಆರ್ ಡಿ/ಕರಾ ಸೌ ಸಮಂಸ ನಿ /528/2025-26-ಶ್ರೀಮತಿ ಅಶ್ವಿನಿ ಅರ್ 29/3 ರಾಮನಗರ [illegible]

[illegible]

ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಕಡ್ಡಾಯ

ಬೆಂಗಳೂರು: ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಶಾಲಾ ಕಟ್ಟಡದ ಸುರಕ್ಷತೆ ಪ್ರಮಾಣ ಪತ್ರ, ನಕ್ಷೆ ಅನುಮೋದನೆ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಕಡ್ಡಾಯಗೊಳಿಸಿದ್ದ ಸರಕಾರದ ಕ್ರಮ ಎತ್ತಿಹಿಡಿದಿದ್ದ ಏಕ ಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಸರಕಾರದ ಸುತ್ತೋಲೆ ಎತ್ತಿಹಿಡಿದ್ದ ಏಕ ಸದಸ್ಯ ಪೀಠದ ಕ್ರಮ ಪ್ರಶ್ನಿಸಿ ಅನುದಾನ ರಹಿತ ಮಾನ್ಯತೆ ಪಡೆದ ಶಾಲೆಗಳ ಸಂಘದ ಕಾರ್ಯದರ್ಶಿ ಪ್ರಭಾಕರ ಅರಸ್ ಸೇರಿದಂತೆ ಮತ್ತಿತರ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅಲ್ಲದೆ, ಯಾವ ಕಟ್ಟಡಗಳಲ್ಲಿ ಸರಕಾರದ ಸುತ್ತೋಲೆ ಮತ್ತು ಏಕ ಸದಸ್ಯಪೀಠದ ಆದೇಶವನ್ನು ಜಾರಿ ಮಾಡಲಾಗುವುದಿಲ್ಲ ಎಂಬ ವಿವರವನ್ನು ಸಂಘದ ಸದಸ್ಯರ ಸಹಿ ಹೊಂದಿರುವಂತಹ ವಿವರವಾದ ಪ್ರಮಾಣ ಪತ್ರ ಸಲ್ಲಿಸಬೇಕು ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚನೆ ನೀಡಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಹೈಕೋರ್ಟ್ ಮುಂದೂಡಿತು. ವಿಚಾರಣೆ ವೇಳೆ, ಅರ್ಜಿದಾರರ ಪರ ವಕೀಲರು, ಸುಪ್ರೀಂಕೋರ್ಟ್ ಆದೇಶದಂತೆ ಶಾಲೆಗಳ ಮಾನ್ಯತೆ ನವೀಕರಣ ಮಾಡುವುದಕ್ಕೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಕುರಿತಂತೆ ಸಂಬಂಧ ಪಟ್ಟ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದುಕೊಂಡಿರಬೇಕು. ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ವಿಭಾಗ ನಿಗದಿಪಡಿಸಿರುವ ಕಟ್ಟಡಗಳ ಸುರಕ್ಷತೆಯ ಮಾರ್ಗಸೂಚಿಗಳ ಅಡಿ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಹೊಂದಿರಬೇಕು ಎಂದು ಸರಕಾರ(ಶಿಕ್ಷಣ ಇಲಾಖೆ) ಸುತ್ತೋಲೆ ಹೊರಡಿತ್ತು. ಈ ಸುತ್ತೋಲೆಯ ಪ್ರಕಾರ ಶಾಲೆಗಳ ಮಾನ್ಯತೆಯನ್ನು ನವೀಕರಣ ಮಾಡುವ ಸಂದರ್ಭದಲ್ಲಿ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿದ್ದು, ಇದು ಕರ್ನಾಟಕ ಶಿಕ್ಷಣ ಕಾಯಿದೆಯ ಸೆಕ್ಷನ್ 145ಕ್ಕೆ ತದ್ವಿರುದ್ಧವಾಗಿದೆ. ಅರ್ಜಿದಾರ ಸಂಘಟನೆ ಅಧೀನದ ಶಾಲೆಗಳು ಹಲವು ವರ್ಷಗಳಿಂದ ಕಾರ್ಯಾಚರಣೆ ಮಾಡುತ್ತಿವೆ ಎಂದು ತಿಳಿಸಿದರು.

ಪ್ರಕರಣದ ಹಿನ್ನೆಲೆ

ಸುಪ್ರೀಂಕೋರ್ಟ್ ನಿರ್ದೇಶನದಂತೆ ರಾಜ್ಯ ಸರಕಾರ 2022ರ ಜೂನ್ 6ರಂದು ಸುತ್ತೋಲೆ ಹೊರಡಿಸಿ, ಪ್ರಸ್ತುತ ಕಾರ್ಯಾಚರಣೆ ಮಾಡುತ್ತಿರುವ ಎಲ್ಲ ಖಾಸಗಿ ಶಾಲೆಗಳು ಮಾನ್ಯತೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವಾಗ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಎಂದು ನಿರ್ದೇಶನ ನೀಡಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರ ಸಂಘಟನೆ ಸೇರಿದಂತೆ ಮತ್ತಿತರರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅಂತಿಮ ಅಧಿಸೂಚನೆ ಪ್ರಕಟಿಸಲು ಸರಕಾರಕ್ಕೆ ಸುಪ್ರೀಂ ಅವಕಾಶ

ಜಿಬಿಎ ಕ್ಷೇತ್ರ ವಿಂಗಡಣೆಗೆ 15 ದಿನ ಗಡುವು

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲ ಐದು ಪಾಲಿಕೆಗಳ ಕ್ಷೇತ್ರ ಪುನರ್ ವಿಂಗಡಣೆಗೆ ಅಂತಿಮ ಅಧಿಸೂಚನೆ ಪ್ರಕಟಿಸಲು ರಾಜ್ಯ ಸರಕಾರಕ್ಕೆ ಸುಪ್ರೀಂಕೋರ್ಟ್ 15 ದಿನಗಳ ಕಾಲಾವಕಾಶ ನೀಡಿದೆ. ಜಿಬಿಎ ಚುನಾವಣೆ ಸಂಬಂಧ ಕಾಂಗ್ರೆಸ್ ಮುಖಂಡ ಎಂ.ಶಿವರಾಜು ಮತ್ತು ಇತರರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಸೂರ್ಯಕಾಂತ್, ಉಜ್ಜಲ್ ಭುಯಾನ್ ಮತ್ತು ಜೋಯ್ಮಲ್ಯ ಬಾಗ್ಚಿ ಅವರ ನೇತೃತ್ವದ ತ್ರಿಸದಸ್ಯ ಪೀಠ ಸಮಯವಕಾಶ ನೀಡಿತು. ರಾಜ್ಯ ಸರಕಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಮತ್ತು ಅಡ್ವೋಕೆಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ಅಧಿಕಾರಿಗಳನ್ನು ನೇಮಿಸಿದ್ದರಿಂದ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಅಧಿಸೂಚನೆ ಪ್ರಕಟಿಸಲಾಗಿಲ್ಲ, ಈಗ ಎಲ್ಲಾ ಸಿದ್ಧತೆಗಳಾಗಿದ್ದು, ಇನ್ನು ನ.15ರೊಳಗೆ ಕ್ಷೇತ್ರ ಪುನರ್ ವಿಂಗಡಣೆಯ ಅಂತಿಮ ಅಧಿಸೂಚನೆ ಮತ್ತು ಆನಂತರ ಡಿ.15ರ ಒಳಗೆ ವಾರ್ಡ್ ಮೀಸಲಾತಿ ಅಂತಿಮ ಅಧಿಸೂಚನೆ ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದರು.

ವಾದ-ಪ್ರತಿವಾದವೇನು?

ರಾಜ್ಯ ಚುನಾವಣಾ ಆಯೋಗ ಪ್ರತಿನಿಧಿಸಿದ್ದ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರು ಆಯೋಗವು ಚುನಾವಣಾ ಪ್ರಕ್ರಿಯೆ ಆರಂಭಿಸಿದ್ದು, ಜಿಲ್ಲಾ ಮತ್ತು ಹೆಚ್ಚುವರಿ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಅದರೂ, ಚುನಾವಣೆ ನಡೆಸಲು ಆಯೋಗಕ್ಕೆ ಎರಡರಿಂದ ಮೂರು ತಿಂಗಳು ಬೇಕಾಗುತ್ತದೆ ಎಂದು ವಾದಿಸಿದರು. ಅರ್ಜಿದಾರರ ಪರ ವಕೀಲರು ಬಿಬಿಎಂಪಿಗೆ ಚುನಾವಣೆ ನಡೆದು ಹಲವು ವರ್ಷಗಳಾಗಿವೆ. ಸರಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ವಿಚಾರಣೆ ಬಳಿಕ ಪೀಠವು ಕ್ಷೇತ್ರ ಪುನರ್ ವಿಂಗಡಣೆ ಅಂತಿಮ ಅಧಿಸೂಚನೆ ಪ್ರಕಟಿಸಲು ನ.15ರವರೆಗೆ ಮತ್ತು ವಾರ್ಡ್ ಮೀಸಲಾತಿ ಪ್ರಕಟಿಸಲು ಡಿ.15ರವರೆಗೆ ರಾಜ್ಯ ಸರಕಾರಕ್ಕೆ ಕಾಲಾವಕಾಶ ಕಲ್ಪಿಸಿ, ವಿಚಾರಣೆ ಮುಂದೂಡಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾನುವಾರ ಮುಂಬೈನಲ್ಲಿ ನಡೆದ ಫೈನಲ್‌ನಲ್ಲಿ ಏಕದಿನ ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿರುವ ಭಾರತ ಮಹಿಳಾ ತಂಡಕ್ಕೆ ಬಿಸಿಸಿಐ 51 ಕೋಟಿ ರು. ಘೋಷಿಸಿದೆ. ಹರ್ಮನ್‌ಪ್ರೀತ್ ಕೌರ್ ಪಡೆಯ ಸಾಧನೆಗೆ ದೇಶಾದ್ಯಂತ ಅಭಿನಂದನೆಗಳ ಹೊಳೆ ಹರಿದಿದೆ.

ಸೊಂಪಾದ ಪುಟಗಳು

ಒಳಗಿದ್ದ ಆರು ಮಂದಿಯಲ್ಲಿ ಹೇಳೋರ್‍ಯಾರು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಪುಟಿನ್ ಹಿಂದಿನ ದೈತ್ಯ ಶಕ್ತಿ ಯಾರು ಗೊತ್ತಾ?

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನಮಗೆ ಉಪದೇಶಗಳು ಬೇಕಿಲ್ಲ. ಕಾರಣ ಮೂರು ಜೀವನಕ್ಕೆ ಸಾಕಾಗುವಷ್ಟು ಉಪದೇಶಗಳನ್ನು ಕೇಳಿರುತ್ತೇವೆ. ಈ ಎಲ್ಲ ಉಪದೇಶಗಳನ್ನು ನೆನಪು ಮಾಡಿಕೊಂಡು ಆಯಾ ಸನ್ನಿವೇಶಕ್ಕೆ ಅನುಗುಣವಾಗಿ ಅವುಗಳನ್ನು ಜಾರಿಗೊಳಿಸಿದರೆ ಸಾಕು, ನಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬಹುದು.

ವಕ್ರತುಂಡೋಕ್ತಿ

ವಿಮಾನ ನೆಲದ ಮೇಲೆ ನಿಂತಾಗ ಅದರೊಳಗಿರುವವರಿಗೆ ಇರುವೆಗಳು ಕಾಣಿಸುವುದಿಲ್ಲ. ಹಾರುತ್ತಿರುವಾಗ ಮನುಷ್ಯರೂ ಕಾಣಿಸುವುದಿಲ್ಲ.

ತಿಮರೋಡಿ ಕೋರ್ಟ್‌ನಲ್ಲಿ ಪತ್ತೆ

ಮಂಗಳೂರು: ಕಳೆದ 50 ದಿನಗಳಿಂದ ನಾಪತ್ತೆಯಾಗಿದ್ದ ಬುರುಡೆ ಗ್ಯಾಂಗ್‌ನ ಮಹೇಶ್ ಶೆಟ್ಟಿ ತಿಮರೋಡಿ ಕೊನೆಗೂ ಪ್ರತ್ಯಕ್ಷವಾಗಿದ್ದಾರೆ. ಸೋಮವಾರ (ನ.3) ಬೆಳ್ತಂಗಡಿ ಕೋರ್ಟ್‌ಗೆ ಹಾಜರಾಗಿದ್ದು, ವಾರಂಟ್ ರೀಕಾಲ್ ಮಾಡಿ ತೆರಳಿದ್ದಾರೆ. ಕಳೆದ ವರ್ಷ ಉಜಿರೆಯಲ್ಲಿ ಸೌಜನ್ಯಾ ಪರವಾಗಿ ಅನಧಿಕೃತ ಬ್ಯಾನರ್ ಹಾಕಿದ್ದ ಹಿನ್ನೆಲೆಯಲ್ಲಿ ತಿಮರೋಡಿ ಸೇರಿ 6 ಮಂದಿಯ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಫನ್‌ತರಂಗ

- ರಘುಪತಿ ಶೃಂಗೇರಿ -

ಬಿಹಾರದಲ್ಲಿ ಚುನಾವಣಾ ರ‍್ಯಾಲಿ ಮುಗಿಸಿ ಮೀನು ಹಿಡಿದ ಕೈ ಪಕ್ಷದ ನಾಯಕ ಸುದ್ದಿ



ರೇಣುಕಾಸ್ವಾಮಿ ಹತ್ಯೆ ಪ್ರಕರಣ: ಬೆಂಗಳೂರಿನ ಸೆಷನ್ಸ್ ನ್ಯಾಯಾಲಯದಲ್ಲಿ ಪೊಲೀಸರಿಂದ ದೋಷಾರೋಪ ಸಲ್ಲಿಕೆ
ಕೊಲೆ, ಅಪಹರಣ, ಅಕ್ರಮಕೂಟ ಆರೋಪ | ಕೊಲೆ ಮಾಡಿಲ್ಲ ಎಂದ ದರ್ಶನ್, ಪವಿತ್ರಾ | ನ.10ಕ್ಕೆ ಮತ್ತೆ ವಿಚಾರಣೆ

ದರ್ಶನ್ ಹತ್ಯೆ ಆರೋಪಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯಾದ್ಯಂತ ತೀವ್ರ ಸಂಚಲನ ಸೃಷ್ಟಿಸಿದ್ದ ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸರು ಸೋಮವಾರ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ನಟ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಎಲ್ಲ 17 ಆರೋಪಿಗಳ ವಿರುದ್ಧ 64ನೇ ಸೆಷನ್ಸ್ ನ್ಯಾಯಾಲಯದಲ್ಲಿ ಕೊಲೆ, ಪಿತೂರಿ, ಅಪಹರಣ, ಅಕ್ರಮಕೂಟ ಆರೋಪಗಳನ್ನು ಹೊರಿಸಲಾಗಿದೆ. ಪ್ರಕರಣದಲ್ಲಿರುವ ಎಲ್ಲಾ ಆರೋಪಿಗಳು ತಮ್ಮ ಮೇಲಿನ ಆರೋಪಗಳನ್ನು ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ನ್ಯಾಯಾಲಯ ಪ್ರಕರಣದ ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಿದೆ.

ಸೋಮವಾರ ಕಲಾಪ ಆರಂಭವಾಗುತ್ತಿದ್ದಂತೆ ನ್ಯಾಯಾಲಯದ ಕೊಠಡಿಯು ವಕೀಲರು ಮತ್ತು ಸಾರ್ವಜನಿಕರಿಂದ ಕಿಕ್ಕಿರಿದು ತುಂಬಿತ್ತು. ಈ ಜನದಟ್ಟಣೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶ ಐ.ಪಿ.ನಾಯಕ್, ಇಲ್ಲಿ (ಕೋರ್ಟ್) ಇಷ್ಟೊಂದು ಜನರ ನಡುವೆ ಆರೋಪ ಹೊರಿಸುವುದು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು. ಪ್ರಕರಣಕ್ಕೆ ಸಂಬಂಧವಿಲ್ಲದ ವಕೀಲರು ತಕ್ಷಣವೇ ಕೊಠಡಿಯಿಂದ ಹೊರ ಹೋಗುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಇದೇ ಪರಿಸ್ಥಿತಿ ಮುಂದುವರಿದರೆ ವಿಚಾರಣೆ ಮುಂದೂಡಲಾಗುವುದು ಮತ್ತು ಅಗತ್ಯವಿದ್ದರೆ ರಹಸ್ಯ ವಿಚಾರಣೆ ನಡೆಸುವುದಾಗಿಯೂ ನ್ಯಾಯಾಧೀಶರು ಬಲವಾದ ಎಚ್ಚರಿಕೆ ನೀಡಿದರು.

ಆರೋಪಿಗಳು ಸಾಲಾಗಿ ನಿಂತ ಬಳಿಕ ನ್ಯಾಯಾಧೀಶರು ಎಲ್ಲಾ ಆರೋಪಿಗಳ ಹೆಸರನ್ನು ಹೇಳಿ ಹಾಜರಾಗಿದ್ದಾರೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿದರು. ನಂತರ ಪೊಲೀಸರು ಸಲ್ಲಿಸಿದ್ದ ದೋಷಾರೋಪವನ್ನು ನಿಧಾನವಾಗಿ ಸ್ಪಷ್ಟವಾಗಿ ಓದತೊಡಗಿದರು. ಈ ವೇಳೆ ಎಲ್ಲರಿಗೂ ಕೇಳುತ್ತಿದೆ ಅಲ್ಲವೇ ಎಂದು ಪ್ರಶ್ನಿಸಿದರು. ಒಂದು ವೇಳೆ ಕೇಳದೇ ಇದ್ದರೆ ಮತ್ತೆ ಕೇಳಿ ಎಂದು ನ್ಯಾಯಾಧೀಶರು ಸೂಚಿಸಿದರು.

ಪವಿತ್ರಾಗೌಡಗೆ ಸಂದೇಶ ಬಂದ ವಿಚಾರ, ಅಪಹರಣಕ್ಕೆ ನಡೆಸಿದ ಸಂಚು, ಅಕ್ರಮಕೂಟ, ಒಳಸಂಚು, ಅಪಹರಣ, ಮಾಡಿರುವ ಬಗ್ಗೆ ನ್ಯಾಯಾಧೀಶರು ಸಾರಾಂಶ ಓದಿದರು. → 4

ಏನೇನಾಯ್ತು?

- ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಸೋಮವಾರ ಪೊಲೀಸರಿಂದ ದೋಷಾರೋಪ ಸಲ್ಲಿಕೆ
- ಚಾರ್ಜ್‌ಶೀಟ್‌ನಲ್ಲಿ 17 ಆರೋಪಿಗಳ ವಿರುದ್ಧದ ಆರೋಪಗಳನ್ನು ಓದಿದ ಸೆಷನ್ಸ್ ಕೋರ್ಟ್ ನ್ಯಾಯಾಧೀಶರು
- ಭಾರೀ ಪ್ರಮಾಣದಲ್ಲಿ ಸೇರಿದ್ದ ವಕೀಲರ ನೋಡಿ ನ್ಯಾಯಾಧೀಶರು ಗರಂ, ಹೊರಹೋಗಲು ಸೂಚನೆ
- ತಮ್ಮ ವಿರುದ್ಧದ ಸಂಪೂರ್ಣ ದೋಷಾರೋಪವನ್ನು ನಿರಾಕರಿಸಿದ ಎಲ್ಲ 17 ಆರೋಪಿಗಳು

ಬಿಹಾರ ಚುನಾವಣೆ ಬಳಿಕ ನ.15ಕ್ಕೆ ಸಿದ್ದು ದಿಲ್ಲಿಗೆ
ಮೇಕೆದಾಟು: 5ಕ್ಕೆ ಡಿಕೆಶಿ ರಾಷ್ಟ್ರ ರಾಜಧಾನಿಗೆ

ಸಂಪುಟ ಪುನಾರಚನೆ: ದೆಹಲಿಯತ್ತ (ಡಿ)ಸಿಎಂ

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣೆಗೆ ಕ್ಷಣಗಣನೆ ಆರಂಭವಾಗಿರುವ ಹೊತ್ತಿನಲ್ಲಿಯೇ ಕರ್ನಾಟಕ ಕಾಂಗ್ರೆಸ್‌ನಲ್ಲಿ ಸಂಪುಟ ಪುನಾರಚನೆಯ ಬಿಸಿ ತೀವ್ರವಾಗಿದೆ. ಬಿಹಾರ ವಿಧಾನಸಭಾ ಚುನಾವಣೆಯ ಬೆನ್ನಲ್ಲೇ ಸಚಿವ ಸಂಪುಟ ಸರ್ಕಸ್ ಆರಂಭವಾಗುವುದು ಖಚಿತ.

ಬಿಹಾರ ಚುನಾವಣೆಯ ಫಲಿತಾಂಶದ ಮರುದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ಯಕಾರ್ಯನಿಮಿತ್ತ ದೆಹಲಿಗೆ ಹೋಗುವುದು ಖಚಿತವಾಗಿತ್ತು. ಈ ಭೇಟಿಯ ವೇಳೆಯೇ ಸಚಿವ ಸಂಪುಟ ಪುನಾರಚನೆಗೆ ಒಪ್ಪಿಗೆ ಪಡೆಯುವುದು ಖಚಿತ ಎನ್ನಲಾಗುತ್ತಿದೆ. ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸಂಪುಟ ಪುನಾರಚನೆ ಸಂಬಂಧ ಚರ್ಚಿಸುವ ಸಂಬಂಧ ದೆಹಲಿಗೆ ತೆರಳುವುದಾಗಿ ಸ್ಪಷ್ಟಪಡಿಸಿದ್ದಾರೆ. ಮೇಕೆದಾಟು ವಿಚಾರಣೆ ಹಿನ್ನೆಲೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಕೂಡ ನ.5ಕ್ಕೆ ದೆಹಲಿಗೆ ತೆರಳಿ ನಂತರ ಬಿಹಾರಕ್ಕೂ ಹೋಗಲಿದ್ದಾರೆ.

ಇನ್ನೂ ಹಲವು ನಾಯಕರು ದೆಹಲಿ ಪರೇಡ್ ನಡೆಸಲು ಸಿದ್ಧತೆ ನಡೆಸಿಕೊಂಡಿದ್ದಾರೆ. ಈ ನಡುವೆ ಸಚಿವ ಸಂಪುಟ ಪುನಾರಚನೆ ಬಗ್ಗೆ ಪಕ್ಷದ ಹೈಕಮಾಂಡ್ ಜತೆ ಚರ್ಚಿಸಲು ದೆಹಲಿಗೆ ತೆರಳುವುದಾಗಿ ಮೈಸೂರಿನಲ್ಲಿ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಪ್ರಶ್ನೆಗೆ ಮತ್ತೊಮ್ಮೆ ಸಿದ್ದರಾಮಯ್ಯ ಅಸಮಾಧಾನಗೊಂಡಿದ್ದು, ಇದನ್ನು ಹೈಕಮಾಂಡ್ ತೀರ್ಮಾನಿಸಲಿದೆ ಎಂದಿದ್ದಾರೆ.

ಜನರ ಅಭಿಪ್ರಾಯ ಏನೇ ಇದ್ದರೂ, ಹೈಕಮಾಂಡ್ ನಿರ್ಧಾರವೇ ಅಂತಿಮ. ಪಕ್ಷದ ವರಿಷ್ಠರು ಈ ಬಗ್ಗೆ ಏನೂ ಹೇಳಿಲ್ಲ. ಬಿಹಾರ ಚುನಾವಣೆಯ ನಂತರ ರಾಜ್ಯದಲ್ಲಿ ಸಂಪುಟ ಪುನಾರಚನೆಯ ಬಗ್ಗೆ ವರಿಷ್ಠರೊಂದಿಗೆ ಚರ್ಚಿಸಲಾಗುವುದು. ನ.15ರಂದು ನಾನು ಹೈಕಮಾಂಡ್ ಭೇಟಿಗಾಗಿ ದೆಹಲಿಗೆ ತೆರಳುತ್ತಿದ್ದೇನೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸದ್ಯಕ್ಕೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆಯಾಗಿಲ್ಲ. ಚರ್ಚೆಯಾದ ಸಮಯದಲ್ಲಿ ಆ ಬಗ್ಗೆ ಯೋಚಿಸೋಣ. ಸಂಪುಟ ಪುನಾರಚನೆ ಬಗ್ಗೆ ನನಗೆ ಮಾಹಿತಿ ಇಲ್ಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪರಸ್ಪರ ಭೇಟಿಯಾದ ಬಗ್ಗೆಯೂ ನನಗೆ ಮಾಹಿತಿಯಿಲ್ಲ. ಅಗತ್ಯಬಿದ್ದರೆ ದೆಹಲಿಗೆ ತೆರಳುವೆ.
-ಸತೀಶ್ ಜಾರಕಿಹೊಳಿ, ಸಚಿವ

ನಾಯಕತ್ವ ಬದಲಾವಣೆ ಸ್ಪಷ್ಟತೆ ಪಡೀತಾರಾ ಡಿಕೆಶಿ?

ಈ ನಡುವೆ ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ವಿಚಾರಣೆಗೆ ಸಂಬಂಧಿಸಿದಂತೆ 5ರಂದು ತೆರಳಲಿದ್ದು, ಬಳಿಕ ಬಿಹಾರ ಚುನಾವಣೆಗೆಂದು ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಬಿಹಾರಕ್ಕೆ ತೆರಳಿ ರಾಜ್ಯಕ್ಕೆ ವಾಪಸಾಗಲಿದ್ದಾರೆ. ಸಂಪುಟ ಪುನಾರಚನೆ ಮಾತ್ರವಲ್ಲದೇ, ನಾಯಕತ್ವ ಬದಲಾವಣೆ ಸಂಬಂಧಿಸಿದಂತೆ ಸ್ಪಷ್ಟ ಸಂದೇಶವನ್ನು ಪಡೆದುಕೊಂಡೇ ಬೆಂಗಳೂರಿಗೆ ವಾಪಸಾಗಲಿದ್ದಾರೆ ಎನ್ನಲಾಗಿದೆ. ಸಿದ್ದರಾಮಯ್ಯ, ಡಿಕೆಶಿ ಪ್ರತ್ಯೇಕವಾಗಿ ದೆಹಲಿಗೆ ತೆರಳಲಿದ್ದಾರೆ.

ತೆಲಂಗಾಣ: 24 ಸಾವು

ಹೈದರಾಬಾದ್: ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಚೆವೆಲ್ಲಾ ಬಳಿ ಸೋಮವಾರ ಬೆಳಗ್ಗೆ ಬಸ್ ಹಾಗೂ ಟ್ರಕ್ ಲಾರಿ ನಡುವೆ ಭೀಕರ ಅಪಘಾತ ಸಂಭವಿಸಿದ್ದು, 24 ಮಂದಿ ಸಾವಿಗೀಡಾಗಿ 20 ಮಂದಿ ಗಾಯಗೊಂಡಿದ್ದಾರೆ. ಮಿರ್ಜಗುಡದ ಹೈದರಾಬಾದ್-ವಿಜಯಪುರ ಹೆದ್ದಾರಿಯಲ್ಲಿ ಈ ದುರಂತ ನಡೆದಿದ್ದು, ಜಲ್ಲಿಕಲ್ಲು ತುಂಬಿದ್ದ ಟ್ರಕ್‌ವೊಂದು ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ತೆಲಂಗಾಣ ರಾಜ್ಯ ಸಾರಿಗೆ ನಿಗಮ (ಆರ್‌ಟಿಸಿ) ಬಸ್‌ಗೆ ಡಿಕ್ಕಿ ಹೊಡೆದಿದೆ. ಟ್ರಕ್ ಅನ್ನು ಭಾರೀ ವೇಗದಲ್ಲಿ ಚಾಲನೆ ಮಾಡಿರುವುದೇ ಈ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಸಂಘ ಸಂಚಲನಕ್ಕೆ ಅಸ್ತು

ಯಾದಗಿರಿ: ಜಿಲ್ಲೆಯ ಕೆಂಭಾವಿ ಪಟ್ಟಣದಲ್ಲಿ ಮಂಗಳವಾರ (ನ.4)ರಂದು ನಡೆಯಲಿರುವ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಕೊನೆಗೂ ಜಿಲ್ಲಾಧಿಕಾರಿಗಳು ಷರತ್ತುಬದ್ಧ ಅನುಮತಿ ಕೊಟ್ಟಿದ್ದಾರೆ. ಕಳೆದ ಒಂದು ವಾರದಿಂದ ಹಲವು ಗೊಂದಲಗಳಿಗೆ ಕಾರಣವಾಗಿದ್ದ ಕೆಂಭಾವಿ ಪಟ್ಟಣದಲ್ಲಿ ಆರ್‌ಎಸ್‌ಎಸ್ ಶತಾಬ್ದಿ ನಿಮಿತ್ತ ಹಮ್ಮಿಕೊಂಡಿದ್ದ ಪಥ ಸಂಚಲನಕ್ಕೆ ಡಿಎಸ್‌ಎಸ್ ಆಕ್ಷೇಪ ವ್ಯಕ್ತಪಡಿಸಿತ್ತು. ದಂಡ ಹಿಡಿದು ಪಥಸಂಚಲನ ಮಾಡಬಾರದೆಂದು ಪಟ್ಟು ಹಿಡಿದಿತ್ತು. ಹಿಂದೆ ನಡೆದ ಉಭಯ ಸಂಘಟನೆಗಳ ಶಾಂತಿ ಸಭೆಗಳು ವಿಫಲವಾಗಿದ್ದವು.

ಅನಿಲ್ ಆಸ್ತಿ ವಶ

ದೆಹಲಿ: ರಿಲಯನ್ಸ್ ಗ್ರೂಪ್ ಮುಖ್ಯಸ್ಥ ಅನಿಲ್ ಅಂಬಾನಿ ಒಡೆತನದ ಸಮೂಹ ಸಂಸ್ಥೆಗಳ ವಿರುದ್ಧ ಕೇಳಿ ಬಂದಿದ್ದ ಅಕ್ರಮ ಹಣ ವರ್ಗಾವಣೆ ಆರೋಪದ ತನಿಖೆ ಮುಂದುವರಿದಿದೆ. ಇದರ ಭಾಗವಾಗಿ ಸುಮಾರು 3 ಸಾವಿರ ಕೋಟಿ ರು.ಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿದೆ. ಅನಿಲ್ ಅಂಬಾನಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಇಡಿ ನಾಲ್ಕು ತಾತ್ಕಾಲಿಕ ಆದೇಶಗಳನ್ನು ಹೊರಡಿಸಿದೆ ಎಂದು ಹೇಳಲಾಗಿದೆ. ಈ ಆಸ್ತಿಗಳ ಪೈಕಿ ಮುಂಬೈನ ಪಾಲಿ ಹಿಲ್‌ನಲ್ಲಿರುವ ಅನಿಲ್ ನಿವಾಸ ಸೇರಿದೆ.

ಮೈಸೂರಿನ ಮುಕ್ತ ವಿಶ್ವದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸೋಮವಾರ ಸಂಜೆ ನಡೆದ 2018 ಮತ್ತು 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ನೀಡಿ ಗೌರವಿಸಿದರು.

ಬಾಗಲಕೋಟೆ: ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಗೆ ಕಲ್ಲೇಟು

ಕಬ್ಬು ಬೆಳೆಗಾರರ ಪ್ರತಿಭಟನೆ ವಿಷ ಸೇವಿಸಿ ರೈತ ಆಸ್ಪತ್ರೆಗೆ

ಬಾಗಲಕೋಟೆ/ಬೆಳಗಾವಿ: ಸತತ 6 ದಿನಗಳಿಂದ ಬಾಗಲಕೋಟೆ ಜಿಲ್ಲೆ ಜಮಖಂಡಿಯಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಪ್ರತಿಭಟನೆ ಸೋಮವಾರ ತೀವ್ರಗೊಂಡಿದೆ. ರೈತ ಲಕ್ಕಪ್ಪ ಗುಣದಾಳ (35) ಕೀಟನಾಶಕ ಸೇವಿಸಿದ ಪರಿಣಾಮ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಬ್ಬಿನ ಬಾಕಿ ಬಿಲ್ ಪಾವತಿ ಹಾಗೂ ಪ್ರಸಕ್ತ ಸಾಲಿಗೆ ಕಬ್ಬಿನ ದರ ನಿಗದಿಪಡಿಸಲು ರೈತರ ಆಗ್ರಹಿಸಿ ಜಮಖಂಡಿ ತಾಲೂಕಿನ ಸಿದ್ದಾಪುರ ಗ್ರಾಮದಲ್ಲಿರುವ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಹಾಗೂ ವಾಹನಗಳ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ ಘಟನೆ ಸೋಮವಾರ ಸಂಜೆ ಜರುಗಿದೆ.

ಅದೇ ರೀತಿ ಹಿಂದಿನ ಬಿಲ್ ಪಾವತಿಸಿ ಹಾಗೂ ಪ್ರಸಕ್ತ ಸಾಲಿನ ಕಬ್ಬಿನ ಬಿಲ್ ದರ ನಿಗದಿ ಪಡಿಸಲು ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದ್ದರು. ಕಾರ್ಖಾನೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸದ ಕಾರಣ ರೈತರು ತಾಳ್ಮೆ ಕಳೆದುಕೊಂಡಿದ್ದರು. ಈ ಸಂದರ್ಭದಲ್ಲಿ ಕಿಡಿಗೇಡಿಗಳು ಕಾರ್ಖಾನೆ, ಕಚೇರಿ ಹಾಗೂ ಕಾರ್ಖಾನೆಗೆ ಸೇರಿದ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಘಟನೆ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಂಡಿದ್ದಾರೆ. ನಂತರ ಶಾಂತ ಸ್ಥಿತಿಗೆ ಪ್ರತಿಭಟನೆ ಮರಳಿತು.

ಬರಗಾಲದ ಹೊತ್ತಿನಲ್ಲೇ ಆಸ್ತಿ ಜಪ್ತಿ, 238 ರೈತರಿಗೆ ನೋಟಿಸ್: ಆಕ್ರೋಶ

ಬ್ಯಾಂಕಿಗೆ ಮುಧೋಳ ರೈತರ ಮುತ್ತಿಗೆ

ಅಭಿಷೇಕ ಪಾಟೀಲ ಬಾಗಲಕೋಟೆ

ಬರಗಾಲದಿಂದ ತೀವ್ರ ದುಸ್ಥಿತಿಯಲ್ಲಿರುವ ಹೊತ್ತಿನಲ್ಲೇ, ರಾಷ್ಟ್ರೀಯ ಬ್ಯಾಂಕ್‌ಗಳು ಸಾಲ ಮರುಪಾವತಿ ಮಾಡದ ರೈತರ ಆಸ್ತಿ ಜಪ್ತಿಗೆ ಮುಂದಾಗಿದ್ದಾರೆ ಎಂದು ರೈತರು ಆರೋಪಿಸಿದ್ದಾರೆ. ಹಗಲಿರುಳೂ ದುಡಿಯುವ ರೈತ ಈ ಬಾರಿ ಸರಿಯಾಗಿ ಫಸಲು ಬರದೇ ಕಂಗಾಲಾಗಿದ್ದಾನೆ. ಇಂತಹ ಹೊತ್ತಿನಲ್ಲೇ 238 ರೈತರಿಗೆ ರಾಷ್ಟ್ರೀಯ ಬ್ಯಾಂಕೊಂದು ನೋಟಿಸ್ ಜಾರಿ ಮಾಡಿ, ಆಸ್ತಿ ಜಪ್ತಿಗೆ ಮುಂದಾಗಿದೆ. ಇದರಿಂದ ಕೆರಳಿರುವ ರೈತರು ಮುಧೋಳದಲ್ಲಿರುವ ಬ್ಯಾಂಕ್ ಶಾಖೆಗೆ ಮುತ್ತಿಗೆ ಹಾಕಿದ್ದಾರೆ.

ಹೊಸ ಬೆಳೆ ತೆಗೆಯಲು, ಕೌಟುಂಬಿಕ ಆರ್ಥಿಕ ಬಿಕ್ಕಟ್ಟು, ಮಕ್ಕಳ ವಿದ್ಯಾಭ್ಯಾಸ ಸೇರಿ ಅನೇಕ ಕಾರಣಗಳಿಂದ ರೈತರು ಸಾಲ ಮಾಡಿದ್ದಾರೆ. ಜಿಲ್ಲೆಯಲ್ಲಿನ ಎರಡು ವರ್ಷದ ಹಿಂದಿನ ಬರಗಾಲ, ಪ್ರಸಕ್ತ ವರ್ಷದ ಅನಿರೀಕ್ಷಿತ ಮಳೆಯಿಂದ ಸರಿಯಾಗಿ ಫಸಲು ಬಂದಿಲ್ಲ. ಇದರಿಂದ ರೈತರು ಆತಂಕದಲ್ಲಿದ್ದಾರೆ. ಇಂತಹ ಸ್ಥಿತಿಯಲ್ಲಿ ಮುಧೋಳದಲ್ಲಿರುವ ರಾಷ್ಟ್ರೀಕೃತ ಬ್ಯಾಂಕೊಂದು ಸಾಲ ಮರುಪಾವತಿ ಮಾಡದ ರೈತರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿ, ರೈತರಿಗೆ ನೋಟಿಸ್ ನೀಡುತ್ತಿದೆ ಎಂದು ಆರೋಪಿಸಲಾಗಿದೆ.

238 ರೈತರಿಗೆ ನೋಟಿಸ್ ಜಾರಿ: ಮುಧೋಳದ ರಾಷ್ಟ್ರೀಕೃತ ಬ್ಯಾಂಕ್ (ಕೆನರಾ) ಬ್ಯಾಂಕಿನಿಂದ ತಾಲೂಕಿನ ಸಾವಿರಾರು ರೈತರು ವಿವಿಧ ಉದ್ದೇಶಗಳಿಗಾಗಿ ಕೃಷಿ ಸಾಲ, ಬೆಳೆ ಸಾಲ ಸೇರಿದಂತೆ ವಿವಿಧ ಸಾಲಗಳನ್ನು ಪಡೆದಿದ್ದಾರೆ.

ರೈತರ ಬೇಡಿಕೆಯೇನು?

- ಮೊದಲೇ ಬೆಳೆಯಿಲ್ಲ, ಸಾಲವೂ ಜಾಸ್ತಿಯಿದೆ, ಈಗ ತೊಂದರೆ ನೀಡಬೇಡಿ
- ಒಂದು ಬಾರಿಯ ಪಾವತಿ ಮೂಲಕ ಸಾಲ ಮರುಪಾವತಿಗೆ ಅವಕಾಶ ನೀಡಿ
- ಊರುಗಳಲ್ಲಿ ಡಂಗುರ ಸಾರಿ, ಈಗಾಗಲೇ ನೊಂದ ರೈತರ ಮಾನ ಹರಾಜು ಹಾಕಬೇಡಿ: ಮನವಿ

ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ರೈತರಿಗೆ ಬರುತ್ತಿರುವ ನೋಟಿಸ್‌ಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಮುತ್ತಪ್ಪ ಕೋಮಾರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ವಿಪ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಸಲ್ಲಿಸಲಾಯಿತು. → 4

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಬೆಂಗಳೂರು
ಕೌಶಲ್ಯ ಶೃಂಗಸಭೆ

4 - 6 ನವೆಂಬರ್ 2025 | ದಿ ಲಲಿತ್ ಅಶೋಕ್

ಆಯೋಜಕರು: ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
ಸಹಯೋಗ: ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ
ಜ್ಞಾನ ಸಹಭಾಗಿತ್ವ: ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್

ಉದ್ಘಾಟನಾ ಸಮಾರಂಭ
4ನೇ ನವೆಂಬರ್ 2025
ಸಂಜೆ 5:00 ಗಂಟೆಗೆ

ಕರ್ನಾಟಕ ಸರ್ಕಾರದ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ್ ಆರ್. ಪಾಟೀಲ್ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಶಿವಕಾಂತಮ್ಮ ನಾಯಕ ಅವರು "ಬೆಂಗಳೂರು ಕೌಶಲ್ಯ ಶೃಂಗಸಭೆ 2025" ರ ಕುರಿತು ಆಯೋಜಿಸಲಾದ ಸಭೆಯಲ್ಲಿ ಭಾಗವಹಿಸಿರುವುದು.

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಡಾ. ಶರಣಪ್ರಕಾಶ್ ಆರ್. ಪಾಟೀಲ್
ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ

ಗೌರವಾನ್ವಿತ ಅತಿಥಿಗಳು

ಶ್ರೀ ಮುಹಮ್ಮದ್ ರೆಜ್ಞಾ ಖಾಸ್ಸಂ ಉತೀಮ್
ಮಾನ್ಯ ಕಾರ್ಮಿಕ ಮತ್ತು ಕೈಗಾರಿಕಾ ಸಂಬಂಧ ಸಚಿವರು, ಮಾರಿಷಸ್ ಗಣರಾಜ್ಯ

ಡಾ. ಎಂ. ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಪ್ರಿಯಾಂಕ್ ಖರ್ಗೆ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಶರಣಬಸಪ್ಪ ದರ್ಶನಾಪೂರ
ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಸಂತೋಷ್ ಎಸ್. ಲಾಡ್
ಮಾನ್ಯ ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ

ಡಾ. ಎಂ. ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಡಾ. ಫಿಲಿಪ್ ಅಕೆರ್ಮನ್
ಮಾನ್ಯ ರಾಯಭಾರಿಗಳು, ಜರ್ಮನಿ ಸಂಯುಕ್ತ ಗಣರಾಜ್ಯ

ಡಾ. ಇ. ವಿ. ರಮಣ ರೆಡ್ಡಿ, ಭಾ.ಆ.ಸೇ. (ನಿ)
ಅಧ್ಯಕ್ಷರು, ಕರ್ನಾಟಕ ಕೌಶಲ್ಯಾಭಿವೃದ್ಧಿ ಪ್ರಾಧಿಕಾರ

ಶ್ರೀ ಅಶುತೋಷ್ ಗುಪ್ತ
ವ್ಯವಸ್ಥಾಪಕ ನಿರ್ದೇಶಕರು, ಭಾರತ ಮತ್ತು ಏಷ್ಯಾ ಪೆಸಿಫಿಕ್, ಕೋರ್ಸೆರಾ

ಸ್ವಾಗತ ಬಯಸುವವರು

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಶ್ರೀಮತಿ ಉಮಾ ಮಹಾದೇವನ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ

ಶ್ರೀಮತಿ ಶಿವಕಾಂತಮ್ಮ (ಕಾಂತಾ) ನಾಯಕ
ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ

ಶ್ರೀ ಮನೋಜ್ ಕುಮಾರ್ ಮೀನಾ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಶ್ರೀ ನಾಗರಾಜ ಎನ್. ಎಂ., ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

ನೋಂದಣಿ ಸಂಜೆ 4 ಗಂಟೆಗೆ ಪ್ರಾರಂಭವಾಗಲಿದ್ದು, ದಯವಿಟ್ಟು 4.30 ಗಂಟೆಯೊಳಗೆ ತಮ್ಮ ಆಸನಗಳಲ್ಲಿ ಆಸೀನರಾಗಿ.

ನಾವೀನ್ಯತೆ, ಉದ್ಯೋಗಾವಕಾಶ ಮತ್ತು ಕೌಶಲ್ಯ ಶ್ರೇಷ್ಠತೆಯ ಕಡೆಗೆ ಮುನ್ನಡೆಯುವ ಧ್ಯೇಯವನ್ನು ಕರ್ನಾಟಕ ಹೊಂದಿದೆ.

bengaluruskillsummit.com

ವೆಬ್ ಸೈಟ್ ಗೆ ಈಗಲೇ ಭೇಟಿ ನೀಡಿ

ನಿರ್ವಹಣೆ trescon

ಸಮಾಚಾರ ಸಣ್ಣದಲ್ಲ

ಲಕ್ಷ್ಮಣ ಸವದಿಯನ್ನು ಸೋಲಿಸಿಯೇ ತೀರುತ್ತೇನೆ



ಬೆಳಗಾವಿ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸವದಿ ವಿರುದ್ಧ ನಮ್ಮ ಅಭ್ಯರ್ಥಿ ಹೀನಾಯವಾಗಿ ಸೋತಾಗ ಮನಸ್ಸಿಗೆ ತುಂಬಾ ನೋವಾಗಿತ್ತು. ಆದರೆ ಈಗ ನಮ್ಮ ಸಂಘಟನೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ. 2028ಕ್ಕೆ ಲಕ್ಷ್ಮಣ ಸವದಿಯನ್ನು ಸೋಲಿಸಿಯೇ ತೀರುತ್ತೇನೆ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆ ಚುನಾವಣೆ ಪಕ್ಷಾತೀತವಾಗಿ ನಡೆಯುತ್ತವೆ. ಅಥಣಿ ಕೃಷ್ಣಾ ಸಕ್ಕರೆ ಕಾರ್ಖಾನೆ ಚುನಾವಣೆಯಲ್ಲಿ ಎಲ್ಲಾ ಪಕ್ಷದ ಮುಖಂಡರು ನಮ್ಮ ಜೊತೆಗೂಡಿದ್ದರೂ ಅಥಣಿಯಲ್ಲಿ ನಮ್ಮದೇ ಸಂಘಟನೆ ಮಾಡಿದ್ದೇವೆ ಎಂದರು. ಕೃಷ್ಣಾ ಸಕ್ಕರೆ ಕಾರ್ಖಾನೆ ಚುನಾವಣೆಯಲ್ಲಿ ಸೋಲುತ್ತೇವೆ ಎಂಬುದು ಗೊತ್ತಿತ್ತು. ಆದರೆ ಚುನಾವಣೆ ಮಾಡುವ ಉದ್ದೇಶದಿಂದ ಎದುರಿಸಿದ್ದೇವೆ. 15 ಸಾವಿರ ಮತದಾರರ ಸಂಖ್ಯೆಯನ್ನು ಕೇವಲ ಐದು ಸಾವಿರಕ್ಕೆ ಇಳಿಸಿದ್ದಾರೆ. ಅದರಲ್ಲಿ ನಮ್ಮ ಪರವಾಗಿ ರೈತರು ಮತದಾನ ಮಾಡಿದ್ದು, ಇದು ಹೀನಾಯ ಸೋಲು ಹೇಗಾಗುತ್ತದೆ ಎಂದು ಪ್ರಶ್ನಿಸಿದರು. ರಮೇಶ್ ಕತ್ತಿ ಇವತ್ತಿಗೂ ನನ್ನ ಆತ್ಮೀಯ. ಅವನಿಗೂ ನನಗೂ ಯಾವುದೇ ವೈಷಮ್ಯ ಇಲ್ಲ. ವಾಲ್ಮೀಕಿ ಸಮಾಜದ ಬಗ್ಗೆ ಮಾತನಾಡಿದ್ದಕ್ಕೆ ನನಗೆ ಬೇಜಾರ ಆಗಿದೆ. ಆದರೆ ರಮೇಶ್ ಕತ್ತಿ ಹುಚ್ಚ, ಹಾಗೆ ಮಾತನಾಡಬಾರದಿತ್ತು. ನಾನು ಹುಕ್ಕೇರಿ ವಿದ್ಯುತ್ ಸಹಕಾರ ಕ್ಷೇತ್ರ ಚುನಾವಣೆ ಮಾಡಬೇಡಿ ಎಂದಿದ್ದೆ ಎಂದರು.

ಕಾಂಗ್ರೆಸ್ ಜಾಲಕ್ಕೆ ಕಾರ್ಯಕರ್ತರು ಬೀಳಬಾರದು | ಆತುರದ, ಉದ್ವೇಗದ ಹೇಳಿಕೆ ನೀಡಬೇಡಿ

ಬಿಜೆಪಿಗರಿಗೆ ಆರ್‌ಎಸ್‌ಎಸ್ ನೀತಿಪಾಠ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್‌ನ ಜಾಲದಲ್ಲಿ ಸಿಕ್ಕಿಬೀಳಬೇಡಿ. ಅಲ್ಲದೆ, ಅಲ್ಪಸಂಖ್ಯಾತರಿಗೆ ಪಕ್ಷ ಹಾಗೂ ದೇಶದ ಬಗ್ಗೆ ಅರಿವು ಮೂಡಿಸುವಲ್ಲಿ ಕ್ರಮ ಕೈಗೊಳ್ಳಬೇಕೆಂಬುದು ಸೇರಿದಂತೆ ಕಿತ್ತಾಟದಲ್ಲಿ ಸಂಘಟನೆ ಮರೆಯಬೇಡಿ ಎಂದು ಬಿಜೆಪಿ ನಾಯಕರಿಗೆ ಆರ್‌ಎಸ್‌ಎಸ್ ಖಡಕ್ ಸೂಚನೆ ನೀಡಿದೆ.

- **ಸವಾಲಿನ ಪರಿಸ್ಥಿತಿ ಸಂಘ ಯಶಸ್ವಿಯಾಗಿ ಎದುರಿಸುತ್ತದೆ**
- **ಕಿತ್ತಾಟ ಬಿಟ್ಟು ಪರಿಣಾಮಕಾರಿ ಹೋರಾಟ ಮಾಡಿ**

ಪಥ ಸಂಚಲನ ಜಟಾಪಟಿ ನಡುವೆ ಭಾರತೀಯ ವಿದ್ಯಾ ಭವನದ ಬಿಜೆಪಿ ಚಿಂತನ ವರ್ಗದಲ್ಲಿ ನಾಯಕರ ಜತೆ ಆರ್‌ಎಸ್‌ಎಸ್ ಮುಖಂಡರ ಮಹತ್ವದ ಬೈಠಕ್ ನಡೆಯಿತು. ಪಕ್ಷ ಸಂಘಟನೆ ಹಾಗೂ ಇತ್ತೀಚಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರಿಗೆ ಕಿವಿಮಾತು ಹೇಳಿರುವ ಆರ್‌ಎಸ್‌ಎಸ್ ಮುಖಂಡರು ನೀತಿ ಬೋಧನೆ ಮಾಡಿದ್ದಾರೆ. ಅಲ್ಲದೆ, ರಾಜ್ಯ ಸರಕಾರದ ವಿರುದ್ಧ ಪರಿಣಾಮಕಾರಿ ಹೋರಾಟಕ್ಕೆ ಸೂಚನೆ ನೀಡಿದ್ದಾರೆ.

ಕಾಂಗ್ರೆಸ್ ಸೇರಿ ಬೇರೆ ಸರಕಾರಗಳು ಬಂದಾಗ ಹಿಡನ್ ಅಜೆಂಡಾದ ಮೂಲಕ ಹಲವು ನಿರೂಪಣಾ ತಂತ್ರವನ್ನು ಸಜ್ಜುಗೊಳಿಸುವುದು (ನೆರೇಟಿವ್ ಸೆಟ್)ಮಾಡಲಾಗುತ್ತದೆ. ಆರ್‌ಎಸ್‌ಎಸ್ ನಿಷೇಧ ಮಾಡಿದಾಗಲೂ ಇಂತಹದ್ದೇ ಸನ್ನಿವೇಶ ಸೃಷ್ಟಿಯಾಗಿತ್ತು. ಆ ಕಾಲದಲ್ಲಿ ಸಾಮಾಜಿಕ ಮಾಧ್ಯಮಗಳು ಇರಲಿಲ್ಲ. ಈಗ ಸಾಮಾಜಿಕ ಮಾಧ್ಯಮಗಳು ಮುಂಚೂಣಿಯಲ್ಲಿದ್ದು, ಅಲ್ಲೇ ಡ್ರಾ ಅಲ್ಲೇ ಬಹುಮಾನ ಎಂಬ ಪರಿಸ್ಥಿತಿ ಇದೆ. ಕೆಲವೊಂದಕ್ಕೆ ಮೌನವೇ ಉತ್ತರವಾಗಿರಬೇಕು. ಪಕ್ಷದಲ್ಲಿ ಒಂದು ರಿಸರ್ಚ್ ವಿಂಗ್ ಇಟ್ಟುಕೊಳ್ಳಿ. ಈ ರೀತಿಯ ಸಂದರ್ಭ ಬಂದಾಗ ಏನು ಮಾಡಬೇಕೆಂದು ಯೋಚಿಸಿ ಎಂದು ಆರ್‌ಎಸ್‌ಎಸ್ ಮುಖಂಡರು ಬಿಜೆಪಿ ನಾಯಕರಿಗೆ ತಿಳಿಸಿದ್ದಾರೆ. ಧರ್ಮಸ್ಥಳ ಪ್ರಕರಣವನ್ನು ಅವರು ಯಾವ ರೀತಿ ಮುನ್ನೆಲೆಗೆ ತಂದರು ಎಂಬುದನ್ನು ನೋಡಿದ್ದೇವೆ. ಇಂತಹ ಸಂದರ್ಭ ಬಂದಾಗ ಅದನ್ನು ಸರಿಯಾಗಿ ತಿರುಗೇಟು ನೀಡಬೇಕಾಗುತ್ತದೆ ಎಂದು ಕಾರ್ಯಾಗಾರದಲ್ಲಿ ಬಿರುಸಿನ ಚರ್ಚೆಯಾಗಿದೆ.

ಇದಲ್ಲದೆ ಅಲ್ಪಸಂಖ್ಯಾತರು ಈ ಹಿಂದಿನಿಂದಲೂ ಆರ್‌ಎಸ್‌ಎಸ್ ಹಾಗೂ ಪಕ್ಷದ ಬಗ್ಗೆ ಒಲವಿಲ್ಲದಂತಹ ಪರಿಸ್ಥಿತಿಯನ್ನು ಕಾಂಗ್ರೆಸಿಗರು ಹಾಗೂ ಇತರೆ ಪಕ್ಷದವರು ಅವರಲ್ಲಿ ಸೃಷ್ಟಿ ಮಾಡಿದ್ದಾರೆ. ಹೀಗಿದ್ದರೂ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಸಂಘ ದುಡಿಯುತ್ತಿದೆ. ಈ ಸಂಬಂಧ ಆ ವರ್ಗದ ಜನರಲ್ಲಿ ಪ್ರೀತಿ, ವಿಶ್ವಾಸ ಗಳಿಸಿ ದೇಶಭಕ್ತಿ ಹಾಗೂ ದೇಶ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಅವರಿಗೆ ಮನವರಿಕೆ ಮಾಡಿಕೊಡಬೇಕೆಂಬ ತತ್ವವನ್ನು ಮುಖಂಡರು ಬೋಧಿಸಿದ್ದಾರೆ.

ಆರ್‌ಎಸ್‌ಎಸ್ ಮುಖಂಡರಾದ ತಿಪ್ಪೇಸ್ವಾಮಿ, ರಘುನಂದನ್, ವಾದಿರಾಜ್, ಬಿಜೆಪಿ ನಾಯಕರಾದ ಆರ್.ಅಶೋಕ, ಬಿ.ವೈ.ವಿಜಯೇಂದ್ರ, ಸಿ.ಟಿ ರವಿ, ಛಲವಾದಿ ನಾರಾಯಣಸ್ವಾಮಿ, ಅಶ್ವಥ್ ನಾರಾಯಣ, ಸಂಸದರಾದ ಬಸವರಾಜ ಬೊಮ್ಮಾಯಿ, ಬ್ರಿಜೇಶ್ ಚೌಟ, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಜನಾರ್ದನ ರೆಡ್ಡಿ ಸೇರಿ ಹಲವು ಶಾಸಕರು, ಮುಖಂಡರು ಭಾಗಿಯಾಗಿದ್ದರು.

ಆರ್‌ಎಸ್‌ಎಸ್ ಬೈಠಕ್‌ನಲ್ಲಿ ವಿಜಯೇಂದ್ರ, ಸಿ.ಟಿ.ರವಿ, ಛಲವಾದಿ ನಾರಾಯಣಸ್ವಾಮಿ ಇದ್ದರು.

ಆರ್‌ಎಸ್‌ಎಸ್ ಕಿವಿಮಾತೇನು?

ಆರ್‌ಎಸ್‌ಎಸ್ ಬಗ್ಗೆ ಕಾಂಗ್ರೆಸ್‌ನವರು ಈ ಹಿಂದಿನಿಂದಲೂ ಕೆಟ್ಟ ಅಭಿಪ್ರಾಯ ಸೃಷ್ಟಿಸುತ್ತಿದ್ದಾರೆ. ಸಂಘಕ್ಕೆ 100 ವರ್ಷದ ಇತಿಹಾಸ ಇದ್ದು ಇಂಥ ಎಷ್ಟೋ ಕಠಿಣ ಸಂದರ್ಭಗಳನ್ನು ಸಂಘ ಎದುರಿಸಿ ಮೆಟ್ಟಿ ನಿಂತಿದೆ. ಮೂರು ಬಾರಿ ಸಂಘವನ್ನು ನಿಷೇಧ ಮಾಡುವ ಅವರ ಪ್ರಯತ್ನಗಳೇ ವಿಫಲವಾಗಿದೆ. ಈಗ ಸರಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸಂಘದ ವಿಚಾರ ಕೆದಕಿದ್ದಾರೆ. ಈ ಹಂತದಲ್ಲಿ ಸಂಘ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹೀಗಿದ್ದರೂ ಬಿಜೆಪಿ ನಾಯಕರು, ಕಾರ್ಯಕರ್ತರು ಯಾವುದೇ ಆತುರದ, ಉದ್ವೇಗದ ಹೇಳಿಕೆ ನೀಡಿ ಕಾಂಗ್ರೆಸ್ ಜಾಲದಲ್ಲಿ ಸಿಕ್ಕಿಬೀಳಬೇಡಿ. ಈಗಿನ ಸವಾಲಿನ ಪರಿಸ್ಥಿತಿಯನ್ನೂ ಸಂಘ ಯಶಸ್ವಿಯಾಗಿ ಎದುರಿಸುತ್ತದೆ ಎಂದು ಬೈಠಕ್‌ನಲ್ಲಿ ಪ್ರಮುಖವಾಗಿ ಸೂಚಿಸಲಾಗಿದೆ.

ಕಾಂಗ್ರೆಸ್ ಭ್ರಷ್ಟಾಚಾರ ಬಯಲಿಗೆಳೆಯಲು ಸಲಹೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಂದರೆ ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂದು ಕಾಂಗ್ರೆಸಿನವರು ಬಿಂಬಿಸಿದ್ದರಿಂದ ನಮಗೆ ಮತಗಳಿಕೆಯ ಪ್ರಮಾಣವೂ ಕಡಿಮೆಯಾಗಿದೆ. ಇಂತಹ ಸನ್ನಿವೇಶ ಇನ್ನು ನಿರ್ಮಾಣವಾಗಬಾರದು. ಈ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಆರ್‌ಎಸ್‌ಎಸ್ ವಿರುದ್ಧದ ಷಡ್ಯಂತ್ರ ಎದುರಿಸಿ ಸರಕಾರದ ವಿರುದ್ಧ ಜನಾಭಿಪ್ರಾಯ ರೂಪಿಸುವುದು. ಸರಕಾರದ ವೈಫಲ್ಯ, ಭ್ರಷ್ಟಾಚಾರ ಬಯಲಿಗೆಳೆದು ಕಾಂಗ್ರೆಸ್ ನಾಯಕರ ತಂತ್ರಕ್ಕೆ ಪ್ರತಿತಂತ್ರ ಹೆಣೆಯುವುದು. ಕಾಂಗ್ರೆಸ್ ವಿರುದ್ಧ ಪರಿಣಾಮಕಾರಿ ಹೋರಾಟ ರೂಪಿಸಬೇಕೆಂಬ ನಿರ್ಣಯಕ್ಕೆ ಬರಲಾಗಿದೆ.

ಮೀಸಲು ಅಧಿಸೂಚನೆಗೆ 150 ದಿನ ಸಮಯ ಅಗತ್ಯ

ಬೆಂಗಳೂರು: ಈ ತಿಂಗಳ ಅಂತ್ಯಕ್ಕೆ ಅವಧಿ ಕೊನೆಗೊಳ್ಳಲಿರುವ ರಾಜ್ಯದ 180ಕ್ಕೂ ಅಧಿಕ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲು ಅಂತಿಮ ಅಧಿಸೂಚನೆ ಹೊರಡಿಸಲು 150 ದಿನಗಳ ಸಮಯ ಅಗತ್ಯವಿದೆ ಎಂದು ರಾಜ್ಯ ಸರಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಎರಡನೇ ಅವಧಿಗೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲು ನಿಗದಿಪಡಿಸಲು ವಿಳಂಬವಾದ ಹಿನ್ನೆಲೆಯಲ್ಲಿ 16 ತಿಂಗಳ ಕಾಲ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದ ಅವಧಿಯನ್ನು ತಮ್ಮ ಐದು ವರ್ಷದ ಅಧಿಕಾರಾವಧಿಗೆ ಪರಿಗಣಿಸಬಾರದು ಹಾಗೂ ಅವಧಿ ಮುಗಿಯಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳ ನೇಮಕ ಮಾಡುವ ಕ್ರಮಕ್ಕೆ ಮುಂದಾಗದಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ 65ಕ್ಕೂ ಅಧಿಕ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸಿದ್ದರು. ಈ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಸರಕಾರದ ಪರ ವಕೀಲರು ಮಾಹಿತಿ ನೀಡಿದರು. ವಿಚಾರಣೆ ವೇಳೆ ರಾಜ್ಯ ಸರಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, ಅವಧಿ ಮುಗಿಯಲಿರುವ ಸುಮಾರು 188 ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿ ಅಂತಿಮ ಅಧಿಸೂಚನೆ ಹೊರಡಿಸಲು ಕನಿಷ್ಠ 150 ದಿನಗಳು ಬೇಕಾಗುತ್ತದೆ ಎಂದು ನ್ಯಾಯಾಲಯಕ್ಕೆ ಲಿಖಿತ ಹೇಳಿಕೆ ಸಲ್ಲಿಸಿದರು.

ವಾದ ಆಲಿಸಿದ ಪೀಠ, ಚುನಾವಣಾ ಆಯೋಗ ಮತದಾರರ ಪಟ್ಟಿ ತಯಾರಿಸುವ ಕಾರ್ಯ ನಡೆಸಬಹುದೇ ಎಂಬ ಬಗ್ಗೆ ಚರ್ಚಿಸಲು ಸರಕಾರ ಮತ್ತು ಚುನಾವಣಾ ಆಯೋಗ ಬುಧವಾರ (ನ.5)ರಂದು ಸಭೆ ನಡೆಸಿ ಅದರ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ನವೆಂಬರ್ 11ಕ್ಕೆ ಮುಂದೂಡಿತು.

ಕಾಪು ಮಾರಿಗುಡಿಗೆ ಕ್ರಿಕೆಟಿಗನ ಪತ್ನಿ ಭೇಟಿ

ಉಡುಪಿ: ಟೀಮ್ ಇಂಡಿಯಾ ಕ್ರಿಕೆಟ್ ಆಟಗಾರ ಸೂರ್ಯ ಕುಮಾರ್ ಯಾದವ್ ಅವರ ಪತ್ನಿ ದೇವಿಶಾ ಶೆಟ್ಟಿ ಕಾಪು ಶ್ರೀ ಹೊಸ ಮಾರಿಗುಡಿಗೆ ಭೇಟಿ ನೀಡಿದ್ದಾರೆ. ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಶ್ರೀನಿವಾಸ ತಂತ್ರಿಗಳು ದೇವರ ಪ್ರಸಾದ ನೀಡಿ ದರು. ವ್ಯವಸ್ಥಾಪನಾ ಸಮಿತಿ ಮತ್ತುಅಭಿವೃದ್ಧಿ ಸಮಿತಿ ವತಿಯಿಂದ ಈ ಸಂದರ್ಭದಲ್ಲಿ ಗೌರವಿಸಲಾಯಿತು. ದೇವಸ್ಥಾನದ ಪ್ರಾಂಗಣದ ಮುಂದಿರುವ ಬೃಹತ್ ಕಲ್ಲಿನ ಕಂಬವನ್ನು ಸೇವೆ ರೂಪದಲ್ಲಿ ಸೂರ್ಯಕುಮಾರ್ ದಂಪತಿ ಕೊಟ್ಟಿದ್ದರು. ಆ ಕಂಬದ ಮುಂದೆ ದೇವಿಶಾ ನಿಂತು ಫೋಟೊ ತೆಗೆಸಿಕೊಂಡಿದ್ದಾರೆ. ಸೂರ್ಯಕುಮಾರ್ ಯಾದವ್ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದು, ಟಿ20 ಪಂದ್ಯವನ್ನು ಆಡುತ್ತಿದ್ದಾರೆ. ದೇವಿಶಾ ಶೆಟ್ಟಿ ಭರತನಾಟ್ಯ ಕಲಾವಿದೆಯಾಗಿದ್ದು, ಮುಂಬೈನಲ್ಲಿ ನೃತ್ಯ ತರಬೇತಿ ನೀಡುತ್ತಿದ್ದಾರೆ. ಜುಲೈ 7, 2016 ರಂದು ಸೂರ್ಯ ದೇವಿಶಾ ಶೆಟ್ಟಿ ಅವರನ್ನು ವಿವಾಹವಾಗಿದ್ದರು.

600 ಕೋಟಿ ರು. ಹೂಡಿಕೆಯೊಂದಿಗೆ ಡೀಪ್‌ಟೆಕ್ ದಶಕ ಆರಂಭ | 60 ದೇಶಗಳ ಪ್ರತಿನಿಧಿಗಳು ಭಾಗಿ

ನ.18ಕ್ಕೆ ಬೆಂಗಳೂರಲ್ಲಿ ಟೆಕ್ ಶೃಂಗಸಭೆ: ಪ್ರಿಯಾಂಕ್ ಖರ್ಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಐಟಿ ಹಬ್ ಬೆಂಗಳೂರು ಮತ್ತೊಮ್ಮೆ ತಂತ್ರಜ್ಞಾನ ಉತ್ತೇಜನ ಮತ್ತು ಜಾಗತಿಕ ಹೂಡಿಕೆಗೆ ತೆರೆದುಕೊಳ್ಳಲಿದೆ. ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನವೆಂಬರ್ 18ರಿಂದ 20ರವರೆಗೆ 28ನೇ ಬೆಂಗಳೂರು ಟೆಕ್ ಶೃಂಗಸಭೆ ನಿಗದಿಯಾಗಿದೆ. ಕೃತಕ ಬುದ್ಧಿಮತ್ತೆ ಹಾಗೂ ಡೀಪ್‌ಟೆಕ್ ಈ ಬಾರಿ ಪ್ರಧಾನವಾಗಿ ಆಕರ್ಷಣೆ ಆಗಲಿದ್ದು, ವಿಶ್ವದಾದ್ಯಂತ 60 ದೇಶಗಳಿಂದ 1000 ಹೂಡಿಕೆದಾರರು ಭಾಗಿಯಾಗಲಿದ್ದಾರೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಮೂರು ದಿನಗಳ ಕಾಲ ನಡೆಯಲಿರುವ ಫ್ಯೂಚರ್ ಮೇಕರ್ಸ್ ಟೆಕ್‌ಸಮ್ಮಿಟ್‌ನಲ್ಲಿ, 10,000 ಕ್ಕೂ ಹೆಚ್ಚು ಸಂಸ್ಥಾಪಕರು, ಉದ್ಯಮಿಗಳು, ಹೂಡಿಕೆದಾರರು, ಮಾರ್ಗದರ್ಶಕರ ಸಂಗಮವಾಗಲಿದೆ. ನಾವೀನ್ಯತೆಯ ಉನ್ನತ-ಶಕ್ತಿಯ ಆಚರಣೆಯಾಗಿ ವಿನ್ಯಾಸಗೊಳಿಸಿದ್ದು ಇದು ಭಾರತದ ಅತ್ಯಂತ ಭರವಸೆಯ ಎಐ ಮತ್ತು ಡೀಪ್‌ಟೆಕ್‌ಗೆ ಪ್ರದರ್ಶನವಾಗಲಿದೆ ಎಂದರು.

ನ. 18 ರಿಂದ 20ರವರೆಗೆ ನಡೆಯಲಿರುವ 28ನೇ ಬೆಂಗಳೂರು ಟೆಕ್ ಶೃಂಗ ಸಭೆ ಪೋಸ್ಟರ್ ಅನ್ನು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು.

ತಂತ್ರಜ್ಞಾನ ಕ್ಷೇತ್ರದ ವಿಸ್ತೃತ ವ್ಯಾಪ್ತಿ, ಜಾಗತಿಕ ಭಾಗವಹಿಸುವಿಕೆ ಮತ್ತು ನಾವೀನ್ಯತೆಯ ಮೇಲೆ ಆಳವಾದ ಗಮನದೊಂದಿಗೆ, ಬೆಂಗಳೂರು ಟೆಕ್ ಶೃಂಗಸಭೆ-2025 ಭಾರತದ ನಾವೀನ್ಯತೆ ಮತ್ತು ಡೀಪ್‌ಟೆಕ್ ರಾಜಧಾನಿಯಾಗಿ ಕರ್ನಾಟಕವನ್ನು ರೂಪಿಸಲಿದೆ. ಸ್ಟಾರ್ಟ್‌ಅಪ್‌ಗಳನ್ನು ನಿರ್ಮಿಸುವಲ್ಲಿ ರಾಜ್ಯ ನಾಯಕತ್ವವನ್ನು ಪ್ರದರ್ಶಿಸುತ್ತದೆ.

-ಪ್ರಿಯಾಂಕ್ ಖರ್ಗೆ, ಐಟಿ-ಬಿಟಿ ಸಚಿವರು

ಟೆಕ್‌ಸಮ್ಮಿಟ್ ಅಂಕಿಸಂಖ್ಯೆ

- 500ಕ್ಕೂ ಹೆಚ್ಚು ಭಾಷಣಕಾರರು
- 20,000 ಪ್ರತಿನಿಧಿಗಳು ಭಾಗಿ
- 1,000ಕ್ಕೂ ಅಧಿಕ ಪ್ರದರ್ಶಕರು
- 60ಕ್ಕೂ ಹೆಚ್ಚು ದೇಶಗಳು ಭಾಗಿ
- 50,000 ವ್ಯಾಪಾರ ಸಂದರ್ಶಕರು

ಕರ್ನಾಟಕವನ್ನು ಭಾರತದ ಡೀಪ್‌ಟೆಕ್ ರಾಜಧಾನಿಯನ್ನಾಗಿ ಮಾಡುವ ಗುರಿ ಹೊಂದಲಾಗಿದ್ದು, ಡೀಪ್‌ಟೆಕ್ ದಶಕಕ್ಕೆ ಶಕ್ತಿ ತುಂಬಲು ಸರ್ಕಾರ 600 ಕೋಟಿ ರೂ ಹೂಡಿಕೆ ಬದ್ಧತೆಯನ್ನು ಘೋಷಿಸಿದರು. ಇದು ಕ್ವಾಂಟಮ್ ಕಂಪ್ಯೂಟಿಂಗ್, ಸುಧಾರಿತ ಉತ್ಪಾದನೆ, ರೊಬೊಟಿಕ್ ಮತ್ತು ಸುಸ್ಥಿರತೆ-ಚಾಲಿತ ನಾವೀನ್ಯತೆ ಮುಂತಾದ ತಂತ್ರಜ್ಞಾನಗಳಲ್ಲಿ ಕೆಲಸ ಮಾಡುವ ಉದ್ಯಮಿಗಳನ್ನು ಬೆಂಬಲಿಸುವ ದೃಢವಾದ ಡೀಪ್‌ಟೆಕ್ ಪೈಪ್‌ಲೈನ್ ಅನ್ನು ರಚಿಸುವ ನಮ್ಮ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. 1,000 ಕೋಟಿವರೆಗಿನ ಜಂಟಿ ನಿಧಿಯನ್ನು ರಚಿಸಲು ಪ್ರಮುಖ ಸಾಹಸೋದ್ಯಮ ಬಂಡವಾಳ ಸಂಸ್ಥೆಗಳೊಂದಿಗೆ ಚರ್ಚೆಯಲ್ಲಿದ್ದು ನಮ್ಮ ನೀಲನಕ್ಷೆ ಸಿದ್ಧವಾಗಿದೆ ಎಂದರು.

ಈ ಸಂದರ್ಭದಲ್ಲಿ ಐಟಿ, ಬಿಟಿ ಇಲಾಖೆಯ ಕಾರ್ಯದರ್ಶಿ ಡಾ. ಮಂಜುಳಾ, ನಿರ್ದೇಶಕ ಮತ್ತು ಕೆಐಟಿಎಸ್ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಸಂಕನೂರ್, ಉಪಸ್ಥಿತರಿದ್ದರು.

600 ಕೋಟಿ ಹೂಡಿಕೆ ಏನೇನಿದೆ

- ತಂತ್ರಜ್ಞಾನಗಳ ಮೇಲೆ ವಿಶೇಷ ಗಮನ ಹರಿಸಿ ಡೀಪ್‌ಟೆಕ್ ಎಲಿವೇಟ್ ಫಂಡ್‌ಗೆ 150 ಕೋಟಿ.
- ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿಯಲ್ಲಿ ಸ್ಟಾರ್ಟ್‌ಅಪ್ ಉತ್ತೇಜನಕ್ಕೆ 80 ಕೋಟಿ ರೂ ನಿಗಧಿ
- ಈಕ್ವಿಟಿ ಆಧಾರಿತ ಹೂಡಿಕೆಗೆ 75 ಕೋಟಿ, 50 ಲಕ್ಷದಿಂದ 2 ಕೋಟಿ ರೂವರೆಗೆ ನಿಧಿ ಸ್ಥಾಪನೆ
- ಐಐಐಟಿ ಧಾರವಾಡ, ಕಲಬುರಗಿಯಲ್ಲಿ ಹೊಸ ಇನ್‌ಕ್ಯುಬೇಟರ್, ಆಕ್ಸಿಲರೇಟರ್‌ಗೆ 48 ಕೋಟಿ
- ಹನ್ನೊಂದು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಾವೀನ್ಯತೆ, ಇನ್‌ಕ್ಯುಬೇಟರ್‌ಗಳಿಗೆ 110 ಕೋಟಿ ರು.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ-571 401
(Autonomous Medical Institution, Government of Karnataka)
Phone: 08232-231003, 222086, 231197, 224040, Fax: 08232-231001
E-Mail Address: mimsmandyaoffice@gmail.com, mimsmandya@gmail.com

ಇ-ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)

ಸಂಖ್ಯೆ:ಮಿಮ್ಸ್/ಸರಬ-1/ಬ್ಲಡ್ ಬ್ಯಾಂಕ್/ಉಪಕರಣ/ಇ-ಟೆಂ/03/2025-26
ದಿ:27.10.2025

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರಕ್ಕೆ ರಕ್ತಸಂಗ್ರಹಣಾ ಕಾರ್ಯನಿರ್ವಹಣೆಗಾಗಿ ಅವಶ್ಯವಿರುವ ವಿವಿಧ ಉಪಕರಣಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.98.00 ಲಕ್ಷಗಳು. ಟೆಂಡರ್ ಸಂಬಂಧಪಟ್ಟತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ https://kppp.karnataka.gov.in ರಲ್ಲಿ ಪಡೆದುಕೊಳ್ಳಹುದು ಹಾಗೂ ಕರ್ತವ್ಯದ ದಿನಗಳಲ್ಲಿ ಮಿಮ್ಸ್ ಸಂಸ್ಥೆಯ ಕಛೇರಿಯಲ್ಲಿ ಪಡೆದುಕೊಳ್ಳಬಹುದು.

ಸಹಿ/-ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/540/2025-26

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು.

ಟೆಂಡರ್ ಪ್ರಕಟಣೆ ಸಂಖ್ಯೆ :02/2025-26 ದಿನಾಂಕ: 28-10-2025 K/W-4)
(Through Karnataka Public Procurement Portal Only

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಅಯಕಟ್ಟು ರಸ್ತೆ ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.397.84 ಲಕ್ಷಗಳ ಒಟ್ಟು 01** ಕಾಮಗಾರಿಯನ್ನು ಕೈಗೊಳ್ಳಲು KPPP-portal ಮೂಲಕ ಐಟಂವಾರು ದ್ವಿ-ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತಾ ಕೇಂದ್ರ ಅಥವಾ ವೆಬ್‌ಸೈಟ್ http://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಸಂಕ್ಷಿಪ್ತ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾದ **ದಿನಾಂಕ:31-10-2025 ರಿಂದ ದಿನಾಂಕ: 29-11-2025ರ ಸಂಜೆ 4.00 ಗಂಟೆವರೆಗೆ**
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕೊನೆಯ **ದಿನಾಂಕ:29-11-2025 ಸಂಜೆ 4.00 ಗಂಟೆವರೆಗೆ**
3. ಭರ್ತಿ ಮಾಡಿದ ಟೆಂಡರನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಿರುವ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ:01-12-2025 ಬೆಳಗ್ಗೆ 11.00 ಗಂಟೆಯ** ನಂತರ
4. ಭರ್ತಿ ಮಾಡಿದ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಿರುವ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.

ಭರ್ತಿ ಮಾಡಿದ ಟೆಂಡರ್ ಅನ್ನು ತೆರೆಯುವ ದಿನಾಂಕವು ಸಾರ್ವತ್ರಿಕ ರಜಾದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಪರಿಗಣಿಸಲಾಗುವುದು. ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗೆ, ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ವಿಭಾಗ, ತುಮಕೂರು ರವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಕಾಡಾ ನಂ.1 ವಿಭಾಗ,
ಕಾವೇರಿ ಜಲಾನಯನ ಯೋಜನೆಗಳು
ತುಮಕೂರು
DIPR/TUM/RO-150/25-26/Oysters

ಪುರಸಭಾ ಕಾರ್ಯಾಲಯ, ಭಟ್ಕಳ (ಉ.ಕ.)
TOWN MUNICIPAL COUNCIL, BHATKAL (U.K.)
Ph/Fax: 08385-226408, Website: www.bhatkaltown.mrc.gov.in
E-mail: ka.bhatkal.tmc@gmail.com
ನಂ:ಪುಸಭ/ಕಾವಿ/ಅಮೃತ-2.0/ಟೆಂ-09/2025-26 ದಿನಾಂಕ: 03-11-2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಈ ಮೂಲಕ ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸ್ತುತ 2025-26 ನೇ ಸಾಲಿಗೆ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಪಾರದರ್ಶಕ ಕಾಯಿದೆ 1999 ಹಾಗೂ ನಿಯಮಾವಳಿ-2000 ರಂತೆ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆ ಮತ್ತು ಕೇಂದ್ರ ಪುರಸ್ಕೃತ ಅಮೃತ್ 2.0 ರ Jal Hi AMRIT ಯೋಜನೆಯಲ್ಲಿ ಮಂಜೂರಾಗಿರುವ ಕಾಮಗಾರಿಯ ಇಂಟೆಂಟ್ ಸಂಖ್ಯೆ: DMA/2025-26/OW/WORK_INDENT49827/CALL-2 ಮತ್ತು DMA/2025-26/WT/WORK_INDENT50030/CALL-2 ರ ಕಾಮಗಾರಿಗೆ ಕೆಡಬ್ಲೂ-02 ಮತ್ತು ಕೆಡಬ್ಲೂ-03 ನಿಬಂಧನೆಗೆ ಒಳಪಟ್ಟು ಐಟಂವಾರು ಟೆಂಡರನ್ನು ಈ ಮೂಲಕ ಕರೆಯಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ ದಿನಾಂಕ: 17-11-2025 ರ ಸಾಯಂಕಾಲ 5.00 ಘಂಟೆಯ ಒಳಗೆ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ ಹಾಗೂ ಸ್ವೀಕೃತ ಟೆಂಡರ್‌ನ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 18-11-2025 ರ ಸಾಯಂಕಾಲ 5.30 ಘಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ www.bhatkaltown.mrc.gov.in ರಲ್ಲಿ ಅಥವಾ ಕಛೇರಿ ಸಮಯದಲ್ಲಿ ಕಾರ್ಯಾಲಯವನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯಾಧಿಕಾರಿ
ಪುರಸಭೆ ಭಟ್ಕಳ (ಉ.ಕ.)
DIPR/KWR/KSMCA/666/25-26 dt.03.11.25

ದರ್ಶನ್, ಪವಿತ್ರಾ ವಿರುದ್ಧ ಕೊಲೆ ಆರೋಪ

ಮೂರನೇ ಪುಟದಿಂದ

ಪವಿತ್ರಾಗೌಡಗೆ ರೇಣುಕಾಸ್ವಾಮಿ ಸಂದೇಶ ಮಾಡಿದ ಬಳಿಕ ಅಪಹರಣಕ್ಕೆ ಸಂಚು ಮಾಡಲಾಗಿತ್ತು. ವ್ಯವಸ್ಥಿತವಾಗಿ ಅಪಹರಣ ಮಾಡಿ ಬೆಂಗಳೂರಿಗೆ ಕರೆ ತಂದು ಸಂಚಿನ ಪ್ರಕಾರ ಹಲ್ಲೆ ಮಾಡಲಾಗಿದೆ ಎಂದು ನ್ಯಾಯಾಧೀಶರು ತಿಳಿಸಿದರು.

ರೇಣುಕಾಸ್ವಾಮಿಯನ್ನು ಅಪಹರಿಸಿ ಶೆಡ್‌ಗೆ ಕರೆತಂದು ಹಲ್ಲೆ ಮಾಡಿರುವುದು, ಚಪ್ಪಲಿಯಲ್ಲಿ ಹೊಡೆದಿರುವುದು, ಏಕೆ ಮೆಸೇಜ್ ಮಾಡಿದ್ದೀಯಾ ಎಂದು ಹೊಡೆದು ಅವಮಾನ ಮಾಡಿದ್ದೀರಿ. ಚಪ್ಪಲಿಯಿಂದ ಮರದ ದಿಮ್ಮಿಯಿಂದ ಮಾರಣಾಂತಿಕ ಹಲ್ಲೆ ಮಾಡಿದ್ದೀರಿ. ರೇಣುಕಾಸ್ವಾಮಿ ಪ್ಯಾಂಟ್ ಬಿಚ್ಚಿ ಎ2 ದರ್ಶನ್ ಹಲ್ಲೆ ಮಾಡಿ ಕೊಲೆ ಮಾಡಿದ್ದೀರಿ. ಕೊಲೆ ಬಳಿಕ ಕೆಲವರಿಗೆ ಹಣದ ಆಸೆ ತೋರಿಸಿ ತಪ್ಪು ಒಪ್ಪಿಕೊಳ್ಳುವಂತೆ ಸಂಚು ರೂಪಿಸಿದ್ದೀರಿ ಎಂದು ನ್ಯಾಯಾಧೀಶರು ದೋಷಾರೋಪ ಓದಿದರು. ಸಾಕ್ಷಿ ನಾಶ ಮಾಡುವ ಯತ್ನ ಮಾಡಿದ್ದೀರಿ. 2ನೇ ಆರೋಪಿಯಿಂದ 17ನೇ ಆರೋಪಿ ಜತೆ ಸೇರಿ ಒಳಸಂಚು ಮಾಡಿದ್ದೀರಿ ಎಂದು ನ್ಯಾಯಾಧೀಶರು ತಿಳಿಸಿದರು. ಅಲ್ಲದೆ, ಕೆಲವು ಆರೋಪಿಗಳಿಗೆ ಹಣದ ಆಮಿಷವೊಡ್ಡಿ ತಪ್ಪನ್ನು ತಮ್ಮ ಮೇಲೆ ಹೊರಿಸಿಕೊಳ್ಳಲು ಪ್ರೇರೇಪಿಸಲಾಗಿದೆ ಎಂಬ ಅಂಶವನ್ನೂ ನ್ಯಾಯಾಲಯ ಗಮನಿಸಿತು. ನ್ಯಾಯಾಧೀಶರು ಓದಿ ಹೇಳಿದ ಎಲ್ಲಾ ಆರೋಪಗಳನ್ನು 17 ಆರೋಪಿಗಳು ಒಕ್ಕೊರಲಿನಿಂದ ನಿರಾಕರಿಸಿದರು. ತಾವು ನಿರಪರಾಧಿಗಳು ಎಂದು ವಾದಿಸಿದ ನಂತರ, ನ್ಯಾಯಾಲಯವು ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಿತು.

ಏನಿದು ಪ್ರಕರಣ?: ಚಿತ್ರದುರ್ಗದ ನಿವಾಸಿಯಾಗಿದ್ದ 33 ವರ್ಷದ ರೇಣುಕಾಸ್ವಾಮಿ, ಜೂನ್ 9, 2024ರಂದು ಬೆಂಗಳೂರಿನಲ್ಲಿ ಶವವಾಗಿ ಪತ್ತೆಯಾಗಿದ್ದರು. ಪವಿತ್ರಾ ಗೌಡ ಅವರಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ ಕಾರಣಕ್ಕಾಗಿ ದರ್ಶನ್ ಮತ್ತು ಅವರ ಗ್ಯಾಂಗ್ ಈ ಕೃತ್ಯ ಎಸಗಿದೆ ಎಂದು ಪೊಲೀಸರು ಆರೋಪಿಸಿದ್ದರು.

ಮುಂದೆ ಬಾ: ದರ್ಶನ್‌ಗೆ ಪವಿತ್ರಾ ಸನ್ನೆ

ಎರಡನೇ ಬಾರಿ ಬಂಧನದ ಬಳಿಕ ಇದೇ ಮೊದಲ ಬಾರಿಗೆ ದರ್ಶನ್ ಮತ್ತು ಪವಿತ್ರಾ ಗೌಡ ಮುಖಾಮುಖಿಯಾಗಿ ಭೇಟಿಯಾಗಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣ ಆರೋಪಿಗಳ ವಿರುದ್ಧ ಆರೋಪ ನಿಗದಿಯಾಗಿರುವ ಹಿನ್ನೆಲೆಯಲ್ಲಿ ಸೋಮವಾರ ಎಲ್ಲಾ ಆರೋಪಿಗಳು ನಗರದ ಸೆಷನ್ಸ್ ಕೋರ್ಟ್‌ಗೆ ಹಾಜರಾಗಿದ್ದರು. ಪ್ರಕರಣದಲ್ಲಿ ಪವಿತ್ರಾ ಗೌಡ ಎ1 ಆಗಿದ್ದರೆ ದರ್ಶನ್ ಎ2 ಆರೋಪಿಯಾಗಿದ್ದಾರೆ. ಹೀಗಾಗಿ ನ್ಯಾಯಾಧೀಶರ ಮುಂದೆ ಸಾಲಾಗಿ ನಿಲ್ಲುವಾಗ ಪವಿತ್ರಾ ಗೌಡ ಹಿಂದೆ ದರ್ಶನ್ ನಿಂತಿದ್ದರು. ಈ ವೇಳೆಯೇ ಮುಂದೆ ಬಾ ಎಂದು ದರ್ಶನ್ ಅವರನ್ನು ಪವಿತ್ರಾ ಗೌಡ ಕರೆದಿದ್ದಾರೆ. ಪವಿತ್ರಾ ಕರೆದ ಬೆನ್ನಲ್ಲೇ ದರ್ಶನ್ ಮುಂದೆ ಹೋಗಿ ಪರಸ್ಪರ ಮಾತನಾಡಿದ್ದಾರೆ. ಪರಪ್ಪನ ಅಗ್ರಹಾರದಿಂದ ಕೋರ್ಟ್‌ಗೆ ಪೊಲೀಸರು ಕರೆ ತರುವಾಗ ಬೇರೆ ಬೇರೆ ವಾಹನಗಳಲ್ಲಿ ಇಬ್ಬರನ್ನು ಕರೆ ತಂದಿದ್ದರು.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123
ಇ-ಮೇಲ್: nelamangala.pa@gmail.com Phone No: 96630 46622
ಸಂಖ್ಯೆ: ನೆಯೋಪ್ರಾ: CLU:77:2025-26 ದಿನಾಂಕ: 03-11-2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಅಗಳಕುಪ್ಪೆ ಗ್ರಾಮವು** "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಬಿ.ಎನ್.ಮನೋಹರ್ ಬಿನ್ ಬಿ.ಹೆಚ್.ನರಸಿಂಹಯ್ಯ,	ನೆಲಮಂಗಲ, ಸೋಂಪುರ, ಅಗಳಕುಪ್ಪೆ,	33/6	01-28	ವ್ಯವಸಾಯ	ವಾಣಿಜ್ಯ

ಷರಾ:- ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಸಮುಚ್ಚಯ ಇಲ್ಲದೆ ಇರುವುದರಿಂದ ಪ್ರಶ್ನಿತ ಜಮೀನುಗಳಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ವಾಣಿಜ್ಯ ಸಮುಚ್ಚಯ ಸ್ಥಾಪಿಸಿದಲ್ಲಿ, ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾ.ಸಾ.ಸಂ.ಇ/ವಾಪ್ರ/3556/2025-26

ಆಸ್ತಿ ಜಪ್ತಿಗೆ ಮುಂದಾದ ಬ್ಯಾಂಕಿಗೆ ಮುಧೋಳ ರೈತರಿಂದ ಮುತ್ತಿಗೆ

ಮೂರನೇ ಪುಟದಿಂದ

ವಿವಿಧ ಕಾರಣಗಳಿಂದ ಸಾಲ ಮರುಪಾವತಿಸಲು ಆಗದೇ ಬಾಕಿದಾರರಾಗಿದ್ದಾರೆ (ಎನ್‌ಪಿಎ). ಇಂತಹ ಒಟ್ಟು 238 ರೈತರಿಗೆ ಇಲ್ಲಿಯವರೆಗೆ ಸ್ಥಳೀಯ ನ್ಯಾಯಾಲಯದಿಂದ ನೋಟಿಸ್ ಜಾರಿ ಮಾಡುವ ಮೂಲಕ ಮೊದಲೇ ಮಾಡಿದ ಸಾಲ ತೀರಿಸಲಾಗದೇ ಆತಂಕದಲ್ಲಿರುವ ರೈತನಿಗೆ ಕೋರ್ಟ್‌ನಿಂದ ಬರುವ ನೋಟಿಸ್‌ಗಳು ಮತ್ತಷ್ಟು ಹೆದರಿಸಿದೆ.

ಕೆನರಾ ಬ್ಯಾಂಕ್ ಮೂಲಕ ಮುಧೋಳ ತಾಲೂಕಿನಲ್ಲಿ ಒಟ್ಟು 886 ರೈತರು ವಿವಿಧ ಸಾಲಗಳನ್ನು ಪಡೆದು, ಮರುಪಾವತಿಸಲಾಗದೇ ಕಟುಬಾಕಿದಾರರಾಗಿದ್ದಾರೆ. ಇದರಲ್ಲಿನ 238 ರೈತರಿಗೆ ನೋಟಿಸ್ ನೀಡಿದ್ದರೇ 5 ಜನರ ಆಸ್ತಿ ಮುಟ್ಟುಗೋಲು ಹಾಕಲು ಬ್ಯಾಂಕ್ ಮುಂದಾಗಿದೆ.

ಸಿಎಂ ಸಿದ್ದರಾಮಯ್ಯಗೆ ಮನವಿ ಸಲ್ಲಿಕೆ: ಜಿಲ್ಲೆಯ ಮುಧೋಳ ತಾಲೂಕಿನಲ್ಲಿ ಕೆನರಾ ಬ್ಯಾಂಕ್‌ನಿಂದ ರೈತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಮುತ್ತಪ್ಪ ಕೋಮಾರ ನೇತೃತ್ವದಲ್ಲಿ 20ಕ್ಕೂ ಹೆಚ್ಚಿನ ಮುಧೋಳ ತಾಲೂಕಿನ ರೈತರು ಬೆಂಗಳೂರಿಗೆ ತೆರಳಿ ಸಿಎಂ ಸಿದ್ದರಾಮಯ್ಯ, ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಸರಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿದ್ದಾರೆ.

ರೈತರ ಮೇಲೆ ರಾಷ್ಟ್ರೀಕೃತ ಬ್ಯಾಂಕ್‌ಗಳ ದಬ್ಬಾಳಿಕೆ ಮೀತಿ ಮೀರಿದೆ. ಸಾಲ ಮರುಪಾವತಿಗೆ ಸಮಯ ನೀಡುತ್ತಿಲ್ಲ. ಬ್ಯಾಂಕ್‌ನವರು ಕೋರ್ಟ್‌ಗೆ ಹೋದ ಬಳಿಕ ನ್ಯಾಯಾಲಯ ಆಸ್ತಿ ಹರಾಜಿಗೆ ಆದೇಶ ನೀಡುತ್ತಿದೆ. ಆ ಪ್ರಕಾರ ರೈತರ ಸ್ವಂತ ಗ್ರಾಮಗಳಲ್ಲಿ ಡಂಗುರ ಸಾರುವ ಮೂಲಕ ಅನ್ನದಾತನ ಮಾನ ಹರಾಜು ಹಾಕುವ ಕಾರ್ಯವನ್ನು ನಿಲ್ಲಿಸಬೇಕು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಕೆನರಾ ಬ್ಯಾಂಕ್‌ಗೆ ಮುತ್ತಿಗೆ ಹಾಕಿದ ರೈತರು: ಮುಧೋಳದ ಕೆನರಾ ಬ್ಯಾಂಕಿನಲ್ಲಿ ಸಾಲ ಮರುಪಾವತಿ ಮಾಡದ ರೈತರಿಗೆ ನೋಟಿಸ್ ನೀಡುವುದನ್ನು ಬಂದ್ ಮಾಡಿ, ಒಟಿಎಸ್ ಮೂಲಕ ಅಸಲಿನ ಶೇ.20 ಕಡಿಮೆ ಮಾಡಿ ರೈತರ ಸಾಲವನ್ನು ತುಂಬಿಸಿಕೊಳ್ಳಬೇಕು ಎಂದು ಒತ್ತಾಯಿಸಿ ಅನೇಕ ಬಾರಿ ಬ್ಯಾಂಕ್‌ನ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ನ.3ರಂದು ಮುಧೋಳದ ಕೆನರಾ ಬ್ಯಾಂಕಿಗೆ ರೈತರು ಮುಳ್ಳುಕಂಟಿಗಳನ್ನು ಹಚ್ಚಿ ಪ್ರತಿಭಟನೆ ನಡೆಸಿದರು. ಮಧ್ಯಾಹ್ನದ ಹೊತ್ತಿಗೆ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ರೈತರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಪರಿಣಾಮ ಮಧ್ಯಾಹ್ನ ನಂತರ ಮುಳ್ಳುಗಳನ್ನು ಬದಿಗೆ ಸರಿಸಿ ನಿತ್ಯದ ವ್ಯವಹಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ.

ಅನಿವಾರ್ಯ ಕಾರಣಗಳಿಂದ ಸಾಲ ಮರುಪಾವತಿ ಮಾಡಲು ಸಾಧ್ಯವಾಗಿಲ್ಲ. ಬ್ಯಾಂಕ್‌ನವರು ಸಾಲ ಮರುಪಾವತಿ ಮಾಡದ ರೈತರಿಗೆ ನೋಟಿಸ್ ನೀಡುವುದು ಸರಿಯಲ್ಲ ಎಂದು ಎಷ್ಟು ಬಾರಿ ಹೇಳಿದರೂ ಅವರು ಕೇಳದ ಹಿನ್ನೆಲೆಯಲ್ಲಿ ಸಿಎಂ, ವಿಧಾನ ಪರಿಷತ್ ಸಭಾಪತಿ ಹಾಗೂ ಸರಕಾರದ ಮುಖ್ಯಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಲಾಗಿದೆ. ರೈತರ ಮೇಲೆ ಹಾಕಿರುವ ನ್ಯಾಯಾಲ ಯದ ವ್ಯಾಜ್ಯಗಳನ್ನು ಹಿಂಪಡೆಯಬೇಕು, ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ 2021ನೇ ಸಾಲಿನಲ್ಲಿ ಇದ್ದಂತಹ ಒಟಿಎಸ್ ಮಾದರಿಯನ್ನು ಅಸಲಿನಲ್ಲಿ ಶೇ.20ರಷ್ಟು ಹಣವನ್ನು ತುಂಬಿಕೊಂಡು ರೈತರನ್ನು ಋಣಮುಕ್ತ ಮಾಡಬೇಕು.

-ಮುತ್ತಪ್ಪ ಕೋಮಾರ, ರಾಜ್ಯ ರೈತ ಸಂಘದ ಉಪಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ರಾಜ್ಯದಲ್ಲಿ ನೂರು ಸಬ್ ಸ್ಟೇಷನ್: ಕೆ.ಜೆ.ಜಾರ್ಜ್

ಅರಸೀಕೆರೆ: ರಾಜ್ಯದಲ್ಲಿ ವಿದ್ಯುತ್ ಅಭಾವ ಇಲ್ಲ, ಬೇಡಿಕೆಗೆ ತಕ್ಕಷ್ಟು ಇದೆ. ಆದರೆ ವಿತರಣೆಗೆ ಬೇಕಾದ ಸಬ್ ಸ್ಟೇಷನ್‌ಗಳಿಗೆ ಸಮಸ್ಯೆ ಆಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು. ಸುದ್ದಿಗಾರರೊಂದಿಗೆ ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಮಾತನಾಡಿದ ಅವರು, ಈ ವರ್ಷ ನೂರು ಸಬ್ ಸ್ಟೇಷನ್ ನಿರ್ಮಾಣಕ್ಕೆ ಕೆಲಸ ನಡೆದಿದೆ. ಅಲ್ಲದೇ ರಾಜ್ಯದಲ್ಲಿ 2400 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ ಕ್ರಮ ವಹಿಸಲಾಗಿದೆ. ನಿತ್ಯ ಏಳು ಗಂಟೆ ಕರೆಂಟ್ ಕೊಡುವ ಯೋಜನೆ ರೂಪಿಸಲಾಗಿದೆ ಎಂದರು. 2400 ಮೆಗಾವ್ಯಾಟ್ ಸೋಲಾರ್ ಕರೆಂಟ್ ಉತ್ಪಾದನೆಗೆ ಹತ್ತು ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ. ಆದಷ್ಟು ಬೇಗನೆ ಈ ಕಾಮಗಾರಿ ಮುಗಿಸಲು ಕ್ರಮ ವಹಿಸುತ್ತೇವೆ. ಹಿಂದೆ ಬರ ಇದ್ದಾಗಲೇ ಕರೆಂಟ್ ಸಮಸ್ಯೆ ಆಗಿಲ್ಲ. ಈ ವರ್ಷ ಕೂಡ ಬೇಸಿಗೆಗೆ ವಿದ್ಯುತ್ ಸಮಸ್ಯೆ ಇಲ್ಲ. ಆಗುವುದೂ ಇಲ್ಲ ಎಂದು ತಿಳಿಸಿದರು.

19 ಜನರ ಮೇಲೆ ಹುಚ್ಚು ನಾಯಿ ದಾಳಿ

ಬಾಗಲಕೋಟೆ: ಒಂದೇ ದಿನದಲ್ಲಿ ಬರೋಬ್ಬರಿ 19 ಮಂದಿಗೆ ಹುಚ್ಚು ನಾಯಿಯೊಂದು ಕಚ್ಚಿದ ಘಟನೆ ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ಜರುಗಿದೆ. ಇಳಕಲ್ ನಗರದ ಗೌಳೇರಗುಡಿ, ಜ್ಯೂನಿಯರ್ ಕಾಲೇಜು, ಶರಣ ಬಸವೇಶ್ವರ ದೇವಸ್ಥಾನ, ವ್ಯಾಪ್ತಿಯಲ್ಲಿ ಮಕ್ಕಳು, ಮಹಿಳೆಯರು ಹಾಗೂ ವೃದ್ಧರ ಮುಖ, ತುಟಿ ಸೇರಿದಂತೆ ಅನೇಕ ಕಡೆಗಳಲ್ಲಿ ಕಚ್ಚಿದೆ. ಗಂಭೀರವಾಗಿ ಗಾಯಗೊಂಡ ನಾಲ್ಕು ಜನರನ್ನು ಬಾಗಲಕೋಟೆ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರೆ, ಉಳಿದ 15 ಜನರಿಗೆ ಇಳಕಲ್ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹುಚ್ಚು ನಾಯಿ ಕಚ್ಚಿದ ಪರಿಣಾಮ ನೋವು ತಾಳದೇ ಮಕ್ಕಳು ನರಳಾಡುತ್ತಿದ್ದರು. ಅವರನ್ನು ಸಮಾಧಾನಗೊಳಿಸಲು ಪೋಷಕರು ಹರಹಾಸ ಪಟ್ಟರು.

ದಲಿತರು ಸಿಎಂ ಆಗಲಿ

ಮಂಗಳೂರು: ದಲಿತ ನಾಯಕರೊಬ್ಬರು ಮುಖ್ಯಮಂತ್ರಿಯಾಗಲು ಅವಕಾಶ ನೀಡಬೇಕು ಎಂದು ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಮಹದೇವಸ್ವಾಮಿ ಎಂ.ಚಿದರವಳ್ಳಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಕುರಿತು ಈಗಾಗಲೇ ಹಲವು ಚರ್ಚೆಗಳು ನಡೆಯುತ್ತಿವೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ನೇತೃತ್ವದಲ್ಲಿ ದಲಿತ ಸಮುದಾಯದ ಒಬ್ಬ ನಾಯಕರಿಗೆ ಮುಖ್ಯಮಂತ್ರಿ ಸ್ಥಾನದ ಹೊಣೆಗಾರಿಕೆಯನ್ನು ವಹಿಸಿಕೊಟ್ಟು ರಾಜ್ಯದ ಇತಿಹಾಸದಲ್ಲಿ ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಕಾರ್ಯಕ್ಕೆ ಮುಂದಾಗಬೇಕು ಎಂದರು.

ರಾಜ್ಯೋತ್ಸವ ಪುರಸ್ಕೃತ ಪೆನ್ನ ಓಬಳಯ್ಯ ನಿಧನ

ಬೆಂಗಳೂರು: ಶನಿವಾರ ನಡೆದ 70ನೇ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ವೀಣೆ ಬ್ರಹ್ಮ ಎಂದೇ ಖ್ಯಾತರಾಗಿದ್ದ ಪೆನ್ನ ಓಬಳಯ್ಯ (103) ಅವರು ನಿಧನರಾಗಿದ್ದಾರೆ. ದೊಡ್ಡಬಳ್ಳಾಪುರ ತಾಲೂಕಿನ ಮಧುರೆ ಸಮೀಪದ ಸಿಂಪಾಡಿಪುರದ ನಿವಾಸಿ ಯಾಗಿದ್ದ ಅವರು ಇಡೀ ದೇಶಕ್ಕೆ ಸಾಂಪ್ರದಾಯಿಕ ವೀಣೆ ತಯಾರಿಸಿ ಸರಬರಾಜು ಮಾಡುತ್ತಿದ್ದರು. ಅವರಿಂದ ನೂರಾರು ಜನ ವೀಣೆ ತಯಾರಿಸು ವುದನ್ನು ಕಲಿತಿದ್ದಾರೆ. 103 ವರ್ಷದ ಪೆನ್ನ ಓಬಳಯ್ಯ ಅವರ ಈ ಸಾಧನೆಯನ್ನು ಗುರುತಿಸಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಣೆ ಮಾಡಿತ್ತು. ಪ್ರಶಸ್ತಿ ಸ್ವೀಕರಿಸಲು ಬಂದ ಪೆನ್ನ ಓಬಳಯ್ಯ ಅಸ್ವಸ್ಥರಾಗಿದ್ದರು. ಅವರ ಪರವಾಗಿ ಅವರ ಮಕ್ಕಳು ಪ್ರಶಸ್ತಿ ಸ್ವೀಕಾರ ಮಾಡಿದ್ದರು. ಪ್ರಶಸ್ತಿ ಪಡೆದ ಮರುದಿನವೇ ಅವರು ದೈವಾಧೀನರಾಗಿರುವುದು ದುರಾದೃಷ್ಟಕರ ಎಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಸಿಂಪಾಡಿಪುರದ ಹೆಸರನ್ನು ತಮ್ಮ ವೀಣೆಗಳ ಮೂಲಕ ರಾಷ್ಟ್ರಕ್ಕೆ ಪರಿಚಯಿಸಿದ ಪೆನ್ನ ಓಬಳಯ್ಯ ಅವರ ಸಾಂಸ್ಕೃತಿಕ ಸೇವೆಯನ್ನು ನೆನೆಯುತ್ತಾ ಅವರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸುತ್ತೇನೆ ಎಂದು ಸಚಿವರು ತಿಳಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
04.11.2025
ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ
ಶ್ರೀ ನವೀನ್ ಸಾಗರ್

ವಿಷಯ
"ಪ್ರವಾಸಿ ಪ್ರಪಂಚ" ಅನುಭವ
vishwavani.news

ಟನ್ ಕಬ್ಬಿಗೆ 3500 ರು. ಬೆಲೆ ನಿಗದಿಗೆ ಆಗ್ರಹ | ಹೆದ್ದಾರಿ ತಡೆದು ಬೆಳಗಾವಿ-ಬಾಗಲಕೋಟೆ ರೈತರಿಂದ ಪ್ರತಿಭಟನೆ

ಪಟ್ಟು ಸಡಿಲಿಸದ ರೈತರು: ಹೋರಾಟ ತೀವ್ರ

ಬೆಳಗಾವಿ: ಮಹಾರಾಷ್ಟ್ರ ಮಾದರಿಯಲ್ಲಿ ರಾಜ್ಯದಲ್ಲಿಯೂ ಪ್ರತಿ ಟನ್ ಕಬ್ಬಿಗೆ 3,500 ರು.ಬೆಲೆ ನೀಡುವಂತೆ ಆಗ್ರಹಿಸಿ ಬೆಳಗಾವಿ, ಬಾಗಲಕೋಟೆ ರೈತರು ಬೀದಿಗಿಳಿದಿದ್ದಾರೆ. ಕಳೆದ ಆರು ದಿನಗಳಿಂದ ನಡೆಯುತ್ತಿರುವ ಹೋರಾಟ ತೀವ್ರ ಸ್ವರೂಪ ಪಡೆಯುತ್ತಿದ್ದು ಪ್ರತಿಭಟನಾಕಾರರ ಮನವೊಲಿಸಲು ಜಿಲ್ಲಾಡಳಿತ ಹರಸಾಹಸ ಪಡುತ್ತಿದೆ.

ಬೆಳಗಾವಿಯ ಮೂಡಲಗಿ ತಾಲೂಕಿನ ಗುರ್ಲಾಪುರ ಬಳಿ ನಿಪ್ಪಾಣಿ-ಮುಧೋಳ ರಾಜ್ಯ ಹೆದ್ದಾರಿ ತಡೆದು ಪ್ರಾರಂಭವಾದ ಹೋರಾಟ ನೆರೆ ಜಿಲ್ಲೆಗಳಿಗೂ ವ್ಯಾಪಿಸಿದ್ದು, ಸಾವಿರಾರು ಸಂಖ್ಯೆಯಲ್ಲಿ ರೈತರು ಬೀದಿಗಿಳಿದು ರಾಜ್ಯ ಸರಕಾರ ಹಾಗೂ ಖಾಸಗಿ ಕಾರ್ಖಾನೆಗಳ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ರೈತರ ಹೋರಾಟಕ್ಕೆ ಯಾವೊಂದು ಸಕ್ಕರೆ ಕಾರ್ಖಾನೆ ಈವರೆಗೂ ಪ್ರಾರಂಭವಾಗಿಲ್ಲ.

ಪ್ರತಿ ಟನ್ ಕಬ್ಬಿಗೆ 3,500 ದರ ನಿಗದಿಪಡಿಸಬೇಕು. ಕಬ್ಬು ತೂಕದಲ್ಲಿ ಮೋಸವಾಗದಂತೆ ಜಿಲ್ಲಾಡಳಿತ ಎಚ್ಚರಿಕೆ ವಹಿಸಬೇಕು. ಹಾಗೆಯೇ ಕಬ್ಬಿಗೆ ವೈಜ್ಞಾನಿಕ ಬೆಲೆ ನೀಡುವ ಮೂಲಕ ರೈತರಿಗೆ ನೆರವಾಗಬೇಕೆಂದು ಈ ಹೋರಾಟ ನಡೆಸುತ್ತಿದೆ. ರೈತರ ಹೋರಾಟಕ್ಕೆ ವಿವಿಧ ರಾಜಕೀಯ ಪಕ್ಷದ ಮುಖಂಡರು, ವಿದ್ಯಾರ್ಥಿಗಳು, ಸ್ವಾಮೀಜಿಗಳು ಹಾಗೂ ವಕೀಲರು ಬೆಂಬಲ ಸೂಚಿಸಿದ್ದು ಪ್ರತಿಭಟನೆ ಕಿಚ್ಚು ಹೆಚ್ಚಿಸಿದೆ.

ರೈತರ ಹೋರಾಟಕ್ಕೆ ಮಠಾಧೀಶರ ಬೆಂಬಲ: ರೈತರ ಪ್ರತಿಭಟನೆಗೆ ವಿವಿಧ ಮಠಾಧೀಶರು ಹಾಗೂ ವಕೀಲರು ಬೆಂಬಲರಿಂದ ವ್ಯಕ್ತವಾಗಿದೆ. ಗೋಕಾಕ್ ಮುರುಘರಾಜೇಂದ್ರ ಮಹಾಸ್ವಾಮೀಜಿ, ಘಟಪ್ರಭಾ ಡಾ.ಮಲ್ಲಿಕಾರ್ಜುನ ಮಹಾಸ್ವಾಮೀಜಿ, ಸುನಧೋಳಿ ಜಡಿಸಿದ್ದೇಶ್ವರ ಮಹಾಸ್ವಾಮೀಜಿ, ಹುನಶ್ಯಾಳ ನಿಜಗುಣಿ ದೇವರು, ಬಟಕುರ್ಕಿ ಗಂಗಯ್ಯ ದೇವರು, ರಾಚೋಟೇಶ್ವರ ದೇವರು, ಮೃತ್ಯುಂಜಯ ದೇವರು, ಗುರುದೇವ ಮಹಾರಾಜರು, ಬಬಲಾದಿಯ ಕಾಲಜ್ಞಾನಿ ಮಠದ ಸಿದ್ದರಾಮಯ್ಯ ಶ್ರೀ ಸೇರಿ ನಾಡಿನ ಅನೇಕ ಮಠಾಧೀಶರು ದಿನವಿಡೀ ಆಗಮಿಸಿ ಕಾರ್ಖಾನೆ ಮಾಲೀಕರು ಹಾಗೂ ಸರಕಾರಕ್ಕೆ ಕಿವಿ ಹಿಂಡುವ ಕೆಲಸ ಮಾಡುತ್ತಿದ್ದಾರೆ.

ಹೋರಾಟಕ್ಕೆ ಧನ ಸಹಾಯ: ರಾಯಬಾಗದ ನ್ಯೂಹೊಲ್ಯಾಂಡ್ ಶೋ ರೂಂ ಮಾಲೀಕರು ಇವತ್ತಿನ ಅನ್ನ ದಾಸೋಹವನ್ನು ಏರ್ಪಡಿಸಿದರು. ಹಿಡಕಲ್ ಗ್ರಾಮದಿಂದ ಒಂದು ಟ್ರ್ಯಾಕ್ಟರ್ ರೊಟ್ಟಿ ಇತ್ಯಾದಿ ದವಸಗಳನ್ನು ಬಾಜಾ ಭಜಂತ್ರಿಗಳೊಂದಿಗೆ ತಂದು ಕೊಟ್ಟು ಅನ್ನದಾತನಿಗೆ ಬೆಂಬಲ ಸೂಚಿಸಿದರು. ಇನ್ನೂ ಅನೇಕ ಗ್ರಾಮದಿಂದ ಮಿನಿ ಲಾರಿ ಮೂಲಕ ಊಟಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಪೂರೈಸುತ್ತಿದ್ದಾರೆ.

ಪಟ್ಟು ಸಡಿಲಿಸದ ರೈತರು; ಸಂಧಾನ ವಿಫಲ: ಪ್ರತಿಭಟನಾ ನಿರತ ರೈತರ ಸಂಕಷ್ಟ ಆಲಿಸಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಸ್ಥಳಕ್ಕೆ ಆಗಮಿಸಿ ಮನವೊಲಿಸುವ ಕೆಲಸ ಮಾಡಿದರು. ಸಕ್ಕರೆ ಕಾರ್ಖಾನೆಗಳ ಜೊತೆ ನಿರಂ ತರವಾಗಿ ಮಾತುಕತೆ ನಡೆಸಲಾಗಿದ್ದು 2,300 ರು.ವರೆಗೆ ಬೆಲೆ ಕೊಡಿಸುವ ಆಶ್ವಾಸನೆ ನೀಡಿದರು. ಜಿಲ್ಲಾಧಿಕಾರಿ ಆಶ್ವಾಸನೆ ತಿರಸ್ಕರಿಸಿದ ರೈತರು 3,500 ರು. ವರೆಗೆ ಕಬ್ಬಿನ ಬೆಲೆ ನಿಗದಿ ಮಾಡಬೇಕು ಅಲ್ಲಿಯವರೆಗೆ ನಾವು ಯಾವುದೇ ಕಾರಣಕ್ಕೂ ಪ್ರತಿಭಟನೆ ವಾಪಸ್ ಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ಒಂದು ಗಂಟೆಯವರೆಗೆ ಸಂಧಾನ ನಡೆಸಿದರೂ ಯಾವುದೇ ಪ್ರಯೋಜನ ಆಗಿಲ್ಲ.

ರಾಜ್ಯ ಹೆದ್ದಾರಿ ಬಂದ್: ಪ್ರಯಾಣಿಕರ ಪರದಾಟ: ಕಳೆದ ಐದು ದಿನಗಳಿಂದ ನಿರಂತರವಾಗಿ ರೈತರು ಮೂಡಲಗಿ ತಾಲೂಕಿನ ಗುರ್ಲಾಪುರ ಕ್ರಾಸ್‌ನ ನಿಪ್ಪಾಣಿ-ಮುಧೋಳ ರಾಜ್ಯ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇದರಿಂದ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಪೊಲೀಸರು ಬದಲಿ ಮಾರ್ಗಗಳ ಮೂಲಕ ವಾಹನ ಸಂಚಾರಕ್ಕೆ ಅವಕಾಶ ನೀಡುತ್ತಿದ್ದಾರೆ. ಇನ್ನೂ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯುತ್ತಿದ್ದು, ಇದರಿಂದ ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ.

ಕಬ್ಬಿಗೆ 3500 ರು. ಬೆಲೆ ನಿಗದಿಗೆ ಆಗ್ರಹಿಸಿ ಗುರ್ಲಾಪುರ ಬಳಿ ನಿಪ್ಪಾಣಿ-ಮುಧೋಳ ರಾಜ್ಯ ಹೆದ್ದಾರಿ ತಡೆದು ರೈತರು ಬೃಹತ್ ಪ್ರತಿಭಟನೆ ಮಾಡುತ್ತಿರುವುದು.

ರೈತರ ಹೋರಾಟಕ್ಕೆ ವಿಜಯೇಂದ್ರ ಬೆಂಬಲ

ಬೆಂಗಳೂರು: ಬೆಳಗಾವಿಯಲ್ಲಿ ಕಬ್ಬು ಬೆಳೆಗಾರರ ಹೋರಾಟದಲ್ಲಿ ಪಾಲ್ಗೊಳ್ಳುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿವೆ. ಇವುಗಳ ಕಡೆ ರಾಜ್ಯ ಸರಕಾರ ಗಂಭೀರ ಚಿಂತನೆ ಮಾಡುತ್ತಿಲ್ಲ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕಗಳಲ್ಲಿ ಅತಿವೃಷ್ಟಿಯಿಂದ ರೈತರು ಸಂಕಷ್ಟದಲ್ಲಿದ್ದರು. ನಾವೂ ಪ್ರವಾಸ ಮಾಡಿದ್ದೆವು. ಜಿಲ್ಲಾ ಉಸ್ತುವಾರಿಗಳು ನಾಪತ್ತೆಯಾಗಿದ್ದಾರೆ ಎಂದರು. ರೈತರ ಸಮಸ್ಯೆ ಸಂಬಂಧ ಇಲಾಖಾ ಅಧಿಕಾರಿಗಳೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ತಕ್ಷಣ ಪರಿಹಾರ ಬಿಡುಗಡೆಗೆ ಒತ್ತಾಯಿಸಿದ್ದೇವೆ. ಆದರೆ, ಸಚಿವರು ಬೆಂಗಳೂರಿ ನಲ್ಲಿ ಕುಳಿತು ಕೇಂದ್ರ ಸರಕಾರ ಪರಿಹಾರ ಕೊಟ್ಟಿಲ್ಲ ಎಂಬ ಹೇಳಿಕೆಗೆ ಸೀಮಿತ ಮಾಡಿದ್ದಾರೆಯೇ ವಿನಾ, ಸಂಕಷ್ಟದಲ್ಲಿರುವ ರೈತರಿಗೆ ಕಾಂಗ್ರೆಸ್ ಸರಕಾರ ಪರಿಹಾರ ಕೊಟ್ಟಿಲ್ಲ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಗಿದ್ದು, ಚಾಮರಾಜ ನಗರ ಜಿಲ್ಲೆಯಲ್ಲಿ ಕೆರೆಗಳಿಗೆ ನೀರು ತುಂಬಿಸಿಲ್ಲ ವೆಂದು ಅಲ್ಲಿನ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಈ ವಿಷಯದಲ್ಲೂ ರಾಜ್ಯ ಸರಕಾರ ಗಮನ ಹರಿಸುತ್ತಿಲ್ಲ ಎಂದು ಕಿಡಿಕಾರಿದರು.

ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಗೆ ಕಲ್ಲೇಟು

ಬಾಗಲಕೋಟೆ: ಕಬ್ಬಿನ ಬಾಕಿ ಬಿಲ್ ಪಾವತಿ ಹಾಗೂ ಪ್ರಸಕ್ತ ಸಾಲಿಗೆ ಕಬ್ಬಿನ ದರ ನಿಗದಿಪಡಿಸಲು ರೈತರ ಆಗ್ರಹಿಸಿ ಜಿಲ್ಲೆಯ ಜಮಖಂಡಿ ತಾಲೂಕಿನ ಸಿದ್ದಪುರ ಗ್ರಾಮದಲ್ಲಿರುವ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಹಾಗೂ ವಾಹನಗಳ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ ಘಟನೆ ಸೋಮವಾರ ಸಂಜೆ ಜರಿಗಿದೆ.

ಹಿಂದಿನ ಬಿಲ್ ಪಾವತಿಸಿ ಹಾಗೂ ಪ್ರಸಕ್ತ ಸಾಲಿನ ಕಬ್ಬಿನ ಬಿಲ್ ದರ ನಿಗದಿ ಪಡಿಸಲು ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದ್ದರು. ಕಾರ್ಖಾನೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸದ ಕಾರಣ ರೈತರ ಕಟ್ಟೆಯೊಡೆದಿತ್ತು. ಈ ಸಂದರ್ಭದಲ್ಲಿ ಕಿಡಿಗೇಡಿಗಳು ಕಾರ್ಖಾನೆ, ಕಚೇರಿ ಹಾಗೂ ಕಾರ್ಖಾನೆಗೆ ಸೇರಿದ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಘಟನೆ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಂಡಿದ್ದಾರೆ. ನಂತರ ಶಾಂತ ಸ್ಥಿತಿಗೆ ಪ್ರತಿಭಟನೆ ಮರಳಿತು.

ಕಾರ್ಖಾನೆ ಮಾಲೀಕರು, ಸರಕಾರದ ಮೇಲಾಗಲಿ ನಮಗೆ ವಿಶ್ವಾಸವಿಲ್ಲ. ಸರಕಾರ ಇತ್ಯರ್ಥಕ್ಕೆ ಬರಬೇಕು. ಇಲ್ಲವಾದರೆ ನಮ್ಮ ಹೋರಾಟ ಉಗ್ರ ರೂಪಕ್ಕೆ ತಾಳುತ್ತದೆ. ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಕರ್ನಾಟಕದ ಪ್ರತಿಯೊಂದು ತಾಲೂಕುಗಳಲ್ಲಿ ಹೋರಾಟ ಮುಂದುವರಿಸುತ್ತೇವೆ.

-ಚೂನಪ್ಪ ಪೂಜೇರಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ

ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದು ಪ್ರತಿ ಟನ್ ಕಬ್ಬಿಗೆ 3,500 ಬೆಲೆ ನೀಡಬೇಕು. ಜತೆಗೆ ತೂಕದಲ್ಲಿ ಮೋಸವಾಗದಂತೆ ಕ್ರಮ ವಹಿಸಬೇಕು. ನಮ್ಮ ಬೇಡಿಕೆಗಳಿಗೆ ಪರಿಹಾರ ಸಿಗುವವರೆಗೂ ಪ್ರತಿಭಟನೆ ಕೈ ಬಿಡುವುದಿಲ್ಲ.

-ಶಶಿಕಾಂತ ಗುರೂಜಿ, ರೈತ ಮುಖಂಡ

ಆರ್‌ಎಸ್‌ಎಸ್ ಪಥಸಂಚಲನಕ್ಕೆ ಜಿಲ್ಲಾಡಳಿತದಿಂದ ಷರತ್ತುಬದ್ಧ ಅನುಮತಿ

ಕೆಂಭಾವಿ ಪಥ ಸಂಚಲನಕ್ಕೆ ಜಿಲ್ಲಾಡಳಿತ ಅಸ್ತು

ಯಾದಗಿರಿ: ಜಿಲ್ಲೆಯ ಕೆಂಭಾವಿ ಪಟ್ಟಣದಲ್ಲಿ ಮಂಗಳವಾರ (ನ.4) ರಂದು ನಡೆಯಲಿರುವ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಕೊನೆಗೂ ಜಿಲ್ಲಾಧಿಕಾರಿಗಳು ಷರತ್ತುಬದ್ಧ ಅನುಮತಿ ಕೊಟ್ಟಿದ್ದು, ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ಕಳೆದ ಒಂದು ವಾರದಿಂದ ಹಲವು ಗೊಂದಲಗಳಿಗೆ ಕಾರಣವಾಗಿದ್ದ ಕೆಂಭಾವಿ ಪಟ್ಟಣದಲ್ಲಿ ಆರ್‌ಎಸ್‌ಎಸ್ ಶತಾಬ್ದಿ ನಿಮಿತ್ತ ಹಮ್ಮಿಕೊಂಡಿದ್ದ ಪಥ ಸಂಚಲನಕ್ಕೆ ಡಿಎಸ್‌ಎಸ್ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಬಳಿಕ ಜಿಲ್ಲಾಡಳಿ ತಕ್ಕೆ ಇದೊಂದು ತಲೆನೋವು ತಂದೊಡಿದಿತ್ತು.

ಉಭಯ ಸಂಘಟನೆಗಳ ನಡುವೆ ಶಾಂತಿ ಸಭೆ ನಡೆಸಿ ಬಗೆಹರಿಸುವ ಪ್ರಯತ್ನ ಮಾಡಿದ್ದರೂ ವಿಫಲವಾಗಿತ್ತು.

ಅದಾಗ್ಯೂ ಕೂಡಾ ಅನುಮತಿ ಸಿಗುವ ವಿಶ್ವಾಸದಲ್ಲಿ ಪಟ್ಟಣದಲ್ಲಿ ಸಂಘ ಪರಿವಾರದವರು ಅಗತ್ಯ ಸಂಚಲನ ಮಾಡಿಕೊಂಡಿತ್ತು. ಅದರಂತೆ ಸೋಮವಾರ ಜಿಲ್ಲಾಡಳಿತ ಅನುಮತಿ ನೀಡಿದೆ.

ಆದರೆ, ಶಾಂತಿಸಭೆ ನಡೆಸದೆ ಪರ್ಮಿಷನ್ ನೀಡಿರುವ ನಡೆಗೆ ಡಿಎಸ್‌ಎಸ್ ಮುಖಂಡರು ವಿರೋಧ ವ್ಯಕ್ತಪಡಿಸಿದರು.

ಬಳಿಕ ತಹಸೀಲ್ದಾರ್, ಡಿವೈಎಸ್ಪಿ ನೇತೃತ್ವದಲ್ಲಿ ಡಿಎಸ್‌ಎಸ್ ಮುಖಂಡರ ಸಭೆ ನಡೆಸಿದಾಗ ಕೆಲವು ಷರತ್ತುಗಳನ್ನು ಮುಂದಿಟ್ಟು ಒಪ್ಪಿಗೆ ನೀಡಿದ್ದಾರೆ. ಇನ್ನೂ ಮಂಗಳವಾರ ನಡೆಯುವ ಪಥ ಸಂಚಲನಕ್ಕೆ ಯಾವುದೇ ಅಡ್ಡಿಪಡಿಸುವುದಿಲ್ಲ ಎಂದು ಎಂದು ದಲಿತ ಮುಖಂಡರು ತಿಳಿಸಿದ್ದಾರೆ.

ರಾರಾಜಿಸುತ್ತಿರುವ ಭಗವಾಧ್ವಜಗಳು

ಪಥ ಸಂಚಲನಕ್ಕೆ ಜಿಲ್ಲಾಡಳಿತ ಅವಕಾಶ ನೀಡೆ ನೀಡುತ್ತದೆ ಎಂಬ ಅಚಲ ವಿಶ್ವಾಸದೊಂದಿಗೆ ಕಳೆದ ಎರಡು ದಿನಗಳಿಂದ ಸಂಘ ಪರಿವಾರದ ಪದಾಧಿಕಾರಿಗಳು ಕೆಂಭಾವಿ ಪಟ್ಟಣವನ್ನು ಶೃಂಗಾರಗೊಳಿಸಿದ್ದು, ಇದು ಮತ್ತಷ್ಟು ಮೆರುಗು ನೀಡಿದೆ. ಪಥ ಸಂಚಲನ ಸಂಚರಿಸುವ ಪ್ರಮುಖ ಬೀದಿಗಳಲ್ಲಿ ಎಲ್ಲೆಡೆ ಭಗವಾಧ್ವಜ, ಕಟೌಟ್‌ಗಳು, ಸ್ವಾತಂತ್ರ ಸೇನಾನಿಗಳ ಸ್ವಾಗತ ಕಮಾನುಗಳು ರಾರಾಜಿಸುತ್ತಿದ್ದು ಸಂಘ ಪರಿವಾರದ ಶತಮಾನೋತ್ಸವದ ಅದ್ಭುತ ಪಥ ಸಂಚಲನಕ್ಕೆ ಪಟ್ಟಣ ಸಾಕ್ಷಿಯಾಗಲಿದೆ.

ಚುನಾವಣಾ ಪೂರ್ವದಲ್ಲಿ ಕೊಟ್ಟ ಮಾತಿನಂತೆ ಪಕ್ಷ ನಡೆಯಲಿ

ಯಶವಂತರಾಯಗೌಡ ಸಚಿವ ಸ್ಥಾನದ ಇಂಗಿತ

ವಿಜಯಪುರ: ನನಗೆ ಸಚಿವ ಸ್ಥಾನ ಕೊಡಲೇ ಬೇಕು ಅಂತಾ ಏನಿಲ್ಲ. ಕೊಟ್ಟ ಮಾತಿನಂತೆ ನಡೆಯಬೇಕು ಎಂದ ಶಾಸಕ ಯಶವಂತರಾಯಗೌಡ ಪಾಟೀಲ ಪರೋಕ್ಷವಾಗಿ ಸಚಿವ ಸ್ಥಾನದ ಆಕಾಂಕ್ಷಿ ಎಂಬ ಸಂದೇಶವನ್ನು ರವಾನೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2018 ರಲ್ಲಿ ಶಿವಾನಂದ ಪಾಟೀಲ್, ಎಂ.ಬಿ.ಪಾಟೀಲ್, ನಾನು ಗೆದ್ದಿದ್ವಿ ನಾನಾಗಿಯೇ ಸಚಿವ ಸ್ಥಾನ ಕೇಳಿಲ್ಲ. ಚುನಾವಣಾ ಪೂರ್ವದಲ್ಲಿ ಕೊಟ್ಟ ಮಾತಿನಂತೆ ನಡೆಯಬೇಕು. ನನಗೆ ನಿಗಮ ಮಂಡಳಿ ಅಧ್ಯಕ್ಷ ಆಗಿ ಅಂದ್ರು, ನಾನು ಬೇಡ, ಸಚಿವ ಸಂಪುಟದಲ್ಲಿ ನೋಡಿ ಎಂದೆ, ನಾನು ನನಗಾಗಿ ಸಚಿವ ಸ್ಥಾನ ಕೇಳ್ತಿಲ್ಲ. ಇಂಡಿ ಕ್ಷೇತ್ರದ ಜನರಿಗಾಗಿ ಸಚಿವ ಸ್ಥಾನ ಬೇಕಿದೆ. ಎಂ.ಬಿ.ಪಾಟೀಲರಿಗೆ ಮೂರು ಬಾರಿ ಅವಕಾಶ ಸಿಕ್ಕಿದೆ. ಅಪ್ಪಾಜಿ ನಾಡಗೌಡರಿಗೂ ಅವಕಾಶ ಸಿಕ್ಕಿದೆ. ಜಿಲ್ಲೆಯಲ್ಲಿ 6 ಜನ ಇದ್ದೇವೆ. ಮೂವರಿಗೆ ಅವಕಾಶ ಸಿಕ್ಕಿದೆ. ಇನ್ನೂ ಮೂವರ ಪೈಕಿ ನನಗೂ ಅವಕಾಶ ಸಿಗಲಿ ಎಂದರು.

ಹೈಕಮಾಂಡ್‌ನಲ್ಲಿ ಚರ್ಚೆಯಾಗಿದೆ

ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್ ನಾನೂ ಇದ್ದಾಗ ಮಾತುಕತೆಯಾಗಿದೆ. ಆಗ ಅಪ್ಪಾಜಿ ನಾಡಗೌಡ ಇರಲಿಲ್ಲ. ಬಣ, ಬಣ್ಣ ಬದಲಾಯಿಸೋ ರಾಜಕಾರಣಿ ನಾನಲ್ಲ. 2023 ರಲ್ಲಿ ಸಚಿವ ಸ್ಥಾನ ನನಗೆ ನೀಡುವ ಬಗ್ಗೆ ಹೈಕಮಾಂಡ್ ಎದುರು ಚರ್ಚೆ ಆಗಿದೆ. ಸುರ್ಜೇವಾಲಾ, ಸಿದ್ದರಾಮಯ್ಯ ಸೇರಿ ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್, ನನ್ನನ್ನೂ ಕರೆದಿದ್ದರು, ದೆಹಲಿಯಲ್ಲಿಯೂ ಕರೆದು ಮಾತನಾಡಿ ದ್ದಾರೆ.. ಇಷ್ಟರ ಮೇಲು ಸಚಿವ ಸ್ಥಾನ ನೀಡಲಿ ಬಿಡಲಿ. ಈ ವರೆಗೂ ಚರ್ಚೆಯಲ್ಲಿ ಯಾರಿದ್ರೂ ಎನ್ನುವ ಹೆಸರು ಹೇಳಿದಿಲ್ಲ ಇಂದು ಹೇಳಿದ್ದೇನೆ ಎಂದು ಯಶವಂತ ರಾಯಗೌಡ ಪಾಟೀಲ ಹೇಳಿದರು.

ಹೆಜ್ಜೇನು ದಾಳಿ

ಮಡಿಕೇರಿ: ಹೆಜ್ಜೇನು ಕಡಿತಕ್ಕೊಳಗಾಗಿ 30ಕ್ಕೂ ಅಧಿಕ ವಿದ್ಯಾರ್ಥಿಗಳು ಗಾಯಗೊಂಡಿರುವ ಘಟನೆ ಕೊಡಗು ಜಿಲ್ಲೆಯ ವಿರಾಜಪೇಟೆ ನಗರದ ಸರಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆದಿದೆ. ಎಂದಿನಂತೆ ವಿದ್ಯಾರ್ಥಿಗಳು ಶಾಲೆಗೆ ಬಂದು ಬೆಳಗ್ಗಿನ ಪ್ರೇಯರ್ ಮುಗಿಸಿ, ಬಿಸಿಹಾಲು ಪಡೆಯಲು ಸಾಲಿನಲ್ಲಿ ನಿಂತಿದ್ದರು. ಈ ವೇಳೆ ಸಮೀಪದ ತೋಟದಿಂದ ಹಾರಿಬಂದ ಹೆಜ್ಜೇನು ಹಿಂಡು ದಾಳಿ ನಡೆಸಿವೆ. ಮಕ್ಕಳು, ಶಾಲಾ ಶಿಕ್ಷಕರ ಮೇಲೆ ದಾಳಿಯಾಗಿದೆ. ಮಕ್ಕಳು ಚೀರಾಡುತ್ತಿದ್ದ ಶಬ್ದ ಕೇಳಿಸುತ್ತಿದ್ದಂತೆ ಸ್ಥಳೀಯರು ನೆರವಿಗೆ ಧಾವಿಸಿದ್ದಾರೆ. ಜೇನು ಓಡಿಸಿ ಮಕ್ಕಳನ್ನ ವಿರಾಜಪೇಟೆ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮುಖ್ಯಶಿಕ್ಷಕಿ ಅನ್ನಮ್ಮ ಅವರೂ ಹೆಜ್ಜೇನು ದಾಳಿಗೆ ಒಳಗಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತನಿಖೆ ನಡೆಸಿ 5 ದಿನಗಳಲ್ಲಿ ವರದಿ ಸಲ್ಲಿಸಲು ಪರಿಸರ ಸಚಿವ ಖಂಡ್ರೆ ಅರಣ್ಯಾಧಿಕಾರಿಗಳಿಗೆ ಆದೇಶ

ಖಾನಾಪುರದಲ್ಲಿ ಜೋಡಿ ಆನೆಗಳ ಸಾವು

ಬೆಳಗಾವಿ: ಜಿಲ್ಲೆಯ ಖಾನಾಪುರ ಬಳಿ ಸುಳೇಗಾಳಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಎರಡು ಆನೆ ಗಳು ಸಾವಿ ಗೀಡಾಗಿರುವ ಬಗ್ಗೆ ನೋವು ವ್ಯಕ್ತಪಡಿಸಿರುವ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತನಿಖೆಗೆ ಆದೇಶ ನೀಡಿದ್ದಾರೆ.

ಕಳೆದ ಕೆಲವು ದಿನಗಳಿಂದ ಇದೇ ಪ್ರದೇಶದಲ್ಲಿ ಆನೆಗಳು ಓಡಾಡುತ್ತಿದ್ದರೂ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸೂಕ್ತ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಮಾಡಿರುವುದೇ ಆನೆಗಳ ಸಾವಿಗೆ ಕಾರಣ ಎಂಬ ಆರೋಪವಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ಲೋಪವಿದ್ದಲ್ಲಿ ಶಿಸ್ತು ಕ್ರಮದ ಶಿಫಾರಸಿನೊಂದಿಗೆ 5 ದಿನಗಳ ಒಳಗಾಗಿ ವರದಿ ಸಲ್ಲಿಸಲು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸೂಚಿಸಿದ್ದಾರೆ. ಬೇಲಿಗೆ ವಿದ್ಯುತ್ ಸಂಪರ್ಕ ನೀಡಿ ಆನೆಗಳ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ರೀತ್ಯ ಪ್ರಕರಣ ದಾಖಲಿಸಲು ಈಶ್ವರ ಖಂಡ್ರೆ ನಿರ್ದೇಶನ ನೀಡಿದ್ದಾರೆ.

ಏನಿದು ಪ್ರಕರಣ?

ಖಾನಾಪುರ ತಾಲೂಕಿನ ಸುಳೇ ಗಾಳಿ ಮೀಸಲು ಅರಣ್ಯ ಪ್ರದೇಶ ದಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಜೊಡಾನೆಗಳು ಸಾವನ್ನಪ್ಪಿ ದ್ದವು. ಆನೆಗಳ ಹಿಂಡಿನಿಂದ ಬಂದ ಒಂದು ಗಂಡು, ಒಂದು ಹೆಣ್ಣು ಆನೆ ಮೃತಪಟ್ಟಿ ದ್ದವು. ಘಟನೆ ತಿಳಿಯುತ್ತಿದ್ದಂತೆ ನಾಗರಗಾಳಿ ವಲಯದ ಆರ್‌ಎಫ್‌ಒ ಸಚೀನ ಹೊನ ಮನಿ, ಡಿಎಫ್‌ಒ ಕ್ರಾಂತಿ ಅಧಿಕಾರಿಗಳ ತಂಡದಿಂದ ಸ್ಥಳ ಪರೀಶಿಲನೆ ನಡೆಸಲಾಗಿತ್ತು. ಮೃಗಾಲಯ ವೈದ್ಯ ನಾಗೇಶ ಹುಯಿಲಗೋಳ ಮರಣೋತ್ತರ ಪರಿಕ್ಷೆ ನಡೆಸಿದ್ದರು.

ತಿಮರೋಡಿ ಕೋರ್ಟ್‌ಗೆ ಹಾಜರು

ಮಂಗಳೂರು: ಕಳೆದ 50 ದಿನಗಳಿಂದ ನಾಪತ್ತೆಯಾಗಿ ಭೂಗತನಾಗಿದ್ದ ಬುರುಡೆ ಗ್ಯಾಂಗ್‌ನ ಮಹೇಶ್ ಶೆಟ್ಟಿ ತಿಮರೋಡಿಗೆ ಕೊನೆಗೂ ಪ್ರತ್ಯಕ್ಷವಾಗಿದ್ದಾರೆ. ಸೋಮವಾರ (ನ.3) ಬೆಳ್ತಂಗಡಿ ಕೋರ್ಟ್‌ಗೆ ಹಾಜರಾಗಿದ್ದು, ವಾರೆಂಟ್ ರೀಕಾಲ್ ಮಾಡಿ ತೆರಳಿದ್ದಾರೆ. ಕಳೆದ ವರ್ಷ ಉಜಿರೆಯಲ್ಲಿ ಸೌಜನ್ಯ ಪರವಾಗಿ ಅನಧಿಕೃತ ಬ್ಯಾನರ್ ಹಾಕಿದ್ದ ಹಿನ್ನೆಲೆಯಲ್ಲಿ ತಿಮರೋಡಿ ಸೇರಿ 6 ಮಂದಿಯ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಪೊಲೀಸರು ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದರೂ ಜಾಮೀನು ಪಡೆಯದೇ ತಿರುಗಾಡುತ್ತಿದ್ದ ತಿಮರೋಡಿಗೆ ಬೆಳ್ತಂಗಡಿ ನ್ಯಾಯಾಲಯ ವಾರೆಂಟ್ ಜಾರಿಗೊಳಿಸಿತ್ತು. ಹೀಗಾಗಿ ಸೋಮವಾರ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾಗಿ ವಾರೆಂಟ್ ರೀಕಾಲ್ ಮಾಡಿ, ತೆರಳಿದ್ದಾರೆ.

ಸೆ.18ರಂದು ತಿಮರೋಡಿಯನ್ನು ರಾಯಚೂರಿಗೆ ಗಡಿಪಾರು ಮಾಡಿ, ಪುತ್ತೂರು ಎಸಿ ಸ್ಟೆಲ್ಲಾ ವರ್ಗೀಸ್ ಆದೇಶಿಸಿದ್ದರು. 2025ರ ಸೆ.18ರಿಂದ 2026ರ ಸೆ.17ರವರೆಗೆ ಒಂದು ವರ್ಷದ ಅವಧಿಗೆ ಗಡಿಪಾರು ಮಾಡಿ ಆದೇಶಿಸಿದ್ದರು. ಆದರೆ ಅದಾದ ಬಳಿಕ ಗಡಿಪಾರು ಆದೇಶ ರದ್ದು ಕೋರಿ ಕರ್ನಾಟಕ ಹೈಕೋರ್ಟ್ ತಿಮರೋಡಿ ಅರ್ಜಿ ಸಲ್ಲಿಸಿದ್ದರು. ಅದರಂತೆ ವಿಚಾರಣೆ ನಡೆಸಿದ ಕೋರ್ಟ್ ಗಡಿಪಾರು ಆದೇಶಕ್ಕೆ ಮಧ್ಯಂತರ ತಡೆ ನೀಡಿತ್ತು.

ಮೈಸೂರು ಡಿಸಿ ಕಚೇರಿ ಆವರಣದಲ್ಲಿ ಅರಸು ಪ್ರತಿಮೆ ಅನಾವರಣಗೊಳಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬಿಹಾರದಲ್ಲಿ ಮೈತ್ರಿಕೂಟಕ್ಕೆ ಗೆಲುವು: ಸಿಎಂ ವಿಶ್ವಾಸ

ಮೈಸೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಪಕ್ಷಗಳ ಮಹಾ ಮೈತ್ರಿಕೂಟ ಜಯ ಸಾಧಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ದೇವರಾಜ ಅರಸು ಪ್ರತಿಮೆ ಅನಾವರಣಗೊಳಿಸಿ, ಸುದ್ದಿಗಾರರೊಂದಿಗೆ ಮಾತನಾಡಿ, ಬಿಹಾರದಲ್ಲಿನ ಅಧಿಕಾರ ವಿರೋಧಿ ಅಲೆ ಹಾಗೂ ಬಿಜೆಪಿ ಭ್ರಷ್ಟಾಚಾರ, ದುರಾಡಳಿತದ ಅಂಶಗಳು ಪ್ರಮುಖವಾಗಲಿದ್ದು, ಬಡವರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಕಾಂಗ್ರೆಸ್ ಪರ ಮತಚಲಾಯಿಸುವ ಭರವಸೆ ಯಿದೆ. ಈ ಬಾರಿ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದರು.

ಬಿಹಾರ ಚುನಾವಣಾ ಪ್ರಚಾರಕ್ಕೆ ಕರೆ ಬಂದರೆ ಅಗತ್ಯವಾಗಿ ತೆರಳುತ್ತೇನೆ. ಈ ಬಾರಿ ಚುನಾವಣೆಯಲ್ಲಿ ಪ್ರತಿಪಕ್ಷಗಳ ಮೈತ್ರಿಕೂಟ ಜಯ ಸಾಧಿಸುವ ಭರವಸೆಯಿದೆ. ಬಿಹಾರ ಮತದಾರರಿಗೆ ಮತ ನೀಡಲು ಕೋರಲಾಗುವುದು ಎಂದರು.

ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟವೂ ರಾಜ್ಯದ ಗ್ಯಾರಂಟಿ ಯೋಜನೆಗಳ ಭರವಸೆಗಳ ಮಾದರಿ ಅನುಸರಿಸಿದೆ. ಕರ್ನಾಟಕದಲ್ಲಿ 1.24 ಕೋಟಿ ಮಹಿಳೆಯರಿಗೆ ಪ್ರತಿ ತಿಂಗಳು 2 ಸಾವಿರ ನೀಡಲಾಗುತ್ತಿದೆ. ಇದುವರೆಗೆ ರಾಜ್ಯದಲ್ಲಿ 1 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಗ್ಯಾರಂಟಿ ಯೋಜನೆಗಳಿಗೆ ವ್ಯಯಿಸಲಾಗಿದೆ. ಹಾಲಿ ಸಿಎಂ ನಿತೀಶ್ ಕುಮಾರ್ ಅವರು ಹಲವು ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿದ್ದು, ಅವರಿಗೆ ಯಾವುದೇ ಸಿದ್ಧಾಂತವಿಲ್ಲ ಎಂದರು.

ಅಕ್ರಮ ರೆಸಾರ್ಟ್: ಶೀಘ್ರದಲ್ಲಿ ಸಭೆ: ಅರಣ್ಯ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೆಸಾರ್ಟ್‌ಗಳು ತಲೆ ಎತ್ತುತ್ತಿದ್ದು, ಸಫಾರಿ ನೆಪದಲ್ಲಿ ಜನರ ಸಂಚಾರ ಹೆಚ್ಚುತ್ತಿದೆ. ನೀರು ಮತ್ತು ಮೇವಿನ ಕೊರತೆ ಹಾಗೂ ಹುಲಿ ಚಿರತೆಗಳ ಹಾವಳಿಯಿಂದ ಕಾಡು ಪ್ರಾಣಿಗಳು ಜನವಸತಿ ಪ್ರದೇಶಕ್ಕೆ ಬರುತ್ತಿವೆ. ಈ ಬಗ್ಗೆ ಈಗಾಗಲೇ ಸಭೆ ನಡೆಸಿದ್ದು, ನನ್ನ ಅಧ್ಯಕ್ಷತೆಯಲ್ಲಿಯೂ ಸಭೆ ನಡೆ ಯಲಿದೆ. ಅಕ್ರಮ ರೆಸಾರ್ಟ್‌ಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಿರ್ಮಾಣ ಮಾಡಿರುವ ಮಾಜಿ ಸಿಎಂ ದೇವರಾಜ ಅರಸು ಅವರ ಪ್ರತಿಮೆಯನ್ನು ಸಿಎಂ ಸಿದ್ದರಾಮಯ್ಯ ಸೋಮವಾರ ಅನಾವರಣ ಗೊಳಿಸಿದರು. ಸಚಿವ ಎಚ್.ಸಿ.ಮಹದೇವಪ್ಪ ಇದ್ದರು.

ಅಸಮಾನತೆ ನಿವಾರಿಸಲು ಸರಕಾರ ನಿರಂತರ ಶ್ರಮ

ಬಹುಸಂಖ್ಯಾತ ಶೂದ್ರ ಸಮುದಾಯವನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದ್ದರಿಂದ ಅಸಮಾನತೆ ಸೃಷ್ಟಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದಿಸಿದರು. ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನೂತನವಾಗಿ ಸ್ಥಾಪಿಸಿರುವ ದೇವರಾಜ ಅರಸು ಅವರ ಪ್ರತಿಮೆ ಅನಾವರಣಗೊಳಿಸಿ ಅವರು ಮಾತನಾಡಿದರು. ನಮ್ಮ ಸರಕಾರ ಅಸಮಾನತೆ ನಿವಾರಿಸಿ ಸಮಾನ ಅವಕಾಶಗಳನ್ನು ಸೃಷ್ಟಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಜನಪರ, ಸಾಮಾಜಿಕ ನ್ಯಾಯದ ಪರ ಯೋಜನೆಗಳನ್ನು ರೂಪಿಸಿ ಜಾರಿಗೆ ತರುತ್ತಿದೆ. ಅರಸು ಅವರು ತಳ ಸಮುದಾಯಗಳಿಗೆ ಅವಕಾಶಗಳನ್ನು ಸೃಷ್ಟಿಸಿದರು. ಆ ಅವಕಾಶಗಳಿಂದ ಬಹಳ ಮಂದಿ ಸಮಾಜದ ಮುಖ್ಯವಾಹಿನಿಗೆ ಬಂದರು ಎಂದರು.

ವಿಸಿ ನಾಲೆಗೆ ಬಿದ್ದ ಕಾರು: ಚಾಲಕ ಪಾರು



ಮಂಡ್ಯ: ನಾಲೆಗೆ ಕಾರೊಂದು ಬಿದ್ದಿದ್ದು, ಚಾಲಕ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಮಂಡ್ಯ ತಾಲೂಕಿನ ಬಿ.ಯರಹಳ್ಳಿ ಬಳಿಯ ವಿಸಿ ನಾಲೆಯಲ್ಲಿ ನಡೆದಿದೆ. ಬೆಳಗಿನ ಜಾವ 4:30ರ ಸುಮಾರಿಗೆ ಘಟನೆ ಸಂಭವಿಸಿದೆ. ಮಂಡ್ಯದ ಕಲ್ಲಹಳ್ಳಿ ನಿವಾಸಿ ಕೃಷ್ಣ ಎಂಬವರು ಕ್ರೇಟಾ ಕಾರು ಚಲಾಯಿಸುತ್ತಿದ್ದರು. ಕಿರಿದಾದ ರಸ್ತೆ, ತಡೆಗೋಡೆ ಇಲ್ಲದ ಕಾರಣ ಅವಘಡ ಸಂಭವಿಸಿದೆ. ಕಾರು ನಾಲೆಗೆ ಬೀಳುತ್ತಿದ್ದಂತೆ ಚಾಲಕ ಕೃಷ್ಣ ಕಾರಿನಿಂದ ಹೊರಬಂದು ಜೀವ ಉಳಿಸಿಕೊಂಡಿ ದ್ದಾರೆ. ಸದ್ಯ ನಾಲೆಯಲ್ಲಿ ಮುಳುಗಿದ್ದ ಕಾರನ್ನು ಅಗ್ನಿಶಾಮಕ ಸಿಬ್ಬಂದಿ ಮೇಲೆತ್ತಿದ್ದಾರೆ. ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ವಿಶ್ವವಾಣಿ

ಸಂಪಾದಕೀಯ

ಸ್ತ್ರೀ ಎಂದರೆ ಅಷ್ಟೇ ಸಾಲದು...

ಇದು ದೇಶದ ಒಂದಿಡಿ ಮಹಿಳಾ ಸಮುದಾಯವೇ ಸಂಭ್ರಮಿಸುವಂಥ ಸುದ್ದಿ. ಹರ್ಮನ್ ಪ್ರೀತ್ ಕೌರ್ ನಾಯಕತ್ವದ ಭಾರತದ ಮಹಿಳಾ ಕ್ರಿಕೆಟ್ ತಂಡವು, ಮಹಿಳಾ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿ ಇತಿಹಾಸ ನಿರ್ಮಿಸಿದ್ದು ಈಗಾಗಲೇ ಜಗಜ್ಜಾಹೀರಾಗಿರುವ ವಿಷಯ. ಈ ಗೆಲುವು ಹತ್ತು ಹಲವು ಅರ್ಥಗಳನ್ನು ಸ್ಫುರಿಸಿದೆ ಮತ್ತು ಸಾಧ್ಯತೆಗಳ ಕುರಿತು ಸೂಚ್ಯವಾಗಿ ಹೇಳಿದೆ. 'ಪುರುಷ-ಪ್ರಧಾನ' ಎನಿಸಿಕೊಂಡಿರುವ ಈ ಸಮಾಜದಲ್ಲಿ ತಮಗೆ ಸಾಕಷ್ಟು ಉತ್ತೇಜನ ಸಿಕ್ಕಲ್ಲಿ, ಪುರುಷರಿಗೆ ಸಮಸಮನಾಗಿ ತಾವು ಮಿಂಚಬಲ್ಲೆವು ಎಂಬುದನ್ನು ಈ ಮಹಿಳಾಮಣಿಗಳು ತೋರಿಸಿಕೊಟ್ಟಿದ್ದಾರೆ. 'ಹೆಣ್ಣು ಎಂದರೆ ಅಡುಗೆ ಮನೆಯಲ್ಲಿ ಮಗುಚುವ ಕೈಯನ್ನು ತಿರುಗಿಸುವುದಕ್ಕೆ ಮಾತ್ರವೇ ಮೀಸಲು' ಎಂಬ ಸ್ಥಾಪಿತ ಹಣೆಪಟ್ಟಿಯನ್ನು ಕಿತ್ತೊಗೆದು, ತಮಗೆ ಬ್ಯಾಟನ್ನು ತಿರುಗಿಸುವುದಕ್ಕೂ ಬರುತ್ತದೆ ಎಂಬುದನ್ನು ಇವರೆಲ್ಲರೂ ತೋರಿಸಿಕೊಟ್ಟಿದ್ದಾರೆ; ಮಗುವನ್ನು ತೂಗುವ ಕೈಗಳು ತಮ್ಮ ಪರಿಣತಿಯಿಂದಾಗಿ ಕ್ರೀಡಾಜಗವನ್ನೂ ತೂಗಿ ಆಡಿಸಬಲ್ಲವು ಎಂಬುದನ್ನು ಸಾಬೀತುಮಾಡಿದ್ದಾರೆ. ಕ್ರಿಕೆಟ್ ಮಾತ್ರವೇ ಅಲ್ಲದೆ, ವಾಹನ ಚಾಲನೆ, ವಿಮಾನ ಹಾರಾಟ, ಪೆಟ್ರೋಲ್ ಪಂಪ್‌ಗಳ ನಿರ್ವಹಣೆ ಹೀಗೆ ಪುರುಷನಿಗಷ್ಟೇ ಮೀಸಲಾಗಿರುವಂಥವು ಎನ್ನಲಾಗುತ್ತಿದ್ದ ಹಲವು ಕ್ಷೇತ್ರಗಳಲ್ಲೂ ಮಹಿಳೆ ತನ್ನ ಸ್ಪಷ್ಟ ಹೆಜ್ಜೆಗುರುತುಗಳನ್ನು ಮೂಡಿಸುತ್ತಿರುವುದು ಹೆಮ್ಮೆಯ ಸಂಗತಿ. ಹೀಗಾಗಿ ಆಕೆಯನ್ನು 'ಸ್ತ್ರೀ' ಎಂದರೆ ಅಷ್ಟೇ ಸಾಲದು. ಇಷ್ಟಾಗಿಯೂ, ಹೆಣ್ಣಿನ ಮಹತ್ವವನ್ನು ಅರಿಯದೆ, ಆಕೆಯ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳುವ, ದೌರ್ಜನ್ಯ ಎಸಗಲು ಮುಂದಾಗುವ ದುರುಳರು ನಮ್ಮ ನಡುವೆ ಸಾಕಷ್ಟು ಇದ್ದಾರೆ. ಇಂಥ ಭಯದಿಂದಾಗಿಯೇ ಹೆಣ್ಣು ಮಕ್ಕಳು ಸಮಾಜದ ಕೆಲವೊಂದು ಕಾರ್ಯಕ್ಷೇತ್ರಗಳಲ್ಲಿ ಮುಕ್ತವಾಗಿ ತೊಡಗಿಸಿಕೊಳ್ಳಲು ಇನ್ನೂ ಸಾಧ್ಯವಾಗುತ್ತಿಲ್ಲ ಎಂದು ವಿಷಾದದಿಂದಲೇ ಹೇಳಬೇಕಾಗಿದೆ. ಈ ಕೊರತೆಯನ್ನು ಸರಿಪಡಿಸಿದಲ್ಲಿ, ಹೆಣ್ಣು ಇನ್ನೂ ಹೆಚ್ಚಿನ ರೀತಿಯಲ್ಲಿ ತನ್ನ ಕೌಶಲವನ್ನು ಸಾಬೀತುಪಡಿಸಬಲ್ಲಳು ಎಂಬುದರಲ್ಲಿ ಎರಡು ಮಾತಿಲ್ಲ.

ಸೊಂಪಾದಕೀಯ

ಕನ್ನಡಿಯೊಳಗಿನ ಗಂಟು

ಕರ್ನಾಟಕದ ಕ್ರಿಕೆಟ್ ಆಟಗಾರ ಕರುಣ್ ನಾಯರ್ ಮತ್ತೊಮ್ಮೆ ರಣಜಿ ಟ್ರೋಫಿಯಲ್ಲಿ ಅಬ್ಬರಿಸಿದ್ದಾರೆ. ಈ ಬಾರಿ ದ್ವಿಶತಕ ವೀರ ಎನ್ನಿಸಿಕೊಂಡಿದ್ದಾರೆ. ಆದರೆ ಅವರ ಈ ಅಬ್ಬರದ ಆಟ ರಣಜಿ ಪಂದ್ಯಗಳಿಗೆ ಮಾತ್ರ ಅನ್ನೋದು ಬೇಸರದ ವಿಷಯ. ಮೊದಲೇ ಕರ್ನಾಟಕದ ಆಟಗಾರರಿಗೆ ಟೀಮ್ ಇಂಡಿಯಾದಲ್ಲಿ ಸ್ಥಾನ ಸಿಗೋದು ಕಷ್ಟ. ಮೊದಲೊಂದು ಜಮಾನಾ ಇತ್ತು. ಮೊಹಮ್ಮದ್ ಅಜರುದ್ದೀನ್ ಇಂಡಿಯಾ ಟೀಮ್ ಕ್ಯಾಪ್ಟನ್ ಆಗಿದ್ದಾಗ ಕರ್ನಾಟಕದ ಆಟಗಾರರಿಗೆ ಸಿಕ್ಕಷ್ಟು ಪ್ರಾಶಸ್ತ್ಯ ಬೇರೆ ಯಾವ ಸಮಯದಲ್ಲೂ ಸಿಕ್ಕಿರಲಿಲ್ಲ. ಯಾರು ಏನೇ ಅಂದರೂ ಪ್ರತಿಭೆಗೆ ಮಾತ್ರ ಮಣೆ ಹಾಕಬೇಕು ಎಂಬಂತೆ ಆಡುವ ಹನ್ನೊಂದರ ಬಳಗದಲ್ಲಿ ಆರು ಜನ ಕರ್ನಾಟಕದ ಆಟಗಾರರನ್ನು ಅಜರ್ ಆಡಿಸಿದ್ದುಂಟು. ಅವರ ಪ್ರದರ್ಶನ ಅದ್ಭುತವಾಗಿಯೇ ಇರುತ್ತಿತ್ತು. ಹಾಗಾಗಿ ನಾಯಕನ ಈ ನಿರ್ಧಾರವನ್ನು ಟೀಕೆ ಮಾಡಲು ಯಾರಿಗೂ ಅವಕಾಶವೇ ಸಿಗುತ್ತಿರಲಿಲ್ಲ. ಹಾಗಾಗಿ ದ್ರಾವಿಡ್, ಕುಂಬ್ಳೆ, ಪ್ರಸಾದ್, ವಿಜಯ್ ಭಾರದ್ವಾಜ್, ಶ್ರೀನಾಥ್, ಸುನಿಲ್ ಜೋಷಿ, ಡೇವಿಡ್ ಜಾನ್ಸನ್ ಅವರಂಥ ಆಟಗಾರರು ಆಗ ಭಾರತ ತಂಡದಲ್ಲಿ ಮಿಂಚಿದರು. ಆದರೆ ಈಗ ಕರ್ನಾಟಕದ ಆಟಗಾರರನ್ನು ಆಯ್ಕೆ ಮಾಡುವುದೇ ಕಷ್ಟ. ಕರುಣ್ ನಾಯರ್ ಅವರಂಥ ಆಟಗಾರರು ವರ್ಷಗಟ್ಟಲೇ ಪ್ರಥಮ ದರ್ಜೆ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ತೋರಿದರೂ ಅವಕಾಶಕ್ಕಾಗಿ ಗೋಗರೆಯಬೇಕು. ಆದರೆ ನಮ್ಮ ಆಟಗಾರರು ಸಹ, ಇಲ್ಲಿ ಆಡಿ, ಭಾರತ ತಂಡಕ್ಕೆ ಅಪರೂಪಕ್ಕೆ ಅವಕಾಶ ಸಿಕ್ಕಾಗ ವಿಫಲರಾಗುತ್ತಾರೆ. ಮರಳಿ ಬಂದು ದೇಶೀಯ ಕ್ರಿಕೆಟ್‌ನಲ್ಲಿ ಮಿಂಚುತ್ತಾರೆ. ಇದಕ್ಕೆ ಕೇವಲ ಕರುಣ್ ನಾಯರ್ ಅಷ್ಟೇ ಅಲ್ಲ ಮನೀಶ್ ಪಾಂಡೆ., ರಾಬಿನ್ ಉತ್ತಪ್ಪ ಕೂಡಾ ಉದಾಹರಣೆಯಾಗಿ ಇದ್ದರು. ಅವರಿಬ್ಬರು ಕೆಲ ಸಮಯದವರೆಗಾದರೂ ಭಾರತ ತಂಡದಲ್ಲಿ ಆಡಿದರು. ಆದರೆ ಕರುಣ್ ನಾಯರ್ ಅವರದ್ದು ಬರೀ ಗೆಸ್ಟ್ ಅಪಿಯರೆನ್ಸ್ ಎನ್ನುವಂತಾಗಿದೆ. ಸದ್ಯಕ್ಕೆ ಭಾರತ ತಂಡದಲ್ಲಿ ಸತತವಾಗಿ ಅವಕಾಶ ಗಿಟ್ಟಿಸುತ್ತಿರುವ ಏಕೈಕ ಆಟಗಾರ ಅಂದ್ರೆ ಕೆ.ಎಲ್ ರಾಹುಲ್. ಅವರನ್ನು ಕೂಡಾ ಪ್ರತಿ ಪಂದ್ಯದಲ್ಲಿ ಆಡಿಸುತ್ತಿಲ್ಲ. ಆಗಾಗ ಒಳಗೆ ಹೊರಗೆ ಹೋಗಿ ಬಂದು ಆಡುತ್ತಿರುವ ಅವರಿಗೂ ಯಾವಾಗ ಗ್ರಹಚಾರ ವಕ್ಕರಿಸುತ್ತೋ ಹೇಳೋದು ಕಷ್ಟ.

ಸಂಪಾದಕರ ಸದ್ಯಶೋಧನೆ

ವಿಮಾನದ ಮೇಲೆ ಹಿಮ ಶೇಖರಣೆ

ವಿಮಾನದ ಮೇಲೆ ಹಿಮ (Icing) ಶೇಖರಣೆಯಾಗುವುದು ಸೌಂದರ್ಯದ ವಿಷಯವಂತೂ ಅಲ್ಲ. ಇದು ವಿಮಾನಯಾನ ಸುರಕ್ಷತೆ ಮತ್ತು ಕಾರ್ಯಕ್ಷಮತೆಯ ಮೇಲೆ ಅತ್ಯಂತ ಗಂಭೀರ ಮತ್ತು ಕೆಲವೊಮ್ಮೆ ಅಪಾಯಕಾರಿ ಪರಿಣಾಮಗಳನ್ನು ಬೀರುವ ಒಂದು ಜಟಿಲ ವಿದ್ಯಮಾನ ಎಂಬುದು ಅನೇಕರಿಗೆ ಗೊತ್ತಿಲ್ಲದಿರಬಹುದು. ತಾಪಮಾನವು ಶೂನ್ಯದ ಸಮೀಪವಿದ್ದಾಗ ಅಥವಾ ಮೋಡಗಳನ್ನು ದಾಟುವಾಗ ಗಾಳಿಯಲ್ಲಿರುವ ಸೂಪರ್‌ಕೂಲ್ಡ್ ನೀರಿನ ಹನಿಗಳು ವಿಮಾನದ ಮೇಲ್ಮೈಗೆ ಅಂಟಿಕೊಂಡು ಹಿಮವಾಗಿ ಗಟ್ಟಿಯಾಗುತ್ತವೆ. ಇದು ವಿಮಾನದ ಮೇಲೆ ನಾನಾ ಪರಿಣಾಮಗಳನ್ನು ಉಂಟುಮಾಡಬಹುದು. ಇದು ವಿಮಾನದ ಲಿಫ್ಟ್ (ಮೇಲಕ್ಕೆತ್ತಲು ಬೇಕಾದ ಶಕ್ತಿ) ಸಾಮರ್ಥ್ಯದ ಕುಸಿತಕ್ಕೆ ಕಾರಣವಾಗಬಹುದು. ಇದು ಹಿಮದ ಅತ್ಯಂತ ಅಪಾಯಕಾರಿ ಪರಿಣಾಮ. ವಿಮಾನದ ರೆಕ್ಕೆಗಳ ಆಕಾರವು (Airfoil) ಸುಗಮವಾದ ಗಾಳಿಯ ಹರಿವಿಗಾಗಿ ವಿನ್ಯಾಸಗೊಂಡಿರುತ್ತದೆ. ರೆಕ್ಕೆಯ ಮುಂಚಾಚಿದ ಅಂಚಿನಲ್ಲಿ (Leading Edge) ಹಿಮದ ಚಿಕ್ಕ ಪದರ ಶೇಖರಣೆಯಾದರೂ, ಅದು ರೆಕ್ಕೆಯ ಮೂಲ ಆಕಾರವನ್ನು ಬದಲಿಸುತ್ತದೆ. ಇದರಿಂದ ಗಾಳಿಯ ಹರಿವು ತೊಂದರೆಗೊಳಗಾಗುತ್ತದೆ. ಹಿಮವು ವಿಮಾನದ ರೆಕ್ಕೆಗಳ ಮೇಲೆ ಬೀರುವ ಗಾಳಿಯ ಒತ್ತಡವನ್ನು ಕಡಿಮೆ ಮಾಡಿ, ಅವುಗಳ ಲಿಫ್ಟ್ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಕೆಲವು ಸಂದರ್ಭಗಳಲ್ಲಿ, ಹಿಮವು ಲಿಫ್ಟ್ ಅನ್ನು ಶೇ.30ರಷ್ಟು ಅಥವಾ ಅದಕ್ಕಿಂತ ಹೆಚ್ಚು ಕಡಿಮೆ ಮಾಡಬಹುದು. ಇದು ವಿಮಾನವನ್ನು ಆಕಾಶದಲ್ಲಿ ಹಿಡಿದಿಡಲು ಬೇಕಾದ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಇನ್ನೊಂದು ಪರಿಣಾಮ ಡ್ರ್ಯಾಗ್ (ಎಳೆಯುವಿಕೆ) ಹೆಚ್ಚಳ. ಲಿಫ್ಟ್ ಕಡಿಮೆಯಾದಂತೆ, ಗಾಳಿಯ ಎಳೆಯುವಿಕೆ (ವಿಮಾನವನ್ನು ಹಿಂದಕ್ಕೆ ಎಳೆಯುವ ಬಲ) ತೀವ್ರವಾಗಿ ಹೆಚ್ಚುತ್ತದೆ. ಹಿಮವು ವಿಮಾನದ ಮೇಲ್ಮೈಯಲ್ಲಿ ಒರಟು ಮತ್ತು ಅಸಮವಾದ ರಚನೆಯನ್ನು ಉಂಟುಮಾಡುತ್ತದೆ. ಇದರಿಂದ ಗಾಳಿಯೊಂದಿಗೆ ಘರ್ಷಣೆ ಹೆಚ್ಚಾಗುತ್ತದೆ. ಪರಿಣಾಮ, ಡ್ರ್ಯಾಗ್ ಹೆಚ್ಚಾದಂತೆ, ವಿಮಾನವು ಒಂದೇ ವೇಗದಲ್ಲಿ ಹಾರಲು ಹೆಚ್ಚು ಎಂಜಿನ್ ಶಕ್ತಿಯನ್ನು (Thrust) ಬಳಸಬೇಕಾಗುತ್ತದೆ. ಇದು ಇಂಧನ ಬಳಕೆಯನ್ನು ಹೆಚ್ಚಿಸುತ್ತದೆ ಮತ್ತು ವಿಮಾನದ ವೇಗ ಹಾಗೂ ಹಾರಾಟದ ವ್ಯಾಪ್ತಿಯನ್ನು ಕಡಿಮೆ ಮಾಡುತ್ತದೆ. ತೀವ್ರತರವಾದ ಡ್ರ್ಯಾಗ್, ಎಂಜಿನ್‌ಗಳು ಪೂರ್ಣಶಕ್ತಿ ನೀಡಿದರೂ ವೇಗ ಕಾಯ್ದುಕೊಳ್ಳಲು ವಿಫಲವಾಗುವಂತೆ ಮಾಡಬಹುದು. ಮತ್ತೊಂದು ಪರಿಣಾಮ ತೂಕ ಹೆಚ್ಚಳ (Weight Gain). ವಿಮಾನದ ಮೇಲ್ಮೈಗಳ ಮೇಲೆ, ವಿಶೇಷವಾಗಿ ರೆಕ್ಕೆಗಳು ಮತ್ತು ಟೈಲ್ ಪ್ರದೇಶದಲ್ಲಿ, ನೀರು ಹೆಪ್ಪುಗಟ್ಟಿ ಗಮನಾರ್ಹ ಪ್ರಮಾಣದ ಹಿಮ ಶೇಖರಣೆಯಾಗುತ್ತದೆ. ಪರಿಣಾಮ, ಈ ಹಿಮದ ಭಾರವು ವಿಮಾನದ ಒಟ್ಟು ತೂಕಕ್ಕೆ ಸೇರಿಕೊಳ್ಳುತ್ತದೆ. ಹೆಚ್ಚಿದ ತೂಕವು ವಿಮಾನದ ಕಾರ್ಯಕ್ಷಮತೆಯನ್ನು ಇನ್ನಷ್ಟು ಕಡಿಮೆ ಮಾಡುತ್ತದೆ, ವಿಶೇಷವಾಗಿ ಟೇಕಾಫ್ ಮತ್ತು ಕ್ಲೈಂಬ್ (Climb) ಹಂತಗಳಲ್ಲಿ. ಕೆಲವು ಸಂದರ್ಭಗಳಲ್ಲಿ, ಇದು ವಿಮಾನದ ಗುರುತ್ವ ಕೇಂದ್ರವನ್ನು ಬದಲಾಯಿಸಬಹುದು, ಇದರಿಂದ ವಿಮಾನದ ನಿಯಂತ್ರಣ ಕಷ್ಟವಾಗುತ್ತದೆ. ಹಿಮವು ಏರೋಡೈನಮಿಕ್ ಪರಿಣಾಮಗಳ ಜತೆಗೆ, ವಿಮಾನದ ಯಾಂತ್ರಿಕ ಮತ್ತು ಸಂವೇದಕ ಭಾಗಗಳ ಮೇಲೆ ಹಾನಿಯುಂಟುಮಾಡುತ್ತದೆ. ಹಿಮವು ರೆಕ್ಕೆಗಳ ಹಿಂಭಾಗದ ಫ್ಲಾಪ್‌ಗಳು, ಎಲಿವೇಟರ್‌ಗಳು ಮತ್ತು ರಡರ್‌ಗಳ ಮೇಲೆ ಶೇಖರಣೆಯಾದಾಗ, ಅವುಗಳ ಚಲನೆಯನ್ನು ನಿರ್ಬಂಧಿಸಬಹುದು ಅಥವಾ ಜಾಮ್ ಮಾಡಬಹುದು. ಇದರಿಂದ ಪೈಲಟ್‌ಗೆ ವಿಮಾನವನ್ನು ನಿಯಂತ್ರಿಸಲು ಕಷ್ಟವಾಗುತ್ತದೆ. ವಿಮಾನದ ವೇಗ ಮತ್ತು ಎತ್ತರವನ್ನು ಅಳೆಯುವ ಪಿಟೋ ಟ್ಯೂಬ್‌ಗಳು (Pitot Tubes) ಮತ್ತು ಇತರ ಸಂವೇದಕ (ಸೆನ್ಸರ್) ಗಳ ಮೇಲೆ ಹಿಮ ಶೇಖರಣೆಯಾದರೆ, ಅವು ತಪ್ಪಾದ ಮಾಹಿತಿಯನ್ನು ನೀಡುತ್ತವೆ. ಇದರಿಂದ ಪೈಲಟ್‌ಗಳು ವಿಮಾನದ ನಿಜವಾದ ವೇಗ ಅಥವಾ ಎತ್ತರವನ್ನು ತಿಳಿಯಲು ಸಾಧ್ಯವಾಗದೇ, ಗೊಂದಲಕ್ಕೊಳಗಾಗಬಹುದು ಅಥವಾ ವಿಪತ್ತಿಗೆ ಸಿಲುಕಬಹುದು. ಈ ಅಪಾಯಗಳನ್ನು ಎದುರಿಸಲು ವಿಮಾನಯಾನದಲ್ಲಿ ಐಸ್ ಡಿಟೆಕ್ಟರ್‌ಗಳು ಮತ್ತು ಡಿ-ಐಸಿಂಗ್ ವ್ಯವಸ್ಥೆಗಳ ಆರಂಭಿಕ ಹಾಗೂ ಪರಿಣಾಮಕಾರಿ ಬಳಕೆ ಅತಿ ಮುಖ್ಯವಾಗಿದೆ. ಈ ಕಾರಣಕ್ಕಾಗಿಯೇ ಟೇಕಾಫ್‌ಗೂ ಮುನ್ನ ವಿಮಾನಗಳಿಗೆ ದ್ರವ ರಾಸಾಯನಿಕಗಳನ್ನು ಸಿಂಪಡಿಸಿ ಹಿಮವನ್ನು ತೆಗೆದುಹಾಕಲಾಗುತ್ತದೆ.

ಒಳಗಿದ್ದ ಆರು ಮಂದಿಯಲ್ಲಿ ಹೇಳೋರ್‍ಯಾರು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ರಾಜ್ಯದಲ್ಲಿ ಐತಿಹಾಸಿಕ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ಸಣ್ಣದಾಗಿ ಕೇಳಿಬರುತ್ತಿರುವ ಪ್ರಶ್ನೆಯೆಂದರೆ ಪವರ್ ಶೇರಿಂಗ್ ವಿಷಯಕ್ಕೆ ಸಂಬಂಧಿಸಿದ್ದು. ಪವರ್ ಶೇರಿಂಗ್ ವಿಷಯದಲ್ಲಿ ಯಾರಿಗೂ ಸ್ಪಷ್ಟನೆ ಇಲ್ಲದಿದ್ದರೂ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಣಗಳ ನಾಯಕರು ತಮ್ಮದೇ ಆದ ವ್ಯಾಖ್ಯಾನಗಳನ್ನು ಮಾಡುತ್ತಿದ್ದಾರೆ. ಒಪ್ಪಂದವಾಗಿದೆ ಎನ್ನುವ ವಾದವನ್ನು ಈವರೆಗೆ ಯಾರೊಬ್ಬರೂ ಒಪ್ಪಿಕೊಳ್ಳದಿದ್ದರೂ ಆಗಾಗ್ಗೆ 'ಆತ್ಮಸಾಕ್ಷಿಯ' ಮಾತಿನ ಮೂಲಕ ಒಪ್ಪಂದ ನಡೆದಿದೆ ಎನ್ನುವ ಮಾತನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೆನಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಒಪ್ಪಂದವೇನು? ಮುಂದೇನು? ಎನ್ನುವ ಪ್ರಶ್ನೆಗೆ ಆರು ಜನರನ್ನು ಹೊರತುಪಡಿಸಿ ಇನ್ನುಳಿದವರೆಲ್ಲ ಉತ್ತರಿಸುತ್ತಿರುವುದೇ ಇಂದಿನ ಈ ಗೋಜಲಿಗೆ ಕಾರಣವೆಂದರೆ ತಪ್ಪಾಗುವುದಿಲ್ಲ.

ಅಷ್ಟಕ್ಕೂ ಆಗಿರುವ ಒಪ್ಪಂದವೇನು ಎನ್ನುವ ಪ್ರಶ್ನೆ ಬಂದಾಗಲೆಲ್ಲ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ 'ತೇಲಿಸಿ' ಮಾತಾಡುತ್ತಿದ್ದಾರೆ. ಈ ಹಿಂದೆ ದೆಹಲಿಯಲ್ಲಿ ನಡೆದ ಸಭೆಯಲ್ಲಿ ಯಾವುದೇ ಒಪ್ಪಂದವಾಗಿಲ್ಲ ಎಂದು ಸಿದ್ದರಾಮಯ್ಯ ನುಡಿದಿದ್ದರೆ, 'ಆಗಿದೆ' ಎನ್ನುವ ಮಾತನ್ನು ಡಿ.ಕೆ.ಶಿವಕುಮಾರ್ ಹೇಳಿದ್ದರು. ಅದಾದ ಬಳಿಕ ಈ ವಿಷಯ ಬಂದಾಗಲೆಲ್ಲ, ಜಾರಿಕೊಳ್ಳುವ ಪ್ರಯತ್ನವನ್ನು ಇಬ್ಬರೂ ನಾಯಕರು ಮಾಡಿದ್ದಾರೆ. ಬದಲಾವಣೆಯ ಮಾತು ಬಂದಾಗಲೆಲ್ಲ ಸಿದ್ದರಾಮಯ್ಯ ಅವರು, ''ಹೈಕಮಾಂಡ್ ತೀರ್ಮಾನವೇ ಅಂತಿಮ'' ಎನ್ನುತ್ತಿದ್ದರೆ, ಡಿ.ಕೆ.ಶಿವಕುಮಾರ್ ಅವರು ''ಪ್ರಯತ್ನ ಫಲಿಸದಿದ್ದರೂ, ಪ್ರಾರ್ಥನೆ ಫಲಿಸುತ್ತದೆ'' ಎನ್ನುವ ಹೇಳಿಕೆಗೆ ಗಟ್ಟಿಯಾಗಿ ನಿಂತಿದ್ದಾರೆ. ಈ ಹೇಳಿಕೆಗಳ ಹೊರತಾಗಿಯೂ ಇಬ್ಬರು ನಾಯಕರು ತಮ್ಮದೇ ಆದ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ಸಂಪುಟ ಪುನಾರಚನೆ ಮಾಡಿಕೊಳ್ಳುವ ಮೂಲಕ ನಾಯಕತ್ವ ಬದಲಾವಣೆ ಚರ್ಚೆಗೆ 'ಫುಲ್‌ಸ್ಟಾಪ್' ಇಡುವ ಪ್ರಯತ್ನವನ್ನು ಸಿದ್ದರಾಮಯ್ಯ ಮಾಡುತ್ತಿದ್ದರೆ, ಡಿ.ಕೆ. ಶಿವಕುಮಾರ್ ಅವರು ಸಂಪುಟ ಪುನಾರಚನೆಗೂ ಮೊದಲೇ ಹೈಕಮಾಂಡ್ ತಮಗೆ ನೀಡಿದೆ ಎನ್ನಲಾಗುತ್ತಿರುವ 'ವರ'ವನ್ನು ನೆನಪಿಸಿ ಪಡೆದುಕೊಳ್ಳುವ ಉತ್ಸಾಹದಲ್ಲಿದ್ದಾರೆ.

ಈ ಅಧಿಕಾರ ಹಂಚಿಕೆಯ ಗೊಂದಲ, ಗೋಜಲುಗಳು ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಇದ್ದೇ ಇತ್ತು. ಕೆಲವರು '30-30 ತಿಂಗಳು' ಅಂದರೆ ಎರಡೂವರೆ ವರ್ಷ ಸಮಾನ ಹಂಚಿಕೆ ಎಂದರೆ, ಇನ್ನು ಕೆಲವರು 'ಮೂರು ವರ್ಷ, ಎರಡು ವರ್ಷ' ಎಂದು ಹೇಳಿದ್ದರು. ಇನ್ನೂ ಕೆಲವರು ಚುನಾವಣಾ ವರ್ಷದಲ್ಲಿ ಸಿದ್ದರಾಮಯ್ಯ ಅವರು ಡಿಕೆಗೆ ಸ್ಥಾನ ಬಿಟ್ಟುಕೊಡಬಹುದು ಎನ್ನುವ ಥಿಯರಿಯನ್ನು ಹೇಳಿದರು. ಆದರೆ, ಈ ಮಾತುಗಳನ್ನು ಹೇಳುವ ಎಲ್ಲರಿಗೂ ಅಂದಿನ ಸಭೆಯಲ್ಲಿ ಅಧಿಕಾರ ಹಂಚಿಕೆಯ ಸೂತ್ರ ಯಾವ ರೀತಿಯಲ್ಲಾಗಿದೆ ಎನ್ನುವ ಕಲ್ಪನೆಯಿಲ್ಲ ಎನ್ನುವುದು ವಾಸ್ತವ. ಏಕೆಂದರೆ, ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಮಾತ್ರ ಹಾಜರಿದ್ದರು. ಇನ್ನುಳಿದಂತೆ ಸೋನಿಯಾ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಿಡಿಯೊ ಕಾಲ್‌ನಲ್ಲಿ ಮಾತಾಡಿದ್ದರು. ಸಭೆ ನಡೆದ ಕೋಣೆಯಲ್ಲಿ ಈ ಆರು ಜನರನ್ನು ಬಿಟ್ಟು ಇನ್ಯಾರಿಗೂ ಪ್ರವೇಶವೂ ಇರಲಿಲ್ಲ. ಆದ್ದರಿಂದ ಆ ಸಭೆಯಲ್ಲಿ ಏನಾಯಿತು ಎನ್ನುವುದು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ 'ಆತ್ಮಸಾಕ್ಷಿ'ಗೆ ಮಾತ್ರ ಗೊತ್ತಿದೆ. ಈ ಇಬ್ಬರನ್ನುಬಿಟ್ಟರೆ ರಾಹುಲ್ ಗಾಂಧಿ ಅವರಿಂದ ವಿಷಯ ತಿಳಿದುಕೊಳ್ಳಲು ರಾಜ್ಯ ನಾಯಕರಿಗೆ ಸಾಧ್ಯವಿಲ್ಲ. ಇನ್ನುಳಿದಂತೆ ಸಭೆಯಲ್ಲಿದ್ದ ಖರ್ಗೆ, ವೇಣುಗೋಪಾಲ್ ಹಾಗೂ ಸುರ್ಜೇವಾಲ ಅವರಿಗೆ ಈ ಸಭೆಯಲ್ಲಿನ ತೀರ್ಮಾನದ 'ಸೂಕ್ಷ್ಮತೆ'ಯ ಅರಿವು ಇರುವುದರಿಂದ ಯಾರೊಂದಿಗೂ ಸಭೆಯ ವಿಷಯವನ್ನು ಹಂಚಿಕೊಂಡಿಲ್ಲ. ಸಿದ್ದರಾಮಯ್ಯ ಅವರು 'ಏನೂ ಆಗಿಲ್ಲ' ಎನ್ನುವ ಮಾತನ್ನು ಹೇಳಿದ್ದರೆ, ಡಿ.ಕೆ.ಶಿವಕುಮಾರ್ ಅವರು 'ಎಲ್ಲಕ್ಕೂ ಕಾಲವೇ ಉತ್ತರಿಸಲಿದೆ' ಎನ್ನುವ ಮಾತನ್ನು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಇದರೊಂದಿಗೆ ಬದಲಾವಣೆಯ ಒಪ್ಪಂದವಾಗಿದ್ದರೆ ಅದನ್ನು ಬಹಿರಂಗಗೊಳಿಸಿದರೆ ಸರಕಾರ ನಡೆಸಲಾಗುವುದಿಲ್ಲ ಎನ್ನುವ ಕಾರಣಕ್ಕೆ ಪ್ರಮಾಣ ವಚನದ ಸಮಯದಲ್ಲಿ ಯಾವುದೇ ಸ್ಪಷ್ಟತೆಯನ್ನು ಹೈಕಮಾಂಡ್ ನೀಡಿಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಈ ವಿಷಯಕ್ಕೆ ಆಸ್ಪದ ನೀಡಿಲ್ಲ. ಹೀಗಿರುವಾಗ, ಈ ಆರು ಮಂದಿಯ ನಡುವೆ ನಡೆದಿರುವ ಸಭೆಯ ಮಾಹಿತಿ ಹೊರಗೆ ಬಂದಿಲ್ಲ ಎನ್ನುವುದಾದರೆ ನಾಯಕತ್ವ ಬದಲಾವಣೆ ಒಪ್ಪಂದ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ ಯಾವ ಆಧಾರದಲ್ಲಿ ಮಾತಾಡಲು ಸಾಧ್ಯ? ಸದ್ಯ ಕರ್ನಾಟಕದ ಪಾಲಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೂ ಮುಖ್ಯರಾಗಿರುವುದರಿಂದ ಪಕ್ಷದ ಹೈಕಮಾಂಡ್ ಸಹ ಈ ವಿಷಯದಲ್ಲಿ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಈ ಮುಸುಕಿನೊಳಗಿನ ಗುದ್ದಾಟವನ್ನು ಬಗೆಹರಿಸುವುದಕ್ಕೆ ಇರುವ ಸುಲಭ ಮಾರ್ಗವೆಂದರೆ ಅದು 'ಗಾಂಧಿ ಕುಟುಂಬ'ದಿಂದ ಸಂದೇಶ ರವಾನೆ. ಸೋನಿಯಾ ಗಾಂಧಿ ಅಥವಾ ರಾಹುಲ್ ಗಾಂಧಿ ಅವರು ಈ ಇಬ್ಬರಲ್ಲಿ ಯಾರಿಗೇ 'ಹೊಂದಾಣಿಕೆ' ಮಾಡಿಕೊಳ್ಳಿ ಎನ್ನುವ ಸಂದೇಶ ರವಾನಿಸಿದರೂ, ಅಲ್ಲಿಗೆ ಕುರ್ಚಿ ಕಾದಾಟಕ್ಕೆ ತೆರೆ ಬೀಳಲಿದೆ. ಆದರೆ ಈ ಮಾತನ್ನು ಯಾರಿಗೆ ಹೇಳಬೇಕು ಎನ್ನುವ ಗೊಂದಲ ಇಂದಿನ ಈ ಸಮಸ್ಯೆಗೆ ಕಾರಣ ಎಂದರೆ ತಪ್ಪಾಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಾಗಲಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಾಗಲಿ ಅವರದ್ದೇ ಕಾರಣಗಳಿಗೆ ಸೋನಿಯಾ ಗಾಂಧಿ ಮಾತಿಗೆ ಕಟ್ಟುಬೀಳುವುದರಲ್ಲಿ ಅನುಮಾನವಿಲ್ಲ. ಆದರೆ ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಉದಯಿಸಿದ್ದ 'ನಾಯಕತ್ವ'ದ ಸಮಸ್ಯೆಯಿಂದ ಪಾರಾಗಲು ಇಬ್ಬರಿಗೂ ಸೋನಿಯಾ ಹಾಗೂ ರಾಹುಲ್ ಗಾಂಧಿ ಕೊಟ್ಟಿರುವ ಮಾತುಗಳೇ ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸುವಂತೆ ಮಾಡಿವೆಯೇ ಎನ್ನುವ ಪ್ರಶ್ನೆಗೆ ನಾಯಕರ ಬಳಿ ಉತ್ತರವಿಲ್ಲ. ಇದ್ದರೂ ಈ ಹಂತದಲ್ಲಿ 'ಬಾಯಿ' ಬಿಡಲು ಸಿದ್ಧರಿಲ್ಲ.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದು 30 ತಿಂಗಳು ಅಂದರೆ ಎರಡೂವರೆ ವರ್ಷದ ಹೊಸ್ತಿಲಿನಲ್ಲಿ ಈ ರೀತಿಯ ಗೊಂದಲ ಸೃಷ್ಟಿಯಾಗುವುದು ನಿಶ್ಚಿತ ಎನ್ನುವುದು ಪ್ರಮಾಣ ವಚನ ಸ್ವೀಕರಿಸಿದ ಮೊದಲ ದಿನವೇ ಸಿಎಂ ಹಾಗೂ ಡಿಸಿಎಂ ಇಬ್ಬರಿಗೂ ತಿಳಿದಿತ್ತು. ಆಗಾಗ್ಗೆ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆಗಳಾಗುತ್ತಿದ್ದರೂ, ಹೈಕಮಾಂಡ್ ಎಚ್ಚರಿಕೆಯ ಬಳಿಕ ಎಲ್ಲವೂ ಬೂದಿ ಮುಚ್ಚಿದ ಕೆಂಡವಾಗಿತ್ತು. ಆದರೆ 'ಬೂದಿ ಮುಚ್ಚಿದ್ದ ಕೆಂಡವಾಗಿದ್ದ' ರಾಜ್ಯ ಕಾಂಗ್ರೆಸ್‌ನಲ್ಲಿ ಕಾಡ್ಗಿಚ್ಚಾಗುವಂತೆ ಮಾಡಿದ್ದು ಮಾತ್ರ ಸಿದ್ದರಾಮಯ್ಯ ಪುತ್ರ ಯತೀಂದ್ರ ಅವರ ಉತ್ತರಾಧಿಕಾರಿ ಹೇಳಿಕೆ. ಈ ಹೇಳಿಕೆಯ ಬೆನ್ನಲ್ಲೇ, ದಲಿತ ಮುಖ್ಯಮಂತ್ರಿ ಹಾಗೂ ಬಿಹಾರ ವಿಧಾನಸಭಾ ಚುನಾವಣೆ ಬಳಿಕ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗುವುದಾಗಿ ಹೇಳುತ್ತಿದ್ದಂತೆ, ಡಿ.ಕೆ. ಶಿವಕುಮಾರ್ ದೆಹಲಿಯಲ್ಲಿ ಒಂದು ಸುತ್ತು ಹಾಕಿಬಂದರು. ಈ ವೇಳೆ ಯಾರನ್ನು ಭೇಟಿಯಾಗಿದ್ದಾರೆ ಎನ್ನುವ ವಿಷಯದಲ್ಲಿ ಈಗಲೂ ಹಲವು ರೀತಿಯ 'ಥಿಯರಿ'ಗಳಿವೆ. ಈ ಎಲ್ಲ ಥಿಯರಿಗಳ ಹೂರಣವೆಂದರೆ ಅದು 'ಅಧಿಕಾರ ಹಂಚಿಕೆಯ ಸೂತ್ರ' ಎನ್ನುವುದು ಸ್ಪಷ್ಟ. ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಿದ್ದ ಸಮಯದಲ್ಲಿ ಹೈಕಮಾಂಡ್ ಮಟ್ಟದಲ್ಲಿ ಯಾರನ್ನೂ ಅಧಿಕೃತವಾಗಿ ಭೇಟಿಯಾಗಿಲ್ಲ. ಆದರೆ ಭೇಟಿಯ ಮೂಲಕ ಸಂದೇಶ ರವಾನಿಸುವ ಪ್ರಯತ್ನವನ್ನು ಮಾಡಿದ್ದರು. ಅದಕ್ಕೆ ಪೂರಕವಾಗಿಯೇ, ಡಿಕೆಶಿ ದೆಹಲಿಗೆ ತೆರಳುತ್ತಿದ್ದಂತೆ, ಸಿದ್ದರಾಮಯ್ಯ ಆಪ್ತರು 'ನಾಯಕತ್ವ' ಬದಲಾವಣೆಯಿಲ್ಲ ಎನ್ನುವ ಕೂಗನ್ನು ಶುರು ಮಾಡಿದರು. ಈ ಎಲ್ಲ ಗೊಂದಲಗಳ ನಡುವೆಯೂ ಡಿ.ಕೆ.ಶಿವಕುಮಾರ್ ಅವರು ಮಾತ್ರ ಮಹಾಮೌನಕ್ಕೆ ಜಾರಿರುವುದು ಹಲವರ ಅಚ್ಚರಿಗೆ ಕಾರಣವಾಗಿದೆ. ಈ ಮೌನದ ಹಿಂದೆ ಹತ್ತಾರು ಆಲೋಚನೆಗಳಿದ್ದರೂ, ಅವರು 'ಆತ್ಮಸಾಕ್ಷಿ'ಯ ಮಾತನ್ನು ಆಡುತ್ತಿರುವುದನ್ನು ನೋಡಿದರೆ ದೆಹಲಿಯಲ್ಲಿ ಅಧಿಕಾರ ಹಂಚಿಕೆಯ ಸೂತ್ರ ಸಿದ್ಧಪಡಿಸುವುದಕ್ಕೆ ನಡೆದ ಸಭೆಯಲ್ಲಿ ಏನೆಲ್ಲ ಚರ್ಚೆಗಳಾಗಿವೆ ಎನ್ನುವ ಕಲ್ಪನೆಗಳಿಗೆ ಮತ್ತಷ್ಟು ಹೊಸ ಕುತೂಹಲಗಳಿಗೆ ಅದು ನಾಂದಿ ಹಾಡುವಂತಿದೆ.

2023ರಲ್ಲಿ ಭರ್ಜರಿ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ವಾರಗಟ್ಟಲೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ನಡೆದಿದೆ, ನಡೆದಿಲ್ಲ ಎನ್ನಲಾಗುತ್ತಿರುವ ಒಪ್ಪಂದದ ಬಗ್ಗೆ ಈ ಆರು ಜನರನ್ನು ಬಿಟ್ಟು ಇನ್ಯಾರಿಗೂ ಗೊತ್ತಿಲ್ಲ. ಹೀಗಿರುವಾಗ, ಈ ಆರು ಮಂದಿಯನ್ನು ಬಿಟ್ಟು ಇನ್ಯಾರೇ ಈ ಬಗ್ಗೆ ಮಾತನಾಡಿದರೂ, ಉತ್ತರಾಧಿಕಾರಿ, ನಾಯಕತ್ವ ಬದಲಾವಣೆ, ಪವರ್ ಶೇರಿಂಗ್‌ನ ಮಾತುಗಳನ್ನು ಆಡಿದರೂ ಅದು 'ಅಧಿಕೃತ'ವಲ್ಲ ಎನ್ನುವುದು ವಾಸ್ತವ. ಆದರೂ ತಮ್ಮ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು, ತಮ್ಮ ತಮ್ಮ ನಾಯಕರನ್ನು ಒಲಿಸಿಕೊಳ್ಳಲು ಅಥವಾ ಇಬ್ಬರ ಕಿತ್ತಾಟದಲ್ಲಿ ನಮಗೇನಾದರೂ ಲಾಭವಾಗಬಹುದೇ ಎನ್ನುವ ಕಾರಣಕ್ಕೆ 'ಕೇಳಿಸಿಕೊಂಡದ್ದು, ತಿಳಿದುಕೊಂಡದ್ದನ್ನು' ಮುಂದಿಟ್ಟುಕೊಂಡು ಕಾಂಗ್ರೆಸ್‌ನ ಎಲ್ಲ ನಾಯಕರೂ ಮಾತನಾಡುತ್ತಿದ್ದಾರೆ. ಈ ಅಂತೆ-ಕಂತೆ ಕಥೆಗಳಿಂದ ಪಕ್ಷಕ್ಕೆ ಆಗುವ ಲಾಭವೇನು ಎನ್ನುವುದು ಯಾರಿಗೂ ಗೊತ್ತಿಲ್ಲ. ಸದ್ಯ ಬಿಹಾರ ವಿಧಾನಸಭಾ ಚುನಾವಣೆಯನ್ನು ಮುಂದಿಟ್ಟುಕೊಂಡು ಕರ್ನಾಟಕ ಕಾಂಗ್ರೆಸ್‌ನ ಗೊಂದಲವನ್ನು ಮುಂದೂಡುವ ಲೆಕ್ಕಾಚಾರದಲ್ಲಿ ದೆಹಲಿಯಲ್ಲಿರುವ ನಾಯಕರು ಪ್ರಯತ್ನಿಸುತ್ತಿದ್ದಾರೆ. ಆದರೆ ಆ ರಾಜ್ಯದ ಫಲಿತಾಂಶ ಬಂದ ಬಳಿಕ ಈ ಎಲ್ಲ ಗೊಂದಲಗಳಿಗೆ ರಾಹುಲ್ ಗಾಂಧಿ ಅವರು ತೆರೆ ಎಳೆಯುವ ಪ್ರಯತ್ನವನ್ನು ಮಾಡಲೇಬೇಕು. ಇಲ್ಲದೇ ಹೋದರೆ, ಈಗಿರುವ ಹತ್ತಾರು 'ಕಥೆ'ಗಳಿಗೆ ಮುಂದಿನ ದಿನದಲ್ಲಿ ಇನ್ನೂ 10 ಹೆಚ್ಚುವರಿ ಕಥೆಗಳು ಸೇರಿಕೊಂಡರೂ ಅಚ್ಚರಿಯಿಲ್ಲ. ಸಿಕ್ಕರೆ ಒಂದು ಅವಕಾಶ ನೋಡಿಯೇ ಬಿಡೋಣ ಎಂದು ಕೆಲವರು ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವಂತೆ, ಮುಂದಿನ ದಿನದಲ್ಲಿ ಈ ಸಂಖ್ಯೆ ಕೈಮೀರುವ ಹಂತ ತಲುಪುವದರಲ್ಲಿ ಅನುಮಾನವೂ ಇಲ್ಲ.

ಕೊನೆಯದಾಗಿ ಇತರೆ ರಾಜ್ಯಗಳಲ್ಲಿನ ನಾಯಕತ್ವದ ಕೊರತೆಯು ದೆಹಲಿ ನಾಯಕರಿಗೆ ತಲೆನೋವಾಗಿದ್ದರೆ, ಕರ್ನಾಟಕದಲ್ಲಿ ನಾಯಕತ್ವ ಹೆಚ್ಚಾಗಿ ತಲೆಬಿಸಿಯಾಗುತ್ತಿದೆ ಎಂದರೆ ತಪ್ಪಾಗುವುದಿಲ್ಲ. ಒಟ್ಟಾರೆ, ಕಾಂಗ್ರೆಸ್ ಪಾಲಿಗೆ ಪ್ರಮುಖ ರಾಜ್ಯ ಎನಿಸಿರುವ ಕರ್ನಾಟಕದಲ್ಲಿನ ಆಂತರಿಕ ಬೇಗುದಿಯನ್ನು ಶಮನಮಾಡುವಲ್ಲಿ ಹೈಕಮಾಂಡ್ ಸಫಲವಾಗುವುದೋ ಅಥವಾ ಸಿದ್ದು-ಡಿಕೆಯಲ್ಲಿ ಒಬ್ಬರನ್ನು ಸಮಾಧಾನಪಡಿಸುವಲ್ಲಿ ವಿಫಲವಾಗಿ ಏನಾಗುವುದೋ ಆಗಲಿ ಎಂದು ಕೈಚೆಲ್ಲಿ ಕೂರುವುದೋ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮಾರ್ಮಿಕ ಬರಹ

ರಾಜ್ಯ ಪ್ರಶಸ್ತಿ; ಅರ್ಹರಿಗೆ ಮುಂದಿನ ಬಾರಿ..' ಶೀರ್ಷಿಕೆಯ ಕಿರಣ್ ಉಪಾಧ್ಯಾಯ ಅವರ ಅಂಕಣ ಬರಹ ಮಾರ್ಮಿಕವಾಗಿದ್ದು, ಯೋಚಿಸುವಂತೆ ಮಾಡಿತು. ಅಂಕಣಕಾರರು ಸಾಕಷ್ಟು ವರ್ಷಗಳಿಂದ ನೆಲೆಗೊಂಡಿರುವ ಕೊಲ್ಲಿ ರಾಷ್ಟ್ರದಲ್ಲೂ ಸೂರ್ಯ ಹುಟ್ಟುತ್ತಾನೆ-ಮುಳುಗುತ್ತಾನೆ; ಗಾಳಿ ಬೀಸುತ್ತಿದೆ. ಅಲ್ಲೂ ಸಾಧಕರು, ಕಲಾವಿದರು, ಸಾಹಿತಿಗಳಿದ್ದಾರೆ. ಇಲ್ಲಿಯ ಹಾಗೆ ಯಾವ ಪ್ರಶಸ್ತಿಗಳೂ ಇಲ್ಲದಿದ್ದರೂ, ಅಲ್ಲಿನ ಜನರು ಬದುಕುತ್ತಿದ್ದಾರೆ ಎಂಬುದು ಎಷ್ಟು ಸತ್ಯವೋ, ನಮ್ಮಲ್ಲಿ ಪ್ರಶಸ್ತಿ-ಪುರಸ್ಕರ, ಸನ್ಮಾನ-ಸರ್ಟಿಫಿಕೇಟ್ ಇವಾವುದೂ ಇಲ್ಲದೆ ಬದುಕೇ ಇಲ್ಲ ಎಂಬಂತಿದೆ. ಅದೂ, ಪ್ರತಿ ವರ್ಷ, ಸಂದರ್ಭಕ್ಕೆ ಅನುಗುಣವಾಗಿ ಕೆಲ ಸಂಖ್ಯೆಗಳನ್ನು ನಿಗದಿಪಡಿಸಿ, ಜನರಿಗೆ ಪ್ರಶಸ್ತಿಗಳನ್ನು ಸಮರ್ಪಿಸುವುದು. ಈ ಬಾರಿ 70ನೇ ರಾಜ್ಯೋತ್ಸವ, ಹೀಗಾಗಿ 70 ಜನರಿಗೆ ಪ್ರಶಸ್ತಿ! ಲೆಕ್ಕಾಚಾರ ಅತ್ಯಂತ ಸರಳ, ಈ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವ ಪ್ರಮೇಯವೂ ಇಲ್ಲ.

ಅಂಕಣದಲ್ಲಿ ಲೇಖಕರು ಕೆಲ ಮಹತ್ವದ ಸಂಗತಿಗಳನ್ನು ತಿಳಿಹೇಳಿದ್ದಾರೆ: ಪ್ರಶಸ್ತಿ 'ಪುರಸ್ಕೃತರಿ'ಗೆ ಅವರ ಸಾಧನೆಗೆ ಸಂದ ಗೌರವ, ಪ್ರಶಸ್ತಿ 'ವಿಜೇತ'ರಿಗೆ ಅವರು ಪಟ್ಟ 'ಶ್ರಮ'ಕ್ಕೆ! ಹಾಗಿದ್ದರೆ ಸಾಧನೆ ಮಾಡಲು ಶ್ರಮ ಇರಲೇಬೇಕಲ್ಲವೇ? ವಾಸ್ತವ ಅದಲ್ಲವೇ ಅಲ್ಲ. ಪ್ರಶಸ್ತಿಯನ್ನು ಪಡೆದುಕೊಳ್ಳುವುದಲ್ಲ, ಬದಲಿಗೆ 'ಹೊಡೆದುಕೊಳ್ಳುವುದು'! ಇಲ್ಲಿಯೇ ಬರುವುದು ಒಬ್ಬರ ಶ್ರಮದ ಲೆಕ್ಕಾಚಾರ. ಪ್ರಶಸ್ತಿ ಬಂದವರಲ್ಲಿ ಅನೇಕರ ಹೆಸರನ್ನು ಇಲ್ಲಿಯತನಕ ನಾವು ಕೇಳದಿದ್ದರೇನಂತೆ, ಆಯ್ಕೆ ಸಮಿತಿಗಾದರೂ ಅದು ತಿಳಿದಿದೆಯಲ್ಲವೇ! ಮತ್ತಿನ್ನೇನು ಬೇಕು? ಅವರೆಲ್ಲರೂ ಪ್ರಾಮಾಣಿಕ ಕಾರ್ಯಕರ್ತರೋ, 'ಉಘೇ ಉಘೇ' ಎನ್ನುತ್ತಾ ಸದಾ ಸುತ್ತ ತಿರುಗುವವರೋ, ತೀರಾ ಹತ್ತಿರದ ಸಂಬಂಧಿಯೋ ಇದ್ದಿರಲೇಬೇಕಲ್ಲವೇ? ಇಲ್ಲವೆಂದರೆ ಸುಖಾಸುಮ್ಮನೆ ಪ್ರಶಸ್ತಿ ಬಂದುಬಿಡುತ್ತದೆಯೇ?

ಒಟ್ಟಿನಲ್ಲಿ, ಪ್ರಶಸ್ತಿ ನೀಡಿಕೆ ಎಂಬ 'ರಂಗಪ್ರಸ್ತುತಿ'ಯ ನೇಪಥ್ಯದಲ್ಲಿನ ಚಟುವಟಿಕೆಗಳನ್ನು ಅಂಕಣಕಾರರು ಚೆನ್ನಾಗಿ ಹರವಿಟ್ಟಿದ್ದಾರೆ ಎನ್ನಲಡ್ಡಿಯಿಲ್ಲ! ಇಷ್ಟೆಲ್ಲಾ ಜಾಗರೂಕತೆ ವಹಿಸಿ, ಪ್ರಶಸ್ತಿ ಪಟ್ಟಿಯನ್ನು ಸಿದ್ಧಪಡಿಸಿದ ನಂತರವೂ ಒಂದಷ್ಟು ಹೆಸರುಗಳು ಉಳಿದುಕೊಂಡಿತು ಎಂದಾದರೆ, 'ಅರ್ಹರಿಗೆ ಮುಂದಿನ ಬಾರಿ ಗ್ಯಾರಂಟಿ' ಎಂದರಾಯಿತು!

- ಶಂಕರನಾರಾಯಣ ಭಟ್, ಮಾಡಗೇರಿ

ಸಂವಾದಕ್ಕೆ ಜೀವ ತುಂಬಲಿ

ಇಂದಿನ ರಾಜಕೀಯ ಪರಿಸರದಲ್ಲಿ ಬಹುತೇಕ ಎಲ್ಲ ರಾಜಕಾರಣಿಗಳು ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸೇರಿದಂತೆ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿರುವುದು ಕಂಡುಬರುತ್ತದೆ. ಆದರೆ, ಈ ಸಕ್ರಿಯತೆ ಹೆಚ್ಚಿನ ಸಂದರ್ಭಗಳಲ್ಲಿ ಏಕಪಕ್ಷೀಯವಾಗಿದ್ದು, ತಮ್ಮ ಘೋಷಣೆಗಳು, ಕಾರ್ಯಕ್ರಮಗಳ ವರದಿ, ಸ್ವಪ್ರಚಾರಕ್ಕೆ ಮಾತ್ರ ಸೀಮಿತವಾಗಿರುವುದು ವಿಷಾದನೀಯ. ಸಾಮಾಜಿಕ ಮಾಧ್ಯಮ ಎಂದರೆ ಕೇವಲ ಪ್ರಕಟಣೆಗಳ ವೇದಿಕೆ ಮಾತ್ರವಲ್ಲ; ಅದು ಜನರೊಂದಿಗೆ ನೇರ ಸಂವಾದ ನಡೆಸುವ ಜೀವಂತ ವೇದಿಕೆ. ನಾಗರಿಕರು ಕೇಳುವ ಪ್ರಶ್ನೆಗಳು, ನೀಡುವ ಸಲಹೆಗಳು, ವ್ಯಕ್ತಪಡಿಸುವ ಅಸಮಾಧಾನಗಳಿಗೆ ಸ್ಪಂದಿಸುವುದು ಜನಪ್ರತಿನಿಧಿಗಳ ಮೂಲಭೂತ ಜವಾಬ್ದಾರಿಯಾಗಬೇಕು. ಜನರ ಧ್ವನಿಗೆ ಪ್ರತಿಧ್ವನಿ ನೀಡುವ ನೀತಿಯುತ ಬದ್ಧತೆಯಿಲ್ಲದಿದ್ದರೆ, ಈ ಖಾತೆಗಳ ಅಸ್ತಿತ್ವ ಅರ್ಥಹೀನವಾಗುತ್ತದೆ.

- ಜಿ.ನಾಗೇಂದ್ರ, ಕಾವೂರು, ಸಂಡೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಎಲ್ಲ ಶಿಲ್ಪಗಳಿಗೂ ಒಂದೊಂದು ಹಿಂದಿನ ಕಥೆಯಿದೆ...

ಪದಸಾಗರ
ನವೀನ್ ಸಾಗರ್
vveditoped@gmail.com

ಭಾರತದ ಕ್ರಿಕೆಟ್‌ನ ಸುವರ್ಣಯುಗ ಇದು. ಅತ್ತ ರೋಹಿತ್ ಪಡೆ ಟಿ-ಟ್ವೆಂಟಿ ವಿಶ್ವಕಪ್ ಗೆದ್ದು ವಿಕ್ರಮ ಸಾಧಿಸಿದ ಮರುವರ್ಷವೇ ಮಹಿಳಾ ಕ್ರಿಕೆಟಿಗರು ಐಸಿಸಿ ವಿಶ್ವಕಪ್ ಗೆದ್ದು ಇತಿಹಾಸ ಬರೆದಿದ್ದಾರೆ. ಲೀಗ್ ಹಂತದಲ್ಲಿ ಕುಂಟುತ್ತಾ ಸಾಗಿ, ಹಾಗೂ ಹೀಗೂ ನಾಕೌಟ್ ಹಂತ ತಲುಪಿದ್ದ ಭಾರತದ ವನಿತೆಯರು, ಸೆಮಿಫೈನಲ್ ಮತ್ತು ಫೈನಲ್‌ನಲ್ಲಿ ಆಡಿದ್ದು ಮಾತ್ರ ಅಚ್ಚರಿಗೊಳಿಸುವ ಆಟ. ಸೆಮಿಫೈನಲ್‌ನಲ್ಲಿ ಬಲಾಢ್ಯ ಆಸ್ಟ್ರೇಲಿಯನ್ನರನ್ನು ಮಣಿಸಿದಾಗಲೇ ಹರ್ಮನ್ ಪ್ರೀತ್ ಕೌರ್ ಪಡೆ ಕಪ್ ಮೇಲೆ ಕೈ ಇರಿಸಿ ಆಗಿತ್ತು. ಆ ಗೆಲುವು ಕೊಟ್ಟ ಆತ್ಮವಿಶ್ವಾಸವೇ ಫೈನಲ್‌ನಲ್ಲಿ ಆಫ್ರಿಕಾವನ್ನು ಸೋಲಿಸುವ ಶಕ್ತಿ ಕೊಟ್ಟಿದ್ದು. ಒಂದೊಂದು ಪಂದ್ಯದಲ್ಲಿ ಒಬ್ಬೊಬ್ಬರು ಮಿಂಚಿದರು. ತಂಡದ ಒಳಗೆ ಬರುವ ಅವಕಾಶ ಸಿಕ್ಕವರೆಲ್ಲ ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ಇತರ ತಂಡಗಳಿಗೆ ಹೋಲಿಸಿದರೆ ಬೌಲಿಂಗ್ ವಿಭಾಗ ಕೊಂಚ ದುರ್ಬಲ ಎಂಬುದನ್ನು ಒಪ್ಪಲೇಬೇಕು. ಆದರೆ ಆ ಬೌಲಿಂಗ್ ಪಡೆಯೇ ಫೈನಲ್ ಪಂದ್ಯವನ್ನು ಗೆಲ್ಲಿಸಿಕೊಟ್ಟಿತು. ಹಿಡಿದ ಕೆಲವು ಕ್ಯಾಚ್‌ಗಳು ಮತ್ತು ಅತ್ಯುತ್ತಮ ಗ್ರೌಂಡ್ ಫೀಲ್ಡಿಂಗ್, ವಿಜಯ ಗಳಿಸುವಲ್ಲಿ ಪ್ರಮುಖ ಪಾತ್ರವಹಿಸಿದವು. ಸ್ಮೃತಿ ಮಂಧನಾ, ನಾಯಕಿ ಹರ್ಮನ್ ಪ್ರೀತ್, ದೀಪ್ತಿ ಶರ್ಮಾ, ಶಫಾಲಿ ವರ್ಮಾ, ರಿಚಾ ಘೋಷ್, ಅಮನ್ ಜೋತ್, ಜೆಮಿಮಾ ರೋಡ್ರಿಗಸ್, ಶ್ರೀ ಚರಣಿ, ಪ್ರತಿಯೊಬ್ಬರೂ ಒಂದಲ್ಲ ಒಂದು ಪಂದ್ಯದಲ್ಲಿ ತಮ್ಮ ಛಾಪು ಮೂಡಿಸುವ ಆಟವನ್ನಾಡಿದರು. ಹರ್ಮನ್ ಪ್ರೀತ್ ಕೌರ್ ನಾಯಕತ್ವ ಅತ್ಯುತ್ತಮ ಮಟ್ಟದಲ್ಲಿತ್ತು. ಪುರುಷರಷ್ಟೇ ಅತ್ಯುತ್ತಮ ಗುಣಮಟ್ಟದ ಕ್ರಿಕೆಟ್ ನಾವಾಡಬಲ್ಲೆವೆಂದು ತೋರಿಸಿದ ವಿಶ್ವಕಪ್ ಇದು. ಕೆಲವು ಬ್ಯಾಟರ್‌ಗಳು ಹೊಡೆದ ಸಿಕ್ಸರ್‌ಗಳಲ್ಲಿ ಚೆಂಡು ತಲುಪಿದ ದೂರ ಪುರುಷರ ಶಾಟ್‌ಗಳನ್ನ ಸರಿಗಟ್ಟುವಂತಿದ್ದವು. ಫೀಲ್ಡಿಂಗ್ ಕೂಡ ಅದ್ವಿತೀಯ ಎಂಬಂತಿತ್ತು. ಮಹಿಳೆಯರ ಕ್ರಿಕೆಟ್ ಅಂದರೆ ಉದಾಸೀನ ತೋರುತ್ತಿದ್ದ ಕ್ರಿಕೆಟ್ ವೀಕ್ಷಕರು, ಭಾರತೀಯ ಮಹಿಳೆಯರ ಆಟ ನೋಡಲು ಸ್ಟೇಡಿಯಮ್ ಹೌಸ್‌ಫುಲ್ ಮಾಡಿದ್ದರು. ಟಿವಿಗಳಲ್ಲಿ, ಓಟಿಟಿಗಳಲ್ಲಿ ವೀಕ್ಷಣೆ ಸಂಖ್ಯೆ ಕೋಟಿಗಳನ್ನು ಮೀರಿತ್ತು. ಈ ವಿಶ್ವಕಪ್ ಗೆಲುವು ಭಾರತದಲ್ಲಿ ಮಹಿಳಾ ಕ್ರಿಕೆಟ್‌ಗೆ ಬಹುದೊಡ್ಡ ತಿರುವು ಕೊಡಲಿದೆ. ಪುರುಷರ ಐಪಿಎಲ್ ನೋಡಲು ಸೀಮಿತರಾಗಿದ್ದ ಅಸಂಖ್ಯಾತ ಹೆಣ್ಣುಮಕ್ಕಳು ಕ್ರಿಕೆಟ್‌ನತ್ತ ಸೀರಿಯಸ್ಸಾಗಿ ನೋಡಲಿದ್ದಾರೆ, ಆಡುವ ಮನಸು ಮಾಡಲಿದ್ದಾರೆ. ಚಾಂಪಿಯನ್ ಪಡೆಗೆ ಅಭಿನಂದನೆಗಳು.

ನಾನು ಬರೆಯಲು ಹೊರಟದ್ದು ಅಭಿನಂದನಾ ಲೇಖನವಲ್ಲ. ಆದರೆ ಅಭಿನಂದನೆ ಸಲ್ಲಿಸದೇ ಬರಹ ಆರಂಭಿಸಲು ಸಾಧ್ಯವಾಗಲಿಲ್ಲ.

ಅಂದಹಾಗೆ, ಮೊದಲು ಹೀಗಿರಲಿಲ್ಲ. ಪ್ರತಿ ಆಟಗಾರನ ಹಿಂದಿನ ಕರುಳು ಹಿಂಡುವ ಕಥೆಗಳು ಈ ಪರಿ ಹುಟ್ಟಿಕೊಳ್ಳುತ್ತಿರಲಿಲ್ಲ. ಸೋಷಿಯಲ್ ಮೀಡಿಯಾ ಬಂದದ್ದೇ ಬಂದದ್ದು, ಎಲ್ಲದರ ವೈಭವೀಕರಣವಾಗುತ್ತಿದೆ. ಒಬ್ಬ ಆಟಗಾರ ಆಯ್ಕೆಯಾದರೆ, ಅದ್ಭುತ ಪ್ರದರ್ಶನ ನೀಡಿದರೆ, ಏನಾದರೊಂದು ಆದರೆ, ಕೂಡಲೇ ಅವನ ಬಾಲ್ಯದ ಕರುಣಾಜನಕ ಕಥೆ ಹರಿಬಿಡಲಾಗುತ್ತದೆ. ಈಗಲೇ ಅವನ ಬಯೋಪಿಕ್ ಆಗಿಬಿಡುವ ರೇಂಜ್‌ಗೆ ಸೀನ್‌ಗಳನ್ನು ಬರೆಯಲಾಗುತ್ತದೆ.

ಅಷ್ಟು ಅನ್ಯಾಯವಾಗಿತ್ತು, ಇಷ್ಟು ಅವಮಾನವಾಗಿತ್ತು, ತಿನ್ನೋಕೆ ಗತಿ ಇರ್ಲಿಲ್ಲ, ಮಲಗೋಕೆ ಮನೆ ಇರ್ಲಿಲ್ಲ ಅಂತೆಲ್ಲ ಕಣ್ಣೀರಕಥೆ ಬರೆದು, ಅವನ ಆಟಕ್ಕಿಂತ ವೈಯಕ್ತಿಕ ಬದುಕಿನ ಕಥೆ ಹೇಳಿ ಇಮೇಜ್ ಬಿಲ್ಡ್ ಮಾಡಲಾಗುತ್ತಿದೆ. ಅರೆ, ಪ್ರತಿಯೊಬ್ಬರೂ ಸಾಧನೆ ಹಾದಿಯಲ್ಲಿ ಕಷ್ಟ ಸವೆಸಿಯೇ ಬಂದಿರುತ್ತಾರೆ. ಯಾರಿಗೂ ರೆಡ್ ಕಾರ್ಪೆಟ್ ಸ್ವಾಗತ ದಕ್ಕಿರುವುದಿಲ್ಲ. ಅವರವರ ಕಷ್ಟ ಅವರವರದ್ದು. ಎಲ್ಲ ಫೀಲ್ಡ್‌ಗಳಲ್ಲೂ ಸಾಕಷ್ಟು ಹೋರಾಟ, ಒದ್ದಾಟ ಮಾಡಿಕೊಂಡೇ ಮೇಲೆ ಬರಬೇಕಾಗುತ್ತದೆ. ಅಲ್ಲಿ ಇಲ್ಲಿ ಒಂದೊಂದು ಅದೃಷ್ಟದ ಕೂಸು, ನೆಪೋಟಿಸಂ ಶಿಶುಗಳು ಸಿಕ್ಕಬಹುದು. ಸುನಿಲ್ ಜೋಷಿ ಪ್ರತಿದಿನ ನಲವತ್ತು ನಲವತ್ತು ಕಿಲೋ ಮೀಟರ್ 'ಅಪ್ ಆ್ಯಂಡ್ ಡೌನ್' ಮಾಡಿ, ಹುಬ್ಬಳ್ಳಿಯಲ್ಲಿ ಪ್ರಾಕ್ಟಿಸ್ ಮಾಡಿ ಹೋಗುತ್ತಿದ್ದರಂತೆ ಅಂತ ಆ ಕಾಲದಲ್ಲಿ ಕಥೆ ಕೇಳಿದಾಗ, 'ಅಬ್ಬಾ ಎಷ್ಟು ಕಷ್ಟಪಟ್ಟಿದ್ದಾರೆ' ಅನಿಸಿತ್ತು. ಅವರು ಕರ್ನಾಟಕ ಟೀಮಲ್ಲಿ ಅಷ್ಟೊಂದು ಅದ್ಭುತ ಆಟ ಆಡುತ್ತಿದ್ದಾಗ, ಇದರ ಪ್ರಸ್ತಾಪ ಇರಲೇ ಇಲ್ಲ. ಭಾರತ ತಂಡಕ್ಕೆ ಆಯ್ಕೆ

ಯಾದಾಗ ಕಥೆಗೆ ಪ್ರಾಮುಖ್ಯ ಬಂದುಬಿಟ್ಟಿತು. ನರೇಂದ್ರ ಹಿರ್ವಾನಿ ಎಂಬಾತ ಮೊದಲ ಪಂದ್ಯದಲ್ಲೇ ಹದಿನಾರು ವಿಕೆಟ್ ಕಬಳಿಸಿದಾಗ, ಬೌಲಿಂಗ್‌ಗಿಂತ ಜಾಸ್ತಿ ಚರ್ಚೆಯಾಗಿದ್ದು, ಮಧ್ಯಪ್ರದೇಶದಲ್ಲಿ ಇಟ್ಟಿಗೆ ಮಾಡುವವನ ಮಗ ಆಗಿ ಇಂಥ ಸಾಧನೆ ಮಾಡಿದ್ದಾನೆ ಅಂತ. ಯಶಸ್ವಿ ಜೈಸ್ವಾಲ್ ಕ್ರಿಕೆಟ್‌ನಲ್ಲಿ ಹೆಸರು ಮಾಡ್ತಾ ಇದ್ದ ಹಾಗೇ, 'ಪಾನಿಪುರಿ ಮಾಡುವ ಹುಡುಗ' ಅಂತ ಕಥೆ ಮುನ್ನೆಲೆಗೆ ಬಂತು. ಇತ್ತೀಚಿನ ದಿನಗಳಲ್ಲಿ, ವೈಭವೀಕರಣಕ್ಕಾಗಿ, ಕರುಣಾಜನಕ ಕಥೆಗಾಗಿ ಜಗತ್ತು ಕಾಯುತ್ತಾ ಇರುತ್ತದೇನೋ! ಅಂಥ ಕಥೆಗಳಿಗೆ ಎಂದೆಂದಿಗೂ ಮಾರ್ಕೆಟ್ ಇದೆ ಎಂಬುದನ್ನು ಬರಹಗಾರರು ಕಂಡುಕೊಂಡಿದ್ದಾರೆ, ಓದುಗರೂ 'ಹೌದು' ಎಂದು ಪ್ರೂವ್ ಮಾಡುತ್ತಲೇ ಇದ್ದಾರೆ. ಇದೀಗ ಮಹಿಳಾ ವಿಶ್ವಕಪ್ ಗೆಲುವಿನ ಬೆನ್ನಲ್ಲೇ, ಜೆಮಿಮಾ ರೋಡ್ರಿಗಸ್, ದೀಪ್ತಿ ಶರ್ಮ, ಶಫಾಲಿ ವರ್ಮ, ಸ್ಮೃತಿ ಮಂಧಾನ ಎಲ್ಲರದ್ದೂ ಅನ್‌ಟೋಲ್ಡ್ ಸ್ಟೋರಿಗಳು ಒಂದಾದ ಮೇಲೊಂದು ಬರಲಾರಂಭಿಸಿವೆ. ಆಟ ಹಿನ್ನೆಲೆಗೆ ಸರಿದು, ಅವರ ಬದುಕಿನ ಕಥೆಗಳು ಮಹತ್ವ ಪಡೆದುಕೊಳ್ಳುತ್ತಿವೆ. 'ಇದು ತಪ್ಪು/ಸರಿ' ಎಂದು ಚರ್ಚಿಸುವುದಕ್ಕಿಂತ ಟ್ರೆಂಡ್‌ಗಳನ್ನು ಅಧ್ಯಯನವೆಂಬಂತೆ ಗಮನಿಸುವುದು ಸೂಕ್ತ.

ಇಂಥ ಕಥೆಗಳ ನಡುನಡುವೆ ನನ್ನನ್ನು ಅತ್ಯಂತ ಗಮನ ಸೆಳೆದದ್ದು ಭಾರತದ ಥ್ರೋಡೌನ್ ಸ್ಪೆಷಲಿಸ್ಟ್ ರಾಘವೇಂದ್ರ ದಿವಗಿಯ ಜೀವನ. ಅನ್‌ಸಂಗ್ ಹೀರೋ, ಎಲೆಮರೆಯ ಕಾಯಿ ಇಂಥ ಪದಗಳಿಗೆ ಹೇಳಿಮಾಡಿಸಿದ ವ್ಯಕ್ತಿತ್ವ ಒಂದಿದ್ದರೆ, ಅದು ರಾಘವೇಂದ್ರ ದಿವಗಿ.

ಸೋಷಿಯಲ್ ಮೀಡಿಯಾದಲ್ಲಿ ಈತನ ಬಗ್ಗೆ ಕೋಟಿಗಟ್ಟಲೆ ಮಂದಿ ಈಗಾಗಲೇ ಓದಿದ್ದಾರೆ. ಆದರೆ ಅಸಲಿ ಪ್ರಪಂಚದ ಓದುಗರಿಗೆ ಈತನಿನ್ನೂ ಅಜ್ಞಾತ. ಯಾರೂ ನಂಬಲಿಕ್ಕಿಲ್ಲ, ಆದರೆ ಇದು ಸತ್ಯ; ರಾಘವೇಂದ್ರ ದಿವಗಿ ಜಾಗತಿಕ ಕ್ರಿಕೆಟ್ ಲೋಕದ ದಂತಕಥೆ.

ಕೊಹ್ಲಿ-ಸಚಿನ್‌ರಂತೆ ಬ್ಯಾಟ್ ಹಿಡಿದು ದಾಖಲೆ ಬರೆದಿಲ್ಲ. ಕಪಿಲ್-ಕುಂಬ್ಳೆಯಂತೆ ಹೆಚ್ಚು ವಿಕೆಟ್ ತೆಗೆದವರ ಪಟ್ಟಿಯಲ್ಲಿಲ್ಲ. ಫೀಲ್ಡಿಂಗ್, ಕೀಪಿಂಗ್ ಇದ್ಯಾವುದರಲ್ಲೂ ಈತನ ಹೆಸರು ಕೇಳಿಲ್ಲ. ಕಡೇಪಕ್ಷ ಬೌಲಿಂಗ್ ಕೋಚ್, ಬ್ಯಾಟಿಂಗ್ ಕೋಚ್ ಥರದ ಪಾತ್ರವೂ ಇವನದಲ್ಲ. ಹಾಗಾದರೆ ಯಾರಿವನು? ಕ್ರಿಕೆಟ್ ಜಗತ್ತು ಯಾಕೆ ಈತನನ್ನು ಈ ಪರಿ ಗೌರವಿಸುತ್ತಿದೆ? ಭಾರತ ತಂಡದ ದಿಗ್ಗಜರು ಯಾಕೆ ರಾಘವೇಂದ್ರ ದಿವಗಿಯನ್ನು ಅಷ್ಟೊಂದು ಎತ್ತರದಲ್ಲಿಟ್ಟು ನೋಡುತ್ತಿದ್ದಾರೆ? ಏನಿವನ ಕಥೆ?

ಥ್ರೋಡೌನ್ ಸ್ಪೆಷಲಿಸ್ಟ್ ಅಂದ್ರೆ ಏನು ಗೊತ್ತಾ? ಕ್ರಿಕೆಟ್‌ನಲ್ಲಿ ಬ್ಯಾಟರ್‌ಗಳು ಅಭ್ಯಾಸ ನಡೆಸುವಾಗ ಅವರಿಗೆ ಬೌಲಿಂಗ್ ಮಾಡುವುದು. ಒಂದು ಕಾಲದಲ್ಲಿ ನೆಟ್ ಬೌಲರ್ಸ್ ಅಂತ ಇರುತ್ತಿದ್ದರು. ಸಿನಿಮಾ ಗಾಯನದಲ್ಲಿ ಟ್ರ್ಯಾಕ್ ಸಿಂಗರ್ ಇರುವ ಹಾಗೆ, ಕ್ರಿಕೆಟ್‌ನಲ್ಲಿ ನೆಟ್ ಬೌಲರ್ಸ್. ಅವರಿಗೆಂದೂ ಪಂದ್ಯ ಆಡುವ ಅವಕಾಶ ಸಿಗುವುದಿಲ್ಲ. ನೆಟ್ ಬೌಲಿಂಗ್‌ನಲ್ಲಿ ಒಂದುವೇಳೆ ಗಮನ ಸೆಳೆದರೆ ಅದೃಷ್ಟವೂ ಸೇರಿಕೊಂಡರೆ, ಅವರು ಭಾರತ ತಂಡಕ್ಕೋ, ರಾಜ್ಯ ತಂಡಕ್ಕೋ ಸೇರ್ಪಡೆಯಾಗುತ್ತಿದ್ದರು. ಅಂಥ ಕೆಲವು ಉದಾಹರಣೆಗಳು ಇವೆ. ಆ ನಂತರ, ನೆಟ್ ಬೌಲರ್‌ಗಳ ಬೌಲಿಂಗ್‌ನಲ್ಲಿ ಗುಣಮಟ್ಟ ಇರುವುದಿಲ್ಲ, ಸ್ಪೀಡ್ ಇರೋದಿಲ್ಲ, ಅಂತಾರಾಷ್ಟ್ರೀಯ ವೇಗಿಗಳ ಚೆಂಡು ಎದುರಿಸೋದು ಅಭ್ಯಾಸ ಆಗಬೇಕು ಅಂದ್ರೆ, ಅದೇ ವೇಗದ ಚೆಂಡುಗಳು ಬೇಕು ಅಂತಾಯ್ತು. ಹೀಗಾಗಿ ಬೌಲಿಂಗ್ ಮಷಿನ್‌ಗಳು ಬಂದವು. ಆದರೆ ಬೌಲಿಂಗ್ ಮಷಿನ್ ಅನ್ನೂ ಮೀರಿಸುವ ಒಬ್ಬ ವೇಗಿಯನ್ನು ಭಗವಂತ ಸೃಷ್ಟಿಸಿ ಕಳಿಸಿದ್ದ. ಅವನೇ ರಾಘವೇಂದ್ರ ದಿವಗಿ,

ಕಳೆದ 12 ವರ್ಷಗಳಿಂದ ಈತ ನೆಟ್‌ನಲ್ಲಿ ಪ್ರಖ್ಯಾತ ಬ್ಯಾಟರ್‌ಗಳತ್ತ ಲಕ್ಷಲಕ್ಷ ಬಾರಿ ಚೆಂಡೆಸೆದಿದ್ದಾನೆ. ಕೈ ಸೋಲುವ ತನಕ, ಕೈ ಸೋತರೂ ನಿಲ್ಲಿಸದೇ ಥ್ರೋ ಮಾಡಿದ್ದಾನೆ. ನೂರೈವತ್ತು ಕಿಲೋಮೀಟರ್ ವೇಗದಲ್ಲಿ ಸ್ವಿಂಗ್, ಪೇಸ್, ಬೌನ್ಸ್ ಹೀಗೆ ವಿಧವಿಧವಾಗಿ ಎಸೆದು ಬ್ಯಾಟರ್‌ಗಳನ್ನು ಕಕ್ಕಾಬಿಕ್ಕಿಯಾಗಿಸಿದ್ದಾನೆ. ಆದರೆ ಅವನ ಉದ್ದೇಶ ಬ್ಯಾಟರ್‌ಗಳನ್ನು ಕಂಗೆಡಿಸುವುದಲ್ಲ, ಆ ವೇಗಕ್ಕೆ, ಆ ವೆರೈಟಿಗೆ ಅವರನ್ನು ರೆಡಿ ಮಾಡುವುದು ಅವನ ಗುರಿ. ಕೊಹ್ಲಿ, ರೋಹಿತ್, ತಿಲಕ್ ವರ್ಮಾ, ಸೂರ್ಯಕುಮಾರ್, ಗಿಲ್ ಹೀಗೆ ಭಾರತದ ಬ್ಯಾಟರ್‌ಗಳೆಲ್ಲ, ಇಂದು ವಿಶ್ವಮಟ್ಟದ ವೇಗಿಗಳನ್ನು ಲೀಲಾಜಾಲವಾಗಿ ಎದುರಿಸಿ ಆಡ್ತಾ ಇದ್ದಾರೆ, ಪರದೇಶದ ವೇಗದ ಪಿಚ್‌ಗಳಲ್ಲೂ ಯಶಸ್ಸು ಕಾಣ್ತಾ ಇದ್ದಾರೆ ಅಂದ್ರೆ, ರಾಘವೇಂದ್ರ ದಿವಗಿಯ ಥ್ರೋಡೌನ್ ಕಾರಣ. ಲಸಿತ್ ಮಲಿಂಗನ ಥರ ಅಡ್ಡಗೈ ಮಾಡಿ ಈತ ಎಸೆಯುವ ಎಸೆತಗಳು ಬ್ರೆಟ್ ಲೀ, ಶೋಯಬ್ ಅಖ್ತರ್ ಎಸೆತಗಳನ್ನು ಮೀರಿಸುತ್ತವೆ. ಇಷ್ಟಕ್ಕೂ ಈತ ಚೆಂಡು ಎಸೆಯುವುದು ಬರಿಗೈಯ್ಯಲ್ಲಲ್ಲ, ಅದಕ್ಕೆಂದೇ ಒಂದು ಸಾಧನವಿದೆ. ಅದರಲ್ಲಿ ಚೆಂಡಿಟ್ಟು ವೇಗವಾಗಿ ಒಗೆಯುವುದಷ್ಟೇ ರಾಘು ಕೆಲಸ.

ವರ್ಲ್ಡ್ ಕ್ರಿಕೆಟ್‌ನಲ್ಲಿ ರಘು ರಘು ಅಂತ ಕರೆಸಿಕೊಳ್ಳುವ ರಾಘವೇಂದ್ರ ದಿವಗಿ, ನಮ್ಮ ಕರ್ನಾಟಕದ ಕುಮಟಾ ಹುಡುಗ. ಶಿಕ್ಷಕರಾಗಿದ್ದ ಅಪ್ಪನ ಆಸೆಗೆ ವಿರುದ್ಧವಾಗಿ ಕ್ರಿಕೆಟಿಗನಾಗಲು ಮನೆ ಬಿಟ್ಟು ಬಂದವ. ಕೈಲಿ ಇಪ್ಪತ್ತು ರೂಪಾಯಿ ಇಟ್ಟುಕೊಂಡು ಹುಬ್ಬಳ್ಳಿಗೆ ಹೋದವನಿಗೆ ನಿಜವಾದ ಸವಾಲು ಎದುರಾಗುತ್ತದೆ. ಇರಲು ಮನೆಯಿಲ್ಲದೆ, ದೇವಸ್ಥಾನಗಳ ಕಟ್ಟೆ, ಆಸ್ಪತ್ರೆ ಮೆಟ್ಟಿಲು, ಬಸ್ ಸ್ಟ್ಯಾಂಡು ಹೀಗೆ ಎಲ್ಲೆಲ್ಲೋ ಮಲಗುತ್ತಾನೆ. ಕೊನೆಗೆ ಸ್ಮಶಾನವೊಂದರಲ್ಲಿ ಕಾಯಂ ನಿವಾಸಿಯಾಗುತ್ತಾನೆ. ಕ್ರಿಕೆಟ್ ಕೈ ಹಿಡೀತು ಅನ್ನೋ ಹೊತ್ತಿಗೆ ಕೈಮುರಿದುಕೊಳ್ಳುತ್ತಾನೆ. ಇನ್ನು ಆಡಲಾರೆ ಆದರೆ ಕ್ರಿಕೆಟ್ ಬಿಟ್ಟಿರಲಾರೆ ಎಂಬ ಸ್ಥಿತಿ. ಹೀಗಿರುವಾಗ, ಥ್ರೋಡೌನ್ ಕಲೆ ಕೈಹಿಡಿಯುತ್ತದೆ. ರಾಜ್ಯ ತಂಡಕ್ಕೆ ಥ್ರೋಡೌನ್ ಬೌಲರ್ ಆಗುವ ಅವಕಾಶ ಸಿಗುತ್ತದೆ. ತಿಲಕ್ ನಾಯ್ಡು, ಜಾವಗಲ್ ಶ್ರೀನಾಥ್ ಮೂಲಕ ಆಶಾಭಾವ ಮೂಡುತ್ತದೆ. ಹಣವಿಲ್ಲದೆಯೂ, ಊಟ ತಿಂಡಿಯಿಲ್ಲದೆಯೂ ನಗುನಗುತ್ತಾ ಆಟದಲ್ಲೇ ಸುಖ ಕಾಣತೊಡಗುವ ಈತನ ಬದುಕಿಗೆ ಸಚಿನ್ ತೆಂಡೂಲ್ಕರ್ ತಿರುವು ಕೊಡುತ್ತಾರೆ. ಭಾರತ ತಂಡಕ್ಕೆ ಇಂಥ ಥ್ರೋಡೌನ್ ಸ್ಪೆಷಲಿಸ್ಟ್ ಅಗತ್ಯವಿದೆ ಎಂದು ತಂಡಕ್ಕೆ ಸೇರಿಸುತ್ತಾರೆ.

ತೀರಾ ಸೀದಾಸಾದಾ ಹೇರ್ ಸ್ಟೈಲ್, ಹಣೆಯಲ್ಲೊಂದು ಕುಂಕುಮ, ಪೌರೋಹಿತ್ಯಕ್ಕೆ ಹೊರಟವನಂತೆ ಕಾಣುವ ರಾಘು, ಭಾರತದ ಕ್ರಿಕೆಟ್ ತಂಡದ ಅವಿಭಾಜ್ಯ ಅಂಗ, ಬೆನ್ನೆಲುಬು ಅಂದ್ರೆ, ಯಾರೂ ನಂಬುವುದಿಲ್ಲ. ಅದೊಮ್ಮೆ ಕ್ರಿಕೆಟ್ ತಂಡದ ಬಸ್ ಏರಲು ಹೊರಟಿದ್ದ ಇವನನ್ನು ಸೆಕ್ಯುರಿಟಿ ಸಿಬ್ಬಂದಿ ತಡೆದು ನಿಲ್ಲಿಸಿದ್ದರು. ಅದನ್ನೂ ನಗುನಗುತ್ತಲೇ ಸ್ವೀಕರಿಸಿದ್ದ ರಾಘು, ತನ್ನ ವಿನಯ ವಿಧೇಯತೆಯಿಂದ, ಶಿಸ್ತುಪಾಲನೆಯಿಂದ, ಅದಮ್ಯ ಆಸಕ್ತಿಯಿಂದ ತಂಡದ ಮನಗೆದ್ದವನು. ಬುಮ್ರಾನಂಥ ಬೌಲರ್ ತಲೆಬಾಗಿ ನಮಿಸುತ್ತಾನೆ, ತಿಲಕ್ ವರ್ಮಾ ಕಾಲು ಮುಟ್ಟಿ ನಮಸ್ಕರಿಸುತ್ತಾನೆ, ಕೊಹ್ಲಿ ತನ್ನ ಯಶಸ್ಸಿನ ಕ್ರೆಡಿಟ್‌ನಲ್ಲಿ ರಾಘುವಿಗೆ ಸಿಂಹಪಾಲು ನೀಡುತ್ತಾನೆ. ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ರವಿಶಾಸ್ತ್ರಿ, ಗಾವಸ್ಕರ್ ಇವರೆಲ್ಲ ರಾಘು ಬಗ್ಗೆ ಸಂದರ್ಭ ಬಂದಾಗಲೆಲ್ಲ ಮಾತಾಡಿ ಹೊಗಳುತ್ತಾರೆ. ವಿದೇಶಿ ತಂಡಗಳು, ಕೋಟ್ಯಂತರ ರೂಪಾಯಿಯ ಆಫರ್ ಎದುರಿಟ್ಟು 'ನಮ್ಮ ಟೀಮ್‌ಗೆ ಬನ್ನಿ' ಎನ್ನುತ್ತವೆ. ಕೆ.ಎಲ್. ರಾಹುಲ್ ತಾನು ಹಾಕಿದ್ದ ಚಾಂಪಿಯನ್ ಬ್ಲೇಜರನ್ನು ರಾಘುವಿಗೆ ಕೊಟ್ಟು ಗೌರವಿಸುತ್ತಾನೆ.

ಇಂದಿಗೆ ರಾಘವೇಂದ್ರ ದಿವಗಿ, ಭಾರತದ ಕೋಚ್‌ಗೆ ಸರಿಸಮ. ಆದರೆ ಇರುವುದು ಮಾತ್ರ ಅಂದಿನಿಂದ ಇಂದಿನ ತನಕ ಅದೇ ರೀತಿ. ಕುಂಕುಮ ಹಚ್ಚಿದ ಸಪಾಟು ತಲೆಯ ಮುಗ್ಧಮುಖದ ರಾಘುವೇ! ಹದಿಮೂರು ವರ್ಷದಿಂದ ಅದೆಷ್ಟು ಚೆಂಡೆಸೆದಿದೆಯೋ ಆ ಕೈ. ಸ್ಪರ್ಧಾತ್ಮಕ ಪಂದ್ಯದಲ್ಲಿ ಅಷ್ಟು ಎಸೆತ ಎಸೆದಿದ್ದರೆ ಎಷ್ಟು ವಿಕೆಟ್ ಉರುಳಿರುತ್ತಿತ್ತೋ! ಯಾವ ಫಲಾಪೇಕ್ಷೆ ಇಲ್ಲದೆ ರಾಘವೇಂದ್ರ ಚೆಂಡೆಸೆಯುತ್ತಲೇ ಇದ್ದಾನೆ. ಆ ತೋಳುಗಳಲ್ಲಿ, ಮುಂಗೈಯಲ್ಲಿ ದೇವರು ಅದ್ಯಾವ ಶಕ್ತಿ ತುಂಬುತ್ತಿದ್ದಾನೋ, ಎಂಥೆಂಥ ಬೌಲರ್‌ಗಳು ಇಂಜುರಿಯಾಗುತ್ತಾರೆ, ರೆಸ್ಟ್ ಕೇಳುತ್ತಾರೆ. ಆದರೆ ರಾಘು ಮಾತ್ರ ನೆಟ್‌ನಲ್ಲಿ ದಣಿವೆಂಬ ಮಾತೇ ಇಲ್ಲದೆ ಚೆಂಡೆಸೆಯುತ್ತಲೇ ಇದ್ದಾನೆ. ಈತನಿಗೆ ಮ್ಯಾನ್ ಆಫ್ ದ ಮ್ಯಾಚ್, ಸೀರೀಸ್, ಬೆಸ್ಟ್ ಬೌಲರ್ ಇದ್ಯಾವ ಅವಾರ್ಡೂ ಬರುವುದಿಲ್ಲ. ಸರಕಾರವೂ ದ್ರೋಣಾಚಾರ್ಯ, ಅರ್ಜುನ ಇನ್ನಿತರ ಅವಾರ್ಡ್ ಕೊಡುವುದಿಲ್ಲ. ಆದರೆ ಆಟಗಾರರು ತಾವು ಗೆದ್ದ ಪ್ರಶಸ್ತಿಯನ್ನು ರಾಘು ಕೈಗಿತ್ತು ಸಂಭ್ರಮಿಸುತ್ತಾರೆ. 'ಇದು ಸಾಧ್ಯವಾಗಿದ್ದು ನಿನ್ನಿಂದಲೇ' ಎನ್ನುತ್ತಾರೆ. ರಾಘು ಧನ್ಯನಾಗುತ್ತಾನೆ. ಈತನ ಬದುಕು ನಿಜಕ್ಕೂ ಒಂದು ಎಮೋಷನಲ್ ಸಿನಿಮಾದ ಸರಕು ಅಲ್ಲವೇ?

ಭಟ್ಟರ್ ಸ್ಕಾಚ್

- ದೀಪಾ ಕಟ್ಟಿಮನಿ, ವಿಜಯಪುರ
  ಭಟ್ರೇ, ಕನ್ನಡದ ಕಾಳಜಿ ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗಿದೆಯಲ್ಲ?
- **ಅದೂ ನವೆಂಬರ್ ಒಂದಕ್ಕೆ ಮಾತ್ರ ಸೀಮಿತವಾಗಿದೆ!**

- ಭಾಗ್ಯ ಕೆ.ಶರ್ಮ, ಧಾರವಾಡ
  ಭಟ್ರೇ, ರಾಜ್ಯೋತ್ಸವದಂದು ಬೆಳಗ್ಗೆ ಬೆಳಗ್ಗೆ ನೀವು ಕೇಳಿದ ಕೆಟ್ಟ ಪದ ಯಾವುದು?
- **ಹ್ಯಾಪಿ ಕನ್ನಡ ರಾಜ್ಯೋತ್ಸವ ಟು ಯು !**

- ಬಾಗಲೂರು ವೆಂಕಟೇಶ, ಬೆಂಗಳೂರು
  ಕನ್ನಡ ಹಬ್ಬವಾದ ರಾಜ್ಯೋತ್ಸವದ ನಿಮಿತ್ತ ನಿಮ್ಮ ಸಂದೇಶವೇನು?
- **ನಮ್ಮ ನಾಲಗೆ ಮೇಲೆ ಹೆಚ್ಚು ಇಂಗ್ಲಿಷ್ ಪದ ಕುಳಿತಿರುವುದರಿಂದ, ಕನ್ನಡಿಗರು ಹಲ್ಲುಜ್ಜುವಂತೆ ನಾಲಗೆಯನ್ನು ಉಜ್ಜಬೇಕು!**

- ಚಂದ್ರಿಕಾ ಭಟ್, ಗಿರಿನಗರ
  ಭಟ್ರೇ, ಬೆಂಗಳೂರಿನ ವೈಶಿಷ್ಟ್ಯವೇನು?
- **ಎಲ್ಲರೂ ಕೆಟ್ಟ ಇಂಗ್ಲಿಷ್ ಮಾತಾಡಲು ಸಮಾನ ಆಸಕ್ತಿ ತೋರುವುದು!**

- ರಮೇಶ ಗೌಡ, ಮಳವಳ್ಳಿ
  ಭಟ್ರೇ, ಬೆಂಗಳೂರಿನಲ್ಲಿ ಹತ್ತು ಜನರ ಗುಂಪಿನಲ್ಲಿ ಕನ್ನಡಿಗರನ್ನು ಗುರುತಿಸುವುದು ಹೇಗೆ?
- **ಸುಲಭ, ಯಾರಾದರೂ ಇಬ್ಬರು-ಮೂವರು ಪರಸ್ಪರ ಇಂಗ್ಲಿಷಿನಲ್ಲಿ ಮಾತಾಡುತ್ತಿದ್ದರೆ, ಅವರೇ ಕನ್ನಡಿಗರು!**

- ರಾಜೇಶ್ವರಿ ಪಟ್ಟಣಶೆಟ್ಟಿ,
  ಭಟ್ರೇ, ಕನ್ನಡವನ್ನು ಸುಲಭವಾಗಿ ಕಲಿಯುವ ಮಾರ್ಗ ಯಾವುದು?
- **ಇಂಗ್ಲಿಷ್ ಮೂಲಕ !**

- ಕೆ.ಜಿ.ಶೆಟ್ಟಿ, ಕುಂದಾಪುರ
  ಭಟ್ರೇ, ಮೋದಿಯವರು ಕನ್ನಡಕ್ಕಾಗಿ ಏನು ಮಾಡಿದ್ದಾರೆ?
- **ನವೆಂಬರ್ ಒಂದರಂದು ಕನ್ನಡದಲ್ಲಿ ಟ್ವೀಟ್ ಮಾಡಿದ್ದಾರೆ!**

- ಸಾಯಿ ಕೃಷ್ಣ, ರಾಜಾಜಿನಗರ
  ಭಟ್ರೇ, ಕನ್ನಡ ಸಿನಿಮಾವನ್ನು ಆಂಗ್ಲ ಭಾಷೆ ಬಲ್ಲವರು ಅರ್ಥ ಮಾಡಿಕೊಳ್ಳಬಲ್ಲರಾ?
- **ಅವರಿಗೆ ಬಹಳ ಸುಲಭ, ಹೆಚ್ಚಿನ ಪದ, ಉಚ್ಚಾರಗಳೆಲ್ಲ ಇಂಗ್ಲೀಷಿನಲ್ಲೇ ಇರುತ್ತವಲ್ಲ?!**

- ರಾಜು ಪತ್ತಾರ, ಹುಬ್ಬಳ್ಳಿ
  ಕನ್ನಡ ರಾಜ್ಯೋತ್ಸವದ ದಿನ ಹುಬ್ಬಳ್ಳಿ ಮಂದಿಗೆ ಸಂಭ್ರಮ ಪಡುವ ಸಂಗತಿ ಯಾವುದು?
- **ಹುಟ್ಟಿದರೆ ಟ್ರಾಫಿಕ್ ಐಲಾಂಡಿನಲ್ಲಿ ಹುಟ್ಟಬೇಕು' ಎಂದು ಹಾಡಬಹುದು!**

- ಸಂಗೀತಾ ಕಾಮತ್, ಹುಬ್ಬಳ್ಳಿ
  ಭಟ್ರೇ, ಮೆಟ್ರೋದಲ್ಲಿ ಪಯಣಿಸುವಾಗ ಕೆಲವರು ಜೋರಾಗಿ ಮಾತಾಡುತ್ತಾರಲ್ಲ?
- **ಪಕ್ಕದ ಬೋಗಿಯಲ್ಲಿರುವವರಿಗೂ ಕೇಳಿಸಲಿ ಎಂದು ಅಂದುಕೊಂಡಿರಬಹುದಾ?**

ಪುಟಿನ್ ಹಿಂದಿನ ದೈತ್ಯಶಕ್ತಿ ಯಾರು ಗೊತ್ತಾ?

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ

vveditoped@gmail.com

ಪುಟಿನ್ ಎಂದಾಕ್ಷಣ ನಿಮ್ಮ ಮನಸ್ಸಿನಲ್ಲಿ ರಷ್ಯಾದ ಅಧ್ಯಕ್ಷ, ಬಲಶಾಲಿ ನಾಯಕ ಎನ್ನುವ ಚಿತ್ರಣ ಮೂಡುತ್ತದೆ. ಆದರೆ ಪುಟಿನ್ ಹಿಂದಿನ ಶಕ್ತಿ ಅಥವಾ ಪುಟಿನ್‌ನ ಮಿದುಳು ಎಂದು ಹೆಸರುವಾಸಿಯಾಗಿರುವ ವ್ಯಕ್ತಿಯ ಬಗ್ಗೆ ಹೆಚ್ಚು ತಿಳಿದಿರಲು ಸಾಧ್ಯವಿಲ್ಲ. ಈ ವ್ಯಕ್ತಿಯ ಚಿಂತನೆಗಳನ್ನ ಪುಟಿನ್ ಕಾರ್ಯರೂಪಕ್ಕೆ ತರುತ್ತಿದ್ದಾರೆ. ಅಂದರೆ ರಷ್ಯಾ ದೇಶ ಮುಂದಿನ ದಿನಗಳಲ್ಲಿ ಹೇಗಿರಬೇಕು, ಜಗತ್ತಿನಲ್ಲಿ ರಷ್ಯಾದ ಪಾತ್ರವೇನು? ಇತ್ಯಾದಿಗಳನ್ನ ನಿರ್ಧರಿಸುವುದು ಇವರು. ಯಾರಿವರು? ಇವರು ಅಲೆಕ್ಸಾಂಡರ್ ದುಗಿನ್.

ಸೋವಿಯತ್ ಯೂನಿಯನ್ ಛಿದ್ರವಾದದ್ದು ಎಲ್ಲರಿಗೂ ತಿಳಿದಿರುವ ವಿಷಯ. ಅಮೆರಿಕ ಇದರ ಹಿಂದಿನ ಶಕ್ತಿ ಎನ್ನುವುದು ಕೂಡ ರಹಸ್ಯವೇನಲ್ಲ. ಹೀಗೆ ಸೋವಿಯತ್ ಯೂನಿಯನ್‌ನಿಂದ ಬೇರ್ಪಟ್ಟು 15 ಹೊಸ ದೇಶಗಳು ನಿರ್ಮಾಣವಾದವು. ನಮಗೆ ಇಷ್ಟು ವಿಷಯ ಮಾತ್ರ ತಿಳಿದಿರುತ್ತದೆ. ಜಾರ್ಜಿಯಾ, ಉಕ್ರೇನ್ ಮುಂತಾದ ದೇಶಗಳಲ್ಲಿ ಆಂತರಿಕ ಕಲಹ ಶುರುವಾಗಿ ಆ ದೇಶಗಳು ಇನ್ನಿಲ್ಲದ ಸಾವು-ನೋವಿನ ಜತೆಗೆ ಇಡೀ ನಗರವೇ ಸ್ಮಶಾನ ಎನ್ನುವ ಮಟ್ಟಿಗೆ ಹಾಳಾದವು. ಹೀಗೆ ಅಂದಿನ ಶಕ್ತಿಶಾಲಿ ಒಕ್ಕೂಟವನ್ನ ಛಿದ್ರಗೊಳಿಸಿದ್ದರ ಪರಿಣಾಮ ಸೋವಿಯತ್ ಯೂನಿಯನ್‌ನ ಹೃದಯವಾಗಿದ್ದ ರಷ್ಯಾ ಬಹಳ ಪೆಟ್ಟು ತಿಂದಿತು. ಈ ರೀತಿಯ ವಿಭಜನೆ 1991ರಲ್ಲಿ ಆಗುತ್ತದೆ. ಆ ನಂತರ ರಷ್ಯಾ ಹಲವು ವರ್ಷ ಯಾವುದೇ ಸಿದ್ಧಾಂತವಿಲ್ಲದೆ ವೇಳೆಯನ್ನ ಕಳೆಯುತ್ತದೆ. 2000ನೇ ಇಸವಿಯ ವೇಳೆಗೆ ಪುಟಿನ್ ಅಧಿಕಾರವನ್ನ ಪಡೆಯುತ್ತಾರೆ. ಒಂದೆರಡು ವರ್ಷದಲ್ಲಿ ತೈಲದ ಮೇಲಿನ ಹಿಡಿತವನ್ನ ಸಂಪಾದಿಸುತ್ತಾರೆ. ಜಗತ್ತಿಗೆ ಬೇಕಾದ ಎನರ್ಜಿ ಮೂಲಗಳ ಮೇಲೆ ಮತ್ತು ತೈಲದ ಮೇಲಿನ ಹಿಡಿತ ರಷ್ಯಾವನ್ನ ಮತ್ತೆ ಒಂದಷ್ಟು ಆರ್ಥಿಕವಾಗಿ ಪುನರುಜ್ಜೀವನಗೊಳಿಸುತ್ತವೆ.

ಈ ಸಮಯದಲ್ಲಿ ಪುಟಿನ್‌ಗೆ ಮಾರ್ಗದರ್ಶನ ಮಾಡಲು ಗುರುವಿನಂತೆ ಸಿಕ್ಕವರು ಅಲೆಕ್ಸಾಂಡರ್ ದುಗಿನ್. ಇವರು ತಮ್ಮ ಅನೇಕ ಭಾಷಣಗಳಲ್ಲಿ 'ಅಮೆರಿಕ ನಮ್ಮ ಮೊದಲ ಶತ್ರು' ಎಂದು ಮುಚ್ಚುಮರೆಯಿಲ್ಲದೆ ಹೇಳುತ್ತಾರೆ. ರಾಷ್ಟ್ರೀಯವಾದ ಇವರ ಐಡಿಯಾಲಜಿ. ಟಿವಿ, ರೇಡಿಯೋ ಇತರ ಎಲ್ಲಾ ಮಾಧ್ಯಮಗಳು ಕೂಡ ಕೇವಲ ಮತ್ತು ಕೇವಲ ರಾಷ್ಟ್ರೀಯವಾದಕ್ಕೆ ಸೀಮಿತವಾಗಿರಬೇಕು ಎನ್ನುವ ತತ್ವದ ಉಗ್ರ ಪ್ರತಿಪಾದಕರು ಇವರು. ಇಷ್ಟೇ ಅಲ್ಲದೆ 'ಅಮೆರಿಕನ್ ಜೀವನ್‌ಶೈಲಿ ನಮ್ಮದಲ್ಲ, ರಷ್ಯಾ ತನ್ನದೇ ಆದ ಸಾಂಸ್ಕೃತಿಕ ನೆಲೆಯನ್ನ ಹೊಂದಿದೆ' ಎಂದು ಪ್ರತಿಪಾದಿಸುವ ಅತ್ಯಂತ ರಿಲೀಜಿಯಸ್ ಮನಸ್ಥಿತಿ ಕೂಡ ಹೊಂದಿದ್ದಾರೆ. ಹೀಗಾಗಿ 2000ದಿಂದ ಈಚೆಗೆ ರಷ್ಯಾದಲ್ಲಿ ಚರ್ಚು ಬಹಳ ಪ್ರಾಮುಖ್ಯವನ್ನು ಪಡೆದಿದೆ. ದೇಶದ 70 ಪ್ರತಿಶತ ಜನರು ಬಹಳ ಧಾರ್ಮಿಕ ಮನೋಭಾವವನ್ನ ಹೊಂದಿದ್ದಾರೆ ಎನ್ನುತ್ತದೆ ಸಮೀಕ್ಷೆ. ಆ ಮಟ್ಟಿಗೆ ರಷ್ಯಾ ದೇಶವನ್ನ ಆಗಲೇ ಅಲೆಕ್ಸಾಂಡರ್ ದುಗಿನ್ ಪರಿವರ್ತನೆ ಮಾಡಿದ್ದಾರೆ.

ಹೀಗೆ ರಷ್ಯಾದಲ್ಲಿ ತಮಗೆ ಬೇಕಾದ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಬದಲಾವಣೆಗಳನ್ನ ಮಾಡಿಕೊಂಡಿದ್ದಷ್ಟೇ ಅಲ್ಲದೆ, ರಷ್ಯಾವನ್ನ ಮತ್ತೆ ಜಗತ್ತಿನ ಪ್ರಮುಖ ದೇಶವನ್ನಾಗಿ ಮಾಡುವ ಉದ್ದೇಶ ಅಲೆಕ್ಸಾಂಡರ್ ದುಗಿನ್ ಅವರದು. ಹೀಗಾಗಿ ಇವರು ಮುಂದಿನ ನಲವತ್ತು ವರ್ಷದಲ್ಲಿ ರಷ್ಯಾ ಏನು ಮಾಡಬೇಕು ಎನ್ನುವ ನೀಲಿನಕ್ಷೆಯನ್ನ ತಯಾರಿಸಿದ್ದಾರೆ. ಪುಟಿನ್ ಇಂಥ ಪ್ಲಾನ್‌ಗಳನ್ನ ನಿಷ್ಠೆಯಿಂದ ಕಾರ್ಯಗತಗೊಳಿಸಲು ಶ್ರಮಿಸುತ್ತಿದ್ದಾರೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ಅಲೆಕ್ಸಾಂಡರ್ ದುಗಿನ್ ಎಂದರೆ ಪುಟಿನ್‌ರ ಮಿದುಳು, ಪುಟಿನ್‌ರ ಗುರು, ಮಾರ್ಗದರ್ಶಕ ಎನ್ನುವ ಮಾತುಗಳು ಕೇಳಿಬರುತ್ತವೆ.

ಇಂಥ ದುಗಿನ್ ಕಾರ್ಯಸಾಧನೆಗೆ ತುಳಿದಿರುವ ಮಾರ್ಗ ಇದೆಯಲ್ಲ ಅದು ಮಾತ್ರ ಅಮೆರಿಕ ದೇಶ ಹಿಡಿದಿದ್ದ ದಾರಿಯೇ, ಇದರಲ್ಲಿ ಯಾವುದೇ ಸಂಶಯವಿಲ್ಲ. ಅವರು ಅಮೆರಿಕವನ್ನ ಉದ್ದೇಶಿಸಿ ''ನಿಮ್ಮ ದೇಶದಲ್ಲಿ ಗಲಭೆಗಳು, ಕಲಹಗಳು ಆದರೆ ನಿಮಗೆ ನೋವಾಗುತ್ತದೆ ಅಲ್ಲವೇ? ನಮಗೂ ನೋವಾಗಿತ್ತು. ನಿಮ್ಮದೇ ಭಾಷೆಯಲ್ಲಿ ನಿಮಗೆ ಉತ್ತರವನ್ನ ಕೊಡುತ್ತಿದ್ದೇವೆ ಅಷ್ಟೇ'' ಎಂದು ರಾಜಾರೋಷವಾಗಿ ಹೇಳಿಕೆಯನ್ನ ನೀಡುತ್ತಾರೆ. ಉಕ್ರೇನ್ ದೇಶದ ಮೇಲಿನ ಹಿಡಿತಕ್ಕಾಗಿ ಹೊಡೆದಾಡುವ ಸಮಯದಲ್ಲಿ ನೇರಾನೇರ ಅಮೆರಿಕವನ್ನ ಉಪೇಕ್ಷಿಸಿ, ಜಾಗತಿಕ ಮಟ್ಟದ ಒತ್ತಡಗಳಿಗೂ ಮಣಿಯದೆ ಉಕ್ರೇನ್ ದೇಶದ ಹತ್ತಿರತ್ತಿರ 8 ಪ್ರತಿಶತ ಜಾಗವನ್ನ ರಷ್ಯಾ ಆಕ್ರಮಿಸಿದೆ. ಉಕ್ರೇನ್‌ನ ಕ್ರಿಮಿಯಾ ನಗರ ಮತ್ತು ಇತರ ಪ್ರಮುಖ ನಾಲ್ಕು ನಗರಗಳ ಮೇಲೆ ರಷ್ಯಾ ಹಿಡಿತ ಹೊಂದಿದೆ. ಇದು ಜಾಗತಿಕ ಮಟ್ಟದಲ್ಲಿ ಕಾನೂನುಬಾಹಿರವೆಂದು ಪರಿಗಣಿಸಲ್ಪಟ್ಟಿದೆ. ಇದ್ಯಾವುದಕ್ಕೂ ಸೊಪ್ಪು ಹಾಕದೆ ರಷ್ಯಾ ತನ್ನ ಕಾರ್ಯಸಾಧನೆಯತ್ತ ಚಿತ್ತ ಹರಿಸಿದೆ.

ರಷ್ಯಾದಲ್ಲಿ ಇಂದು ಧಾರ್ಮಿಕತೆ ಮತ್ತು ರಾಷ್ಟ್ರೀಯವಾದ ಮರಳಿ ಮುಂಚೂಣಿಗೆ ಬಂದಿವೆ. ಪಾಶ್ಚಾತ್ಯ ಜೀವನಶೈಲಿಯ ಬಗ್ಗೆ ಇಲ್ಲಿ ಅಸಮಾಧಾನ ಹೆಚ್ಚಾಗಿದೆ. ದುಗಿನ್ ತಮ್ಮನ್ನ ತಾವೇ ಸಂಪ್ರದಾಯವಾದಿ ಎಂದು ಕರೆದುಕೊಳ್ಳುತ್ತಾರೆ. ''ನಮ್ಮ ಹಿಂದಿನ ಮೌಲ್ಯಗಳು, ಚರಿತ್ರೆ ನೋಡಿ, ರಷ್ಯಾ ಎಂದಿಗೂ ತನ್ನದೇ ಆದ ಸಾಂಸ್ಕೃತಿಕ ನೆಲಗಟ್ಟು ಹೊಂದಿದೆ. ಅದರ ಆಧಾರದ ಮೇಲೆ ಹೊಸ ಮತ್ತು ಪ್ರಬಲ ರಷ್ಯಾವನ್ನ ಮರಳಿ ನಿರ್ಮಿಸುವುದು ನಮ್ಮ ಕರ್ತವ್ಯ'' ಎನ್ನುವ ವಾದದ ಪ್ರತಿಪಾದಕ ಅಲೆಕ್ಸಾಂಡರ್ ದುಗಿನ್. ಚಾಣಕ್ಯ ಮತ್ತು ಚಂದ್ರಗುಪ್ತ ಮೌರ್ಯ ತಕ್ಷಣ ನೆನಪಿಗೆ ಬರುತ್ತಾರೆ ಅಲ್ಲವೇ? ನನಗೆ ಅಮಿತ್ ಶಾ ಮತ್ತು ನರೇಂದ್ರ ಮೋದಿ ಜೋಡಿ ನೆನಪಾದರು. ನಮ್ಮಲ್ಲಿ ಅಮಿತ್ ಶಾ ಅವರು ದುಗಿನ್ ಸ್ಥಾನವನ್ನು ತುಂಬದಿರಬಹುದು. ಆದರೆ ಅವರು ಮೋದಿಯವರ 'ಥಿಂಕ್ ಟ್ಯಾಂಕ್' ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಟ್ರಂಪ್ ಈ ಬಾರಿ ಅಧಿಕಾರ ವಹಿಸಿಕೊಂಡ ಮರುದಿನದಿಂದ ಆಡುತ್ತಿರುವ ಆಟವನ್ನು ನೋಡಿ ಜಗತ್ತಿಗೆ ಜಗತ್ತೇ 'ಟ್ರಂಪ್ ಸರಿಯಿಲ್ಲ' ಎನ್ನುವ ಮಾತುಗಳನ್ನು ಆಡುತ್ತಿದ್ದರೆ, ದುಗಿನ್ ಅವರು ಮಾತ್ರ ಟ್ರಂಪ್ ಮಹಾಶಯನಿಗೆ ''ರಷ್ಯಾ ಎಂದರೇನು? ಪುಟಿನ್ ಎಂದರೇನು? ಎನ್ನುವುದು ಈಗ ಹೆಚ್ಚು ಅರ್ಥವಾಗಿರುತ್ತೆ'' ಎನ್ನುವ ಮಾರ್ಮಿಕ ಮಾತುಗಳನ್ನು ಆಡಿದ್ದರು. ಮಾರ್ಚ್ 2025ರ ಸಮಯದಲ್ಲಿ ನೇರವಾಗಿ ''ಟ್ರಂಪ್ ಮಾಡುತ್ತಿರುವುದು ಅಮೆರಿಕದ ದೃಷ್ಟಿಯಿಂದ ಸರಿ'' ಎನ್ನುವ ಮಾತನ್ನು ಕೂಡ ಆಡಿದ್ದಾರೆ. ಸಂಪ್ರದಾಯವಾದಿ, ಅಲ್ಟ್ರಾ ರಾಷ್ಟ್ರೀಯವಾದಿ ದುಗಿನ್ ಅವರು ಟ್ರಂಪ್ ಅವರನ್ನು ಬೆಂಬಲಿಸುತ್ತಿದ್ದಾರೆಯೇ? ಎನ್ನುವ ಪ್ರಶ್ನೆ ಉದ್ಭವವಾಗುತ್ತೆ. ಪುಟಿನ್ ಮತ್ತು ದುಗಿನ್ ನಡುವೆ ಎಲ್ಲವೂ ಸರಿಯಿದೆಯೇ? ಖಂಡಿತ ಎಲ್ಲಾ ಸರಿಯಿದೆ. ಪ್ರತಿಯೊಬ್ಬ ನಾಯಕನೂ ತನ್ನ ದೇಶದ ಒಳಿತಿಗೆ ದುಡಿಯಬೇಕು. ದೇಶ ಮೊದಲು ಎನ್ನುವುದು ದುಗಿನ್ ಅವರ ಮಂತ್ರ. ನಮ್ಮ ನರೇಂದ್ರ ಮೋದಿಯವರು ಪುಟಿನ್ ಜತೆಗೆ ವಿಶೇಷ ಬಾಂಧವ್ಯ ಹೊಂದಿರುವುದರ ಕಾರಣ ನಿಮಗೆಲ್ಲಾ ಗೊತ್ತಾಯ್ತು ಎಂದುಕೊಳ್ಳುವೆ.

ಇವತ್ತು ಜಗತ್ತು ಯಾವ ಪರಿಸ್ಥಿತಿಯಲ್ಲಿದೆ ಎಂದರೆ ಎಲ್ಲಾ ದೇಶಗಳೂ ಒಂದಲ್ಲ ಒಂದು ರೀತಿಯಲ್ಲಿ ಒಂದರ ಮೇಲೊಂದು ಅವಲಂಬಿಸಿವೆ. ಚೀನಾ ತನ್ನ ಪದಾರ್ಥವನ್ನು ಅಮೆರಿಕಕ್ಕೆ ಮಾರಬೇಕು; ಇಲ್ಲವಾದಲ್ಲಿ ತನ್ನ ಉತ್ಪಾದನಾ ಸಾಮರ್ಥ್ಯವನ್ನು ಅದು ಕಳೆದುಕೊಳ್ಳುತ್ತದೆ. ಇದರ ಜತೆಗೆ ತನ್ನ ರಿಸರ್ವ್ ಅನ್ನು ಅದು ಅಮೆರಿಕನ್ ಡಾಲರ್‌ನಲ್ಲಿ ಹೊಂದಿದೆ. ಅಮೆರಿಕನ್ ಬಾಂಡ್ ಅನ್ನು ಕೊಂಡಿದೆ. ಅಮೆರಿಕ ಕುಸಿತ ಕಂಡರೆ, ಅತಿ ಹೆಚ್ಚು ಹೊಡೆತ ಬೀಳುವುದು ಚೀನಾ ಮತ್ತು ಜಪಾನ್ ದೇಶಗಳಿಗೆ. ಅಮೆರಿಕ ಕೂಡ 'ಚೀನಾ ಪದಾರ್ಥಗಳು ಬೇಡ' ಎಂದರೆ ವಾರದಲ್ಲಿ ಅವಸಾನ ಹೊಂದುತ್ತದೆ. ವಿಶ್ವದ ಎರಡು ಅತಿ ದೊಡ್ಡ ಇಕಾನಾಮಿಗಳು ಕುಸಿದರೆ ಪೂರ್ಣ ವಿಶ್ವ ಕುಸಿದಂತೆ! ಚೀನಾ ತನ್ನ ಅಮೆರಿಕನ್ ರಿಸರ್ವ್ ಕಡಿಮೆ ಮಾಡಿಕೊಂಡು ಆ ಹಣದಲ್ಲಿ ಚಿನ್ನವನ್ನು ಕೊಂಡುಕೊಳ್ಳುತ್ತಿದೆ. ಚೀನಾವನ್ನು ನೋಡಿ ಜಪಾನ್, ಭಾರತ ಕೂಡ ಚಿನ್ನವನ್ನು ಕೊಂಡುಕೊಳ್ಳುತ್ತಿವೆ. ಇಂದಿಗೆ ರಷ್ಯಾ ಅತಿ ಹೆಚ್ಚು ಚಿನ್ನದ ರಿಸರ್ವ್ ಮೇಲೆ ಕುಳಿತಿದೆ. ನಾಳೆ ಆಟ ಮತ್ತೆ ಚಿನ್ನದ ಆಧಾರದಲ್ಲಿ ಶುರುವಾದರೆ ರಷ್ಯಾ ಲೀಡರ್ ಆಗಿ ಹೊರಹೊಮ್ಮುತ್ತದೆ. ಚೀನಾ, ಜಪಾನ್, ಭಾರತ ಸೇರಿಕೊಂಡು ಸಾಮೂಹಿಕ ನಾಯಕತ್ವದಲ್ಲಿ ಜಗತ್ತು ಮುಂದುವರಿಯುವ ಸಾಧ್ಯತೆ ಹೆಚ್ಚಾಗಿದೆ.

ಗ್ಲೋಬಲೈಸಷನ್ ಎನ್ನುವ ಆಟವನ್ನು ಅಮೆರಿಕ ಹುಟ್ಟುಹಾಕದಿದ್ದರೆ ಜಗತ್ತು ಇಂದಿನ ಕೆಟ್ಟ ಪರಿಸ್ಥಿತಿಯನ್ನು ಕಾಣುವ ಅವಶ್ಯಕತೆ ಬರುತ್ತಿರಲಿಲ್ಲ. ಇದೀಗ ಅಮೆರಿಕಕ್ಕೆ ಗ್ಲೋಬಲೈಸೇಷನ್ ಎಂಬುದು ದೊಡ್ಡ ತಪ್ಪು ಎನ್ನುವುದರ ಅರಿವಾಗಿದೆ. ಇದು ಅರಿವಾಗುವ ವೇಳೆಗೆ ಅದನ್ನು ಬದಲಾಯಿಸಲಾಗದ ಮಟ್ಟಿಗೆ ಅದು ಬದಲಾವಣೆ ಕಂಡುಬಿಟ್ಟಿದೆ. ಇವತ್ತಿಗೆ ಇವತ್ತೇ ಹೊಸ ವ್ಯವಸ್ಥೆ ಕಟ್ಟಬೇಕು ಎಂದರೂ ಅದಕ್ಕೂ ದಶಕಗಳು ಬೇಕು, ಆ ಮಟ್ಟಿಗೆ ಅವಲಂಬನೆ ಬೆಳೆದುಬಿಟ್ಟಿದೆ. ಆದರೆ ಅಮೆರಿಕ, ಚೀನಾ, ಯುರೋಪಿಯನ್ ಯೂನಿಯನ್‌ಗಳಿಗೆ ದಶಕಗಳು ಕಾಯುವ ತಾಳ್ಮೆ, ಸಂಯಮ ಎರಡೂ ಇಲ್ಲ. ಅವಕ್ಕೆ ತಕ್ಷಣ ಈ ಆಟವನ್ನು ಮುಗಿಸಿ, ಹೊಸ ಆಟಕ್ಕೆ ಸಿದ್ಧರಾಗಬೇಕು ಎನ್ನುವ ಹಪಾಹಪಿ ಶುರುವಾಗಿದೆ. ಹೀಗಾಗಿ ಅವು 'ರಿ-ಸೆಟ್' ಬಟನ್ ಒತ್ತುವ ತರಾತುರಿಯಲ್ಲಿವೆ. ಗ್ಲೋಬಲೈಸೇಷನ್ ಎನ್ನುವ ಆಟವನ್ನು ರಿ-ಸೆಟ್ ಬಟನ್ ಒತ್ತಿ ಕೂಡ ಅಳಿಸಲಾಗದು ಎಂಬುದು ಅವಕ್ಕೆ ಗೊತ್ತಿದೆ! ಹೀಗಾಗಿ ಅವು ಕಂಟ್ರೋಲ್ಡ್ ಗ್ಲೋಬಲೈಸೇಷನ್ ಎನ್ನುವ ಹೊಸ ಆಟವನ್ನು ಶುರುಮಾಡಲು ಬಯಸುತ್ತಿವೆ. ಇದರ ಚುಕ್ಕಾಣಿ ಯಾರ ಕೈಗೆ ಸಿಗುತ್ತದೋ ಅದು ಇನ್ನೊಂದೆರಡು ಶತಮಾನ ರಾಜ್ಯವಾಳುತ್ತದೆ. ಈ ಬಾರಿ ಈ ಅಧಿಕಾರದ ಚುಕ್ಕಾಣಿ ಒಂದು ದೇಶದ ಕೈಗೆ ಸಿಗುವ ಸಾಧ್ಯತೆ ಕಡಿಮೆ.

ಬಲಿಷ್ಠ ಭಾರತವು ಅಮೆರಿಕ ಮತ್ತು ಚೀನಾ ಎರಡಕ್ಕೂ ಬೇಕಿಲ್ಲ. ರಷ್ಯಾ ದೇಶವು ಭಾರತದೊಂದಿಗೆ ಅತ್ಯುತ್ತಮ ಬಾಂಧವ್ಯವನ್ನು ಹೊಂದಿದೆ. ಭಾರತ ಮತ್ತು ಚೀನಾದ ಮಧ್ಯೆ ಇರುವ ತಡೆಗೋಡೆಯನ್ನು ಕೆಡವಲು ಮತ್ತು ಒಟ್ಟಾಗಿ ಹೆಜ್ಜೆಹಾಕಲು ರಷ್ಯಾ ಮಧ್ಯವರ್ತಿಯಂತೆ ಕೆಲಸ ಮಾಡುತ್ತಿದೆ. ಗ್ಲೋಬಲೈಸೇಷನ್ ಎನ್ನುವ ಪದ ಸವಕಲಾಗಿದೆ. ಇವತ್ತು ಅದು ಯಾರಿಗೂ ಬೇಡವಾದ ಕೂಸು. ಪ್ರತಿ ದೇಶವೂ ಇಂದು ಲೋಕಲೈಸೇಷನ್, ರಾಷ್ಟ್ರೀಯವಾದದ ಹಿಂದೆ ಬಿದ್ದಿವೆ. ಇದೆಷ್ಟು ವರ್ಷ ಎನ್ನುವುದನ್ನು ಕಾದುನೋಡಬೇಕು. ಏಕೆಂದರೆ ಬಹಳ ದೊಡ್ಡ ಕನಸು ಇಟ್ಟುಕೊಂಡೇ ಅಮೆರಿಕ ಹುಟ್ಟುಹಾಕಿದ ಗ್ಲೋಬಲೈಸೇಷನ್ ಪರಿಕಲ್ಪನೆಯು ಮೂರು ದಶಕದಲ್ಲಿ ಅಂತ್ಯ ಕಾಣುತ್ತಿದೆ. ಜಗತ್ತಿನೆಲ್ಲೆಡೆ ವಲಸಿಗರನ್ನು 'ಕೆಲಸ ಕದಿಯಲು ಬಂದವರು' ಎನ್ನುವಂತೆ ನೋಡಲಾಗುತ್ತಿದೆ. ಇದು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ತೀವ್ರವಾಗಿ, ರಾಷ್ಟ್ರೀಯವಾದ ಇನ್ನಷ್ಟು ಮುನ್ನೆಲೆಗೆ ಬರಲಿದೆ. ಬದಲಾವಣೆ ಜಗದ ನಿಯಮ; ಆದರೆ ಜಾಗತಿಕ ತಿಕ್ಕಾಟಗಳಲ್ಲಿ ಸಾವಿರಾರು ಕುಟುಂಬಗಳ, ಲಕ್ಷಾಂತರ ಜನರ ಬದುಕು ವ್ಯತ್ಯಯವಾಗಲಿದೆ.

ಅಮೆರಿಕ ತಾನು ಹುಟ್ಟುಹಾಕಿದ ಆಟದಲ್ಲಿ ಹೀನಾಯವಾಗಿ ಸೋತಿದೆ. ಜಗತ್ತಿಗೆ ಅಮೆರಿಕನ್ ಉತ್ಪನ್ನಗಳನ್ನು ಮಾರಿ ಹೇರಳವಾಗಿ ಲಾಭ ಮಾಡಿಕೊಳ್ಳುವ ಉದ್ದೇಶ ಹೊಂದಿದ್ದ ಆ ದೇಶದ ಹೂಡಿಕೆದಾರರು ಹೆಚ್ಚು ಲಾಭ ಬರುತ್ತದೆ ಎನ್ನುವ ಕಾರಣಕ್ಕೆ ಚೀನಾ, ಭಾರತ, ಇಂಡೋನೇಷ್ಯಾ, ಫಿಲಿಪೈನ್ಸ್ ಹೀಗೆ ಎಲ್ಲಾ ದೇಶಗಳಲ್ಲಿ ಹೂಡಿಕೆ ಮಾಡಿದರು. ಸದ್ದಿಲ್ಲದೆ ಮೂರು ದಶಕದಲ್ಲಿ ಅಮೆರಿಕ ಜಗತ್ತಿನ ಬೇರೆ ದೇಶಗಳ ಮೇಲೆ ಅವಲಂಬಿತ ದೇಶವಾಗಿ ಮಾರ್ಪಾಟಾಗಿಹೋಯ್ತು. ಎಚ್ಚೆತ್ತು ರಾಷ್ಟ್ರೀಯವಾದಕ್ಕೆ ಅದು ತಿರುಗಿಕೊಂಡಿದೆ. ರಷ್ಯಾ ಈ ಕೆಲಸವನ್ನು, ಪುಟಿನ್ ಅಧಿಕಾರ ಹಿಡಿದ ಸಮಯದಿಂದ ಮಾಡುತ್ತಿದೆ. ಭಾರತ ಕೂಡ ಕಳೆದ ಒಂದು ದಶಕದಿಂದ ಪೂರ್ಣವಾಗಿ ರಾಷ್ಟ್ರೀಯವಾದದತ್ತ ತಿರುಗಿದೆ. ಚೀನಾ ಕಳೆದ ಮೂರು ದಶಕದಿಂದ ತೀವ್ರ ರಾಷ್ಟ್ರೀಯವಾದವನ್ನು ಬೆಳಸಿಕೊಂಡಿದೆ. ಅಮೆರಿಕ ರಾಷ್ಟ್ರೀಯವಾದದ ಹೊಸ ಆಟಕ್ಕೆ 'ಲೇಟ್ ಎಂಟ್ರಿ' ಕೊಟ್ಟಿದೆ. ಹೀಗಾಗಿ ಹೊಸ ಆಟದಲ್ಲಿನ ಅಡ್ವಾಂಟೇಜ್ ಚೀನಾ, ರಷ್ಯಾ ಮತ್ತು ಭಾರತಕ್ಕೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಕನ್ನಡವನ್ನು ಕಟ್ಟಲು ಸಂಕಲ್ಪಿಸೋಣ

ಕಳಕಳಿ

ರಾಕೇಶ ಆಲಬಾಳ, ಅಥಣಿ

ನಮ್ಮ ಸಂಸ್ಕೃತಿಯ ಜೀವನಾಡಿಯಾಗಿರುವ ಕನ್ನಡವು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಶ್ರೀಮಂತ ಭಾಷೆ. ಆದರೆ, ಪ್ರಸ್ತುತ ಕನ್ನಡವು, ಸಾಮಾಜಿಕ, ಆರ್ಥಿಕ, ತಾಂತ್ರಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. 70ರ ರಾಜ್ಯೋತ್ಸವದ ಈ ಸಂದರ್ಭದಲ್ಲಿ ಕನ್ನಡವು ಕನ್ನಡಿಗರ 'ಅನ್ನದ ಭಾಷೆ' ಆಗಬೇಕೆಂಬುದು ಪ್ರತಿಯೊಬ್ಬರ ಆಶಯ; ಆದರೆ ಅದು ನೆರವೇರಿದೆಯೇ ಎಂದು ಪ್ರಶ್ನಿಸಿಕೊಂಡರೆ 'ಇಲ್ಲ' ಎಂಬ ಉತ್ತರವೇ ಬರುತ್ತದೆ.

ನಮ್ಮ ದೇಶದಲ್ಲಿ ಹಿಂದಿಗೆ ಯಾವ ರೀತಿಯ ಪ್ರಾಮುಖ್ಯ ಸಿಗುತ್ತಿದೆಯೋ, ಕರ್ನಾಟಕದಲ್ಲೂ ಕನ್ನಡಕ್ಕೆ ಅಷ್ಟೇ ಪ್ರಮಾಣದ ಪ್ರಾಮುಖ್ಯ ಸಿಗಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಭಾಷಾ ಸಂವಿಧಾನಕ್ಕೆ ಕೆಲವು ತಿದ್ದುಪಡಿಗಳನ್ನು ತರಬೇಕಿದೆ. ಹಿಂದಿಯನ್ನು ಹೇರಿಕೆ ಮಾಡಿ ಎಲ್ಲವನ್ನೂ ಕೇಂದ್ರೀಕೃತ ಮಾಡಿಕೊಂಡು, ಸಂಪೂರ್ಣ ಭಾರತ ಒಕ್ಕೂಟವನ್ನು 'ಏಕೀಕೃತ ವ್ಯವಸ್ಥೆ'ಯಾಗಿ ಮಾಡುತ್ತಿರುವುದು ತಪ್ಪು. ನಮ್ಮ ರಾಜ್ಯದ ಸರಕಾರಿ ಮತ್ತು ಖಾಸಗಿ ಉದ್ಯೋಗಗಳು ಕನ್ನಡಿಗರಿಗೇ ದೊರೆಯುವಂತಾಗಬೇಕು. ಅಷ್ಟಕ್ಕೂ, ನೆರೆಯ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ದ್ವಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿರುವಾಗ, ಕರ್ನಾಟಕದಲ್ಲಿ ತ್ರಿಭಾಷಾ ಸೂತ್ರದ ಅಗತ್ಯವೇನಿದೆ? ಈ ನೀತಿಯಿಂದಾಗಿ ವಲಸೆ ಬಂದವರಿಗೆ ಅನುಕೂಲವಾಗುತ್ತದೆಯೇ ಹೊರತು ಮೂಲ ಕನ್ನಡಿಗರಿಗಲ್ಲ. ಇಂದು ನೂರಾರು ಕೋಟಿ ರುಪಾಯಿ ಹಣವನ್ನು ಖರ್ಚುಮಾಡಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವ ಬದಲಿಗೆ, ಕನ್ನಡ ಶಾಲೆಗಳಿಗೆ ಉತ್ತಮ ಶಿಕ್ಷಕರನ್ನು ನೇಮಿಸಿ ಅವುಗಳನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸಬೇಕಿದೆ.

ಕನ್ನಡಿಗರ ಹೆಮ್ಮೆಯ ಸಂಕೇತವಾಗಿರುವ ಕನ್ನಡ ಭಾಷೆಯು ಕೇವಲ ಸಂವಹನದ ಸಾಧನವಲ್ಲ, ಅದು ನಮ್ಮ ಸಂಸ್ಕೃತಿ, ಪರಂಪರೆ, ಸಾಹಿತ್ಯ ಮತ್ತು ಆತ್ಮೀಯತೆಯ ಮೂಲಸೆಲೆಯಾಗಿದೆ. ಆದರೆ, ಇಂದಿನ ಜಾಗತೀಕರಣ ಮತ್ತು ತಂತ್ರಜ್ಞಾನ ಯುಗದಲ್ಲಿ ಕನ್ನಡ ಭಾಷೆಯು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದು, ಇವಕ್ಕೆ ಪರಿಹಾರಗಳನ್ನು ಕಂಡುಹಿಡಿಯುವುದು ನಮ್ಮೆಲ್ಲರ ಮತ್ತು ಆಳುಗರ ಹೊಣೆಗಾರಿಕೆಯಾಗಿದೆ. ಮುಖ್ಯವಾಗಿ, ಶಿಕ್ಷಣ, ಉದ್ಯೋಗ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಆಂಗ್ಲಭಾಷೆಯು ಪ್ರಬಲ ಸ್ಥಾನವನ್ನು ಪಡೆದಿರುವುದರಿಂದಾಗಿ, ಕನ್ನಡವನ್ನು ಉಪೇಕ್ಷಿಸುವ ಪ್ರವೃತ್ತಿ ವಿದ್ಯಾರ್ಥಿಗಳಲ್ಲೂ ಮತ್ತು ಪೋಷಕರಲ್ಲೂ ಕಂಡುಬರುತ್ತಿದೆ. ನಗರೀಕರಣ ಮತ್ತು ಪಾಶ್ಚಾತ್ಯೀಕರಣಗಳು ಕನ್ನಡದ ಬಳಕೆಯನ್ನು ಕುಗ್ಗಿಸುತ್ತಿವೆ. ನಗರಗಳಲ್ಲಂತೂ ಪೋಷಕರು ತಮ್ಮ ಮಕ್ಕಳೊಂದಿಗೆ ಕೂಡ ಕನ್ನಡದ ಬದಲು ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು ಗೌರವದ ಸಂಗತಿ ಎಂಬಂತೆ ಪರಿಗಣಿಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಕನ್ನಡದ ಬಳಕೆ ಕಡಿಮೆ ಆಗಿದ್ದು, ಫೇಸ್‌ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಂ ಮುಂತಾದ ವೇದಿಕೆಗಳಲ್ಲಿ ಕನ್ನಡದ ಬದಲು ಇಂಗ್ಲಿಷ್ ಅಥವಾ 'ಕಂಗ್ಲಿಷ್' ಬಳಕೆ ಹೆಚ್ಚಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲೂ ಕನ್ನಡದ ಕುರಿತಾದ ಹಿಂಜರಿಕೆ ಕಾಣಿಸುತ್ತಿದೆ. ಅನೇಕ ಖಾಸಗಿ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವುದಿಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯನ್ನೇ ಓದಲು-ಬರೆಯಲು ಕಷ್ಟಪಡುವಂತಾಗಿದೆ. ಇದಲ್ಲದೆ, ತಾಂತ್ರಿಕ ಪದಸಂಪತ್ತಿನ ಕೊರತೆ, ಮಾಧ್ಯಮಗಳಲ್ಲಿ ಕಾಣಬರುವ ಇಂಗ್ಲಿಷ್‌ನ ಪ್ರಭಾವ ಹಾಗೂ ಯುವಜನರ ನಿರ್ಲಕ್ಷ್ಯ ಕೂಡ ಕನ್ನಡದ ಅಭಿವೃದ್ಧಿಗೆ ಅಡ್ಡಿಯಾಗಿವೆ.

ಈ ಸವಾಲು/ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ವಿವಿಧ ಹಂತಗಳಲ್ಲಿನ ಪ್ರಯತ್ನಗಳು ಅಗತ್ಯ. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಕ್ಕೆ ಪ್ರಾಮುಖ್ಯವನ್ನು ನೀಡಬೇಕು, ಪ್ರಾಥಮಿಕ ಹಂತದಿಂದ ಪದವಿಯವರೆಗೆ ಕನ್ನಡವನ್ನು ಕಡ್ಡಾಯ ವಿಷಯವನ್ನಾಗಿಸಬೇಕು. ತಾಂತ್ರಿಕ ಕನ್ನಡದ ಅಭಿವೃದ್ಧಿ ನಡೆಯಬೇಕು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲೂ ಕನ್ನಡ ಶಬ್ದಕೋಶವನ್ನು ವಿಸ್ತರಿಸಿ ಕನ್ನಡದಲ್ಲಿ ಅಧ್ಯಯನ ಸಾಮಗ್ರಿಗಳು ಲಭ್ಯವಾಗುವಂತೆ ಮಾಡಬೇಕು. ವಿದ್ಯಾರ್ಥಿಗಳಿಗೆ ಕನ್ನಡದ ಮೂಲಕವೇ ವಿಜ್ಞಾನ, ಗಣಿತ, ಇತಿಹಾಸ ಮುಂತಾದ ವಿಷಯಗಳನ್ನು ಬೋಧಿಸಿದರೆ, ಆಯಾ ವಿಷಯಜ್ಞಾನದ ಜತೆಜತೆಗೆ ಭಾಷಾ ಪ್ರೀತಿಯೂ ಅವರಲ್ಲಿ ಬೆಳೆಯುತ್ತದೆ. ಇನ್ನು, ಸಾಮಾಜಿಕ ಮಾಧ್ಯಮಗಳಲ್ಲೂ ಕನ್ನಡ ಪ್ರಚಾರ ಅತ್ಯಂತ ಅಗತ್ಯ; ಯುವಜನರು ಕನ್ನಡದಲ್ಲಿ ಬರೆಯುವ, ವಿಡಿಯೋ ಮಾಡುವ, ಕಂಟೆಂಟ್ ರಚಿಸುವ ಕಾರ್ಯದಲ್ಲಿ ವ್ಯಸ್ತರಾಗಬೇಕು. ಇದು ಭಾಷೆಯ ಹೊಸ ರೂಪಾಂತರಕ್ಕೆ ಕಾರಣವಾಗುತ್ತದೆ.

ಕನ್ನಡದ ವಾತಾವರಣವನ್ನು ಕಟ್ಟುವಲ್ಲಿ ಸರಕಾರದ ಪ್ರೋತ್ಸಾಹವೂ ಅತ್ಯಂತ ಮುಖ್ಯವಾಗಿರುತ್ತದೆ. ಸರಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತುಗಳ ಮೂಲಕ ಈ ಸಂಬಂಧದ ಯೋಜನೆಗಳನ್ನು ಜಾರಿಗೆ ತರುವಂತಾಗಬೇಕು. ಯುವಜನರು ತಮ್ಮ ದೈನಂದಿನ ಜೀವನದಲ್ಲಿ ಕನ್ನಡದಲ್ಲೇ ಮಾತನಾಡಲು, ಬರೆಯಲು ಹಾಗೂ ಕನ್ನಡ ಪುಸ್ತಕಗಳನ್ನು ಓದಲು ಆಸಕ್ತಿಯನ್ನು ತಳೆಯಬೇಕು. ಮಾಧ್ಯಮಗಳಲ್ಲೂ ಕನ್ನಡದ ಬಲಪಡಿಸುವಿಕೆ ನಡೆಯಬೇಕು. ಕನ್ನಡದ ಪತ್ರಿಕೆಗಳು, ದೃಶ್ಯ ಮಾಧ್ಯಮಗಳು ಹಾಗೂ ಚಲನಚಿತ್ರಗಳು, ಶುದ್ಧ ಮತ್ತು ಸಮೃದ್ಧ ಕನ್ನಡದ ಬಳಕೆಗೆ ಮಾದರಿಯಾಗಬೇಕು. ಕನ್ನಡವು ಕೇವಲ ನಮ್ಮ ಮಾತೃಭಾಷೆಯಲ್ಲ, ಅದು ನಮ್ಮ ಸಂಸ್ಕೃತಿ ಮತ್ತು ಅಸ್ತಿತ್ವದ ಪ್ರತೀಕವಾಗಿದೆ. ನಮ್ಮ ಹೋರಾಟ, ನಿಷ್ಠೆ ಮತ್ತು ಪ್ರೀತಿಗಳ ಮೇಲೆ ಕನ್ನಡದ ಬೆಳವಣಿಗೆಯು ಅವಲಂಬಿತವಾಗಿದೆ. ನಾವು ಕನ್ನಡವನ್ನು ಮಾತನಾಡುವ, ಬರೆಯುವ ಹಾಗೂ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಬಳಸುವ ಮೂಲಕ ಅದರ ಸಿರಿಯನ್ನು ಕಾಪಾಡಬಹುದು.

ಭಾಷೆ ಉಳಿದರೆ ಸಂಸ್ಕೃತಿ ಉಳಿಯುತ್ತದೆ, ಸಂಸ್ಕೃತಿ ಉಳಿದರೆ ನಾವು ಉಳಿಯುತ್ತೇವೆ. ಆದ್ದರಿಂದ, 'ನಮ್ಮ ನುಡಿಯೇ ನಮ್ಮ ಜೀವ' ಎಂಬ ನಂಬಿಕೆಯಿಂದ ಕನ್ನಡದ ಸಂರಕ್ಷಣೆ ಮತ್ತು ಪ್ರಚಾರದಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕು. ಆದ್ದರಿಂದ, ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಗಳ ಬಗ್ಗೆ ಹೆಮ್ಮೆಪಡುತ್ತಾ, 'ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು' ಎಂಬ ಕವಿವಾಣಿಯಂತೆ ಸಮೃದ್ಧ ಕರ್ನಾಟಕದ ನಿರ್ಮಾಣಕ್ಕೆ ಕೈಜೋಡಿಸೋಣ. ಕನ್ನಡವನ್ನು ಉಳಿಸಿ ಬೆಳೆಸಲು ಸಂಕಲ್ಪಿಸೋಣ. 'ಸಿರಿವಂತನಾದರೂ ಕನ್ನಡನಾಡಲ್ಲಿ ಮೆರೆವೇ, ಭಿಕ್ಷುಕನಾದರೂ ಕನ್ನಡನಾಡಲ್ಲಿ ಮಡಿವೇ' ಎಂಬ ಸಿ.ವಿ. ಶಿವಶಂಕರ್ ಅವರ ಮಾತಿನಂತೆ ನಾವೆಲ್ಲರೂ ಬದುಕಬೇಕಿದೆ. 'ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಕುವೆಂಪುರವರ ಮಾತಿನಂತೆ, ಕನ್ನಡದ ಕೆಲಸವೇ ದೇವರ ಕೆಲಸ ಎಂದು ತಿಳಿದು, ಕನ್ನಡಕ್ಕಾಗಿ ಏನಾದರೂ ಮಾಡಬೇಕೆಂಬ ತುಡಿತದಿಂದ ನಾವೆಲ್ಲರೂ ಬದುಕೋಣ...

(ಲೇಖಕರು ಹವ್ಯಾಸಿ ಬರಹಗಾರರು)

ಕಸ ಸುರಿಯುವ ಹಬ್ಬ: ಇದು ಅತಿರೇಕದ ಕ್ರಮವೇ?

ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆದುಹೋಗುವ ವಿಷಯದಲ್ಲಿ ಸಾಮಾನ್ಯವಾಗಿ ಸಮಾಜದ ಕೆಳಸ್ತರದ ಮತ್ತು ಆರ್ಥಿಕವಾಗಿ ದುರ್ಬಲರಾದ ಜನರನ್ನು ದೂಷಿಸಲಾಗುತ್ತದೆ ಹಾಗೂ ಸುಶಿಕ್ಷಿತರು, ಆರ್ಥಿಕವಾಗಿ ಸಬಲರು ಎನಿಸಿಕೊಂಡವರಿಗೆ 'ಕ್ಲೀನ್ ಚಿಟ್' ನೀಡಲಾಗುತ್ತದೆ. ವಿಚಿತ್ರವೆಂದರೆ, ವಿದ್ಯಾವಂತರು/ಪ್ರಜ್ಞಾವಂತರು ಎನಿಸಿಕೊಂಡ ಸಾಕಷ್ಟು ಮಂದಿಯೂ ಈ ಬಾಬತ್ತಿನಲ್ಲಿ ಪಾಲುದಾರರೇ.

ಯಕ್ಷಪ್ರಶ್ನೆ

ರಮಾನಂದ ಶರ್ಮಾ

vveditoped@gmail.com

ಬೆಂಗಳೂರಿನಲ್ಲಿ ರಸ್ತೆಬದಿ, ಚರಂಡಿ, ರಾಜಕಾಲುವೆ, ಖಾಲಿ ನಿವೇಶನ ಹೀಗೆ ಎಲ್ಲೆಂದರಲ್ಲಿ ಕಸ/ತ್ಯಾಜ್ಯವನ್ನು ಬಿಸಾಡುವವರ ಮನೆಗಳನ್ನು ಪತ್ತೆಮಾಡಿ, ಅವರ ಮನೆಬಾಗಿಲಿನಲ್ಲಿಯೇ ಕಸ ಸುರಿದು ದಂಡ ವಿಧಿಸುವ ಕಾರ್ಯಾಚರಣೆಯನ್ನು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವು (ಜಿಬಿಎ) ಆರಂಭಿಸಿದೆ, ಇದಕ್ಕೆ 'ಕಸ ಸುರಿಯುವ ಹಬ್ಬ' ಎಂದೂ ಹೆಸರಿಟ್ಟಿದೆ! ಮನೆ ಬಾಗಿಲಿಗೆ ಬರುವ ಕಸದ ಆಟೋ-ಟಿಪ್ಪರ್‌ಗಳಿಗೆ ಕಸ ನೀಡದೆ, ತಮ್ಮ ಬೈಕುಗಳನ್ನೇರಿ ಕಸ ತುಂಬಿದ ಚೀಲಗಳನ್ನು ತಂದು ಬೇಕಾಬಿಟ್ಟಿ ಬಿಸಾಡುವ ಮತ್ತು ಎಲ್ಲೆಂದರಲ್ಲಿ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಳ್ಳುವ ಈ ಕಾರ್ಯಾಚರಣೆಯನ್ನು 'ಜಿಬಿಎ' ಗಂಭೀರವಾಗಿ ಪರಿಗಣಿಸಿದೆ.

ಬೇಕಾಬಿಟ್ಟಿಯಾಗಿ ಕಸ ಎಸೆಯುವವರನ್ನು ನಿಖರವಾಗಿ ಗುರುತಿಸಲು ನಗರಪಾಲಿಕೆಯ ಮಾರ್ಷಲ್‌ಗಳ ಸೇವೆಯನ್ನು ಮತ್ತು ಸಿಸಿಟಿವಿಗಳನ್ನು 'ಜಿಬಿಎ' ಬಳಸುತ್ತಿದೆ. ಮನೆಮನೆಯಿಂದ ಕಸ/ತ್ಯಾಜ್ಯದ ಸಂಗ್ರಹಣೆಗೆ ಹೆಚ್ಚುವರಿ ಟಿಪ್ಪರ್‌ಗಳನ್ನು ಸಜ್ಜುಗೊಳಿಸಲು, ರಾತ್ರಿ ವೇಳೆ ಕೂಡ ಅವುಗಳ ಸೇವೆಯನ್ನು ಒದಗಿಸಲು, ನಿಗದಿತ ಸ್ಥಳಗಳಲ್ಲಿ ಕಸದ 'ಕಿಯೋಸ್ಕ್'ಗಳನ್ನು ಸ್ಥಾಪಿಸಲು 'ಜಿಬಿಎ' ಮುಂದಾಗಿದೆ. ಆಶ್ಚರ್ಯವೆಂದರೆ, ಈ ಕಾರ್ಯಾಚರಣೆಯನ್ನು ಆರಂಭಿಸಿದ ದಿನವೇ 300 ಮನೆಗಳಿಗೆ ಕಸವನ್ನು ಹಿಂದಿರುಗಿಸಲಾಗಿದೆ ಅಥವಾ ಸರಿಯಲಾಗಿದೆ ಮತ್ತು 3 ಲಕ್ಷ ರು. ದಂಡವನ್ನು ವಸೂಲು ಮಾಡಲಾಗಿದೆ. ಇದಕ್ಕೆ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರವನ್ನೂ ನೀಡಲಾಗಿದೆ. ಈ ಕ್ರಮವನ್ನು ಬಹುತೇಕರು ಮುಕ್ತಕಂಠದಿಂದ ಹೊಗಳುತ್ತಿರುವುದರ ಜತೆಗೆ, 'ಇದು ಅನ್ಯಥಾ ಶರಣಂ ನಾಸ್ತಿ ಪರಿಸ್ಥಿತಿಯ ಕೊಡುಗೆ' ಎನ್ನುತ್ತಿದ್ದಾರೆ.

'ಜಿಬಿಎ' ದಿಢೀರ್ ಎಂಬಂತೆ ಈ ಕ್ರಮವನ್ನು ಕೈಗೊಂಡಿಲ್ಲ; ಈ ಸಮಸ್ಯೆಗೆ ಅಂತ್ಯಹಾಡಲು ಈ ಹಿಂದೆ ಸಾಕಷ್ಟು ಚಿಂತನ-ಮಂಥನವನ್ನು ಅದು ನಡೆಸಿದ್ದುಂಟು, ಹಲವು ರೀತಿಯ ಪ್ರಯೋಗಗಳನ್ನು ಮಾಡಿದ್ದುಂಟು. ಇವು ನಿರೀಕ್ಷಿತ ಫಲ ನೀಡಲು ವಿಫಲವಾಗಿದ್ದರಿಂದ, ಇಂಥ ಕಠಿಣ ಹೆಜ್ಜೆಯನ್ನಿಡಲು 'ಜಿಬಿಎ' ಒಲ್ಲದ ಮನಸ್ಸಿನಿಂದ ಮುಂದಾಗಿದೆ. ಒಂದು ಕಾಲಕ್ಕೆ, ಬೀದಿಯ ಕೊನೆಯಲ್ಲಿ ತೊಟ್ಟಿ ಇರಿಸಿ, ಜನರು ಕಸವನ್ನು ಅದರಲ್ಲಿ ಹಾಕುವುದಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಇದು ಕೆಲ ಕಾಲ ಚೆನ್ನಾಗಿಯೇ ನಡೆಯಿತು. ಕಾಲಕ್ರಮೇಣ ಮನೆಗಳ ಸಂಖ್ಯೆ ಹೆಚ್ಚಲು, 'ವಾಸನೆ ಬೀರುವ ಈ ತೊಟ್ಟಿಗಳು ನಮ್ಮ ಮನೆಯ ಹತ್ತಿರ ಬೇಡ, ಬೇರೆಲ್ಲಾದರೂ ಇರಲಿ' ಎನ್ನುವವರ ಸಂಖ್ಯೆಯೂ ಹೆಚ್ಚಾಯಿತು. ಹಾಗೆಯೇ ತೊಟ್ಟಿಯನ್ನು ಇರಿಸಲು ಸ್ಥಳದ ಸಮಸ್ಯೆಯೂ ಎದುರಾಯಿತು. ಜನರ ಆಕ್ಷೇಪದಲ್ಲೂ ಅರ್ಥವಿತ್ತು; ಕೆಲವರು ಈ ತೊಟ್ಟಿಯಲ್ಲಿ ಕಸವನ್ನು ಸರಿಯಾಗಿ ಹಾಕದ ಕಾರಣ, ಹೊರಗೇ ಹೆಚ್ಚು ಕಸ ಬಿದ್ದು ಚೆಲ್ಲಾಪಿಲ್ಲಿಯಾಗುತ್ತಿತ್ತು. ಸಾಲದೆಂಬಂತೆ ಬೀದಿನಾಯಿಗಳು ಈ ಕಸವನ್ನು ಬೇಕಾಬಿಟ್ಟಿ ಎಳೆದುಹಾಕುವುದೂ ಇತ್ತು. ಕಸದ ತೊಟ್ಟಿ ತುಂಬಿ ತುಳುಕಿದರೂ, ಅದನ್ನು ದಿನಂಪ್ರತಿ ಹೊರ ಸಾಗಿಸಲು ಸಾಕಷ್ಟು ಅಡಚಣೆಗಳಿದ್ದವು. ಈ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಮತ್ತು ದೂರುಗಳನ್ನು ವಿಶ್ಲೇಷಿಸಿದ ನಗರಪಾಲಿಕೆಯು, ಈ ತೊಟ್ಟಿ ವ್ಯವಸ್ಥೆಗೆ 'ಗುಡ್ ಬೈ' ಹೇಳಿ ಮನೆಮನೆಯಿಂದ ಕಸ ಸಂಗ್ರಹಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿತು. ಈ ವ್ಯವಸ್ಥೆಯನ್ನು ಸುಗಮವಾಗಿಸಲು, ಒಣಕಸ ಮತ್ತು ಹಸಿಕಸವನ್ನು ವಿಂಗಡಿಸಿ ಬೇರ್ಪಡಿಸಲು ಪ್ರತಿಯೊಂದು ಮನೆಗೂ ಎರಡೆರಡು ಕಸದ ಬುಟ್ಟಿಗಳನ್ನು ಅದು ವಿತರಿಸಿತು. ಟಿಪ್ಪರ್‌ನವರು ಪ್ರತಿದಿನ ನಿಗದಿತ ಸಮಯದಲ್ಲಿ ಹಸಿಕಸ ಮತ್ತು ಒಣಕಸವನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ಬರುವಂತೆ ವ್ಯವಸ್ಥೆಗೊಳಿಸಲಾಗಿತ್ತು, ಜನರೂ ಈ ವ್ಯವಸ್ಥೆಯನ್ನು ಶ್ಲಾಘಿಸಿದ್ದರು. ಆದರೆ, ಯಾವುದೇ ವ್ಯವಸ್ಥೆಯು ದೋಷರಹಿತವಾಗಿರುವುದು ಕೊಂಚ ವಿರಳವೇ, ಅಂತೆಯೇ ಈ ವ್ಯವಸ್ಥೆ ಕೂಡ. ಹಲವರು ಈ ವ್ಯವಸ್ಥೆಯನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದರೆ, ಮತ್ತೆ ಕೆಲವರು ಈ ಗಾಡಿಗಳು ಮನೆಬಾಗಿಲಿಗೆ ಬಂದು ಹಾರ್ನ್ ಮಾಡಿದರೂ ಕಸ ನೀಡದಷ್ಟು ಉದಾಸೀನ ತೋರಲು ಶುರುಮಾಡಿದರು. ಕೆಲವರು (ಬಹುತೇಕ ರಾತ್ರಿಪಾಳಿಯಲ್ಲಿ ಕೆಲಸ ಮಾಡುವವರು), 'ನಾವಿನ್ನೂ ಹಾಸಿಗೆಯಿಂದ ಮೇಲೇಳುವ ಮೊದಲೇ ಇವರು ಬಂದಿರುತ್ತಾರೆ' ಎಂದು ಗೊಣಗಿದರೆ, ಇನ್ನು ಕೆಲವರು 'ಕಸದವರು ಬಂದಾಗ ನಾವು ತಿಂಡಿ ತಯಾರಿಯಲ್ಲಿ ವ್ಯಸ್ತರಾಗಿರುತ್ತೇವೆ' ಎಂದೋ, 'ಅಷ್ಟು ಹೊತ್ತಿಗೇ ಮನೆಯ ಕಸ ರೆಡಿಯಾಗಿರುವುದಿಲ್ಲ' ಎಂದೋ ನೆಪಗಳನ್ನು ಹೇಳತೊಡಗಿದರು. ಟಿಪ್ಪರ್‌ನವರು ಬರುವ ಸಮಯ ಬದಲಾಗಲಿ ಎಂದು ಸಲಹೆ ನೀಡಿದವರೂ ಉಂಟು. ಹಸಿ ಮತ್ತು ಒಣಕಸವನ್ನು ವಿಂಗಡಣೆ ಮಾಡದವರು ಸಾಕಷ್ಟು ಮಂದಿ. ಒಟ್ಟಿನಲ್ಲಿ ಈ ಸಮಸ್ಯೆ ತಾರಕಕ್ಕೇರಲು ಸಾಕಷ್ಟು ಕಾರಣಗಳಿದ್ದವು.

ಹೀಗೆ ಟಿಪ್ಪರ್‌ಗಳಿಗೆ ಕಸ ಹಾಕಲು ವಿಫಲರಾದವರೆಲ್ಲಾ ಅದನ್ನು ರಸ್ತೆಬದಿಯಲ್ಲೋ, ಹತ್ತಿರದ ಖಾಲಿ ನಿವೇಶನದಲ್ಲೋ, ಬೀಗ ಹಾಕಿರುವ ಮನೆಯ ಎದುರಿಗೋ, ಕೂಡುರಸ್ತೆಯಲ್ಲೋ ಎಸೆದು ಕೈತೊಳೆದುಕೊಳ್ಳುತ್ತಿದ್ದರು. ಈ ಘನಂದಾರಿ ಕೆಲಸ ಬಹುತೇಕ ನೆರವೇರುತ್ತಿದ್ದುದು 'ಜಗವೆಲ್ಲ ಮಲಗಿರುವ' ಮಧ್ಯರಾತ್ರಿಯಲ್ಲಿ. ಇಷ್ಟಾಗಿಯೂ ಯಾರಾದರೂ ಪ್ರಶ್ನಿಸಿದರೆ, 'ಅದನ್ನು ಕೇಳಲು ನೀವ್ಯಾರು?

ಪಾಲಿಕೆಯವರು ಇದನ್ನು ನೋಡಿಕೊಳ್ಳುತ್ತಾರೆ, ಅವರಿಗೆ ನಾವು ಉತ್ತರಿಸುತ್ತೇವೆ' ಎಂಬ ಉದ್ಧಟ ಪ್ರತಿಕ್ರಿಯೆ! ಜನರು ಹೀಗೆ ಬೇಕಾಬಿಟ್ಟಿಯಾಗಿ ಕಸವನ್ನು ಎಸೆಯುವ ಸ್ಥಳಗಳಲ್ಲಿ 'ಇಲ್ಲಿ ಕಸವನ್ನು ಎಸೆದರೆ ದಂಡ ವಿಧಿಸಲಾಗುವುದು, ಈ ಸ್ಥಳವು ಸಿಸಿಟಿವಿಯ ಕಣ್ಗಾವಲಿನಲ್ಲಿದೆ' ಎಂದು ದಪ್ಪಕ್ಷರಗಳಲ್ಲಿ ಬರೆದಿದ್ದರೂ ಅದನ್ನು ಲೆಕ್ಕಿಸುತ್ತಿದ್ದವರು ಕಮ್ಮಿಯೇ.

ಈ ಎಲ್ಲ ಸಮಸ್ಯೆಗಳ ಹಿನ್ನೆಲೆಯಲ್ಲಿ, 'ಜಿಬಿಎ' ವತಿಯಿಂದ 'ಕಸ ಸುರಿಯುವ ಹಬ್ಬ' ಶುರುವಾಯಿತು ಎನ್ನಿ. 'ಜಿಬಿಎ' ಕೈಗೊಂಡ ಈ ಕ್ರಮ ಮೇಲ್ನೋಟಕ್ಕೆ ಸ್ವಲ್ಪ ಅತಿರೇಕದ್ದು ಎನಿಸಬಹುದು; ಪ್ರಜ್ಞಾವಂತರು ಎಂಬ ಹಣೆಪಟ್ಟಿ ನೇತುಹಾಕಿಕೊಂಡವರು ಇದನ್ನು ವಿರೋಧಿಸಬಹುದು, 'ಪರ್ಯಾಯ ಮಾರ್ಗವನ್ನು ಹುಡುಕಬಹುದಿತ್ತು' ಎಂದು ವಾದಿಸಬಹುದು. ಆದರೆ, 'ಇದು ಅನ್ಯಮಾರ್ಗವಿಲ್ಲದೆ ಕೈಗೊಂಡ ಕ್ರಮ' ಎನ್ನುತ್ತದೆ 'ಜಿಬಿಎ'. ಅದು ಹೇಳುವುದರಲ್ಲೂ ಅರ್ಥವಿದೆ. ಏಕೆಂದರೆ ಇಂಥ ಕ್ರಮವನ್ನು ಕೈಗೊಳ್ಳುವುದಕ್ಕೂ ಮುನ್ನ 'ಜಿಬಿಎ' ಸಾಕಷ್ಟು ಆಲೋಚಿಸಿದೆ, ಜನರನ್ನೂ ಎಚ್ಚರಿಸಿದೆ. ಕೊನೆಗೆ ಏನೂ ಫಲ ಸಿಕ್ಕದ ಕಾರಣ, ಅನಿವಾರ್ಯವಾಗಿ ಈ ಹಾದಿಯನ್ನು 'ಜಿಬಿಎ' ತುಳಿದಿದೆ. ಬೆಂಗಳೂರು ರಸ್ತೆಗಳಲ್ಲಿ ಮುಖಕ್ಕೆ ರಾಚುವಂತಿರುವ ಹೊಂಡಗಳು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿರುವುದಕ್ಕೆ ಮಹಾನಗರ ಪಾಲಿಕೆ ಅಥವಾ 'ಜಿಬಿಎ' ದೋಷಿ ಇರಬಹುದು; ಆದರೆ ನಗರದಾದ್ಯಂತ ಕಸ/ತ್ಯಾಜ್ಯವು ಚೆಲ್ಲಾಪಿಲ್ಲಿಯಾಗಿ ಬೀಳುವಂತಾಗಿರುವುದರಲ್ಲಿ ಜನರ ಪಾತ್ರವೇ ಹೆಚ್ಚು. ಇದು ಜನರಲ್ಲಿ ನಾಗರಿಕ ಪ್ರಜ್ಞೆಯು ಕುಸಿತವಾಗಿರುವುದರ ಸಂಕೇತ ಎನ್ನಬಹುದು.

ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆದುಹೋಗುವ ವಿಷಯದಲ್ಲಿ ಸಾಮಾನ್ಯವಾಗಿ ಸಮಾಜದ ಕೆಳಸ್ತರದ ಮತ್ತು ಆರ್ಥಿಕವಾಗಿ ದುರ್ಬಲರಾದ ಜನರನ್ನು ದೂಷಿಸಲಾಗುತ್ತದೆ ಹಾಗೂ ಸುಶಿಕ್ಷಿತರು, ಆರ್ಥಿಕವಾಗಿ ಸಬಲರು ಎನಿಸಿಕೊಂಡವರಿಗೆ 'ಕ್ಲೀನ್ ಚಿಟ್' ನೀಡಲಾಗುತ್ತದೆ. ವಿಚಿತ್ರವೆಂದರೆ, ವಿದ್ಯಾವಂತರು/ಪ್ರಜ್ಞಾವಂತರು ಎನಿಸಿಕೊಂಡ ಸಾಕಷ್ಟು ಮಂದಿಯೂ ಈ ಬಾಬತ್ತಿನಲ್ಲಿ ಪಾಲುದಾರರೇ; ಇಂಥವರು ಬೈಕ್‌ನಲ್ಲಿ ಹೋಗುತ್ತಾ ಕಸದ ಚೀಲವನ್ನು ಮೆಲ್ಲಗೆ ರಸ್ತೆಯ ಬದಿಗೆ ಒಗೆಯುವುದು, ಕಾರ್‌ನಲ್ಲಿ ಹೋಗುವಾಗ ಕಿಟಕಿಯ ಗಾಜನ್ನು ಮೆಲ್ಲಗೆ ಇಳಿಸಿ ಕಸದ ಚೀಲವನ್ನು ಗಟಾರಕ್ಕೆ ಒಗೆಯುವುದು ತೀರಾ ಸಾಮಾನ್ಯವಾದ ದೃಶ್ಯ. ಇತ್ತೀಚೆಗೆ ಬಡಾವಣೆಯೊಂದರಲ್ಲಿ, ಕಸದ ಚೀಲವನ್ನೆಸೆದ ಕಾರನ್ನು ತಡೆದು ನಿಲ್ಲಿಸಿ, ಅವರು ಒಗೆದ ಕಸವನ್ನು ಅವರ ಕಾರಿನಲ್ಲಿಯೇ ತುರುಕಿ ಕಳಿಸಿದ ಘಟನೆ ನಡೆದಿದೆ. ಆ ಕಾರಿನವರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದರಿಂದ, ಈ ದೃಶ್ಯಾವಳಿಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಿಲ್ಲ.

ಇಂಥ ಬೆಳವಣಿಗೆಗಳು ನಿಲ್ಲಬೇಕು ಎಂದಾದಲ್ಲಿ, ಪ್ರತಿದಿನವೂ ನಿಗದಿತ ಸಮಯಕ್ಕೆ ಮನೆ ಮುಂದೆಯೇ ಬರುವ ಆಟೋ-ಟಿಪ್ಪರ್‌ಗಳಿಗೆ ಕಸವನ್ನು ಹಾಕಬೇಕು, ಹಸಿ ಮತ್ತು ಒಣಕಸವನ್ನು ವಿಂಗಡಣೆ ಮಾಡಿ ಹಾಕಬೇಕು. ಜತೆಗೆ, ಟಿಪ್ಪರ್‌ಗಳ ಸಮಯಪಾಲನೆ ಹಾಗೂ ಕಾರ್ಯನಿರ್ವಹಣೆಯ ಮೇಲೆ ಹದ್ದಿನಕಣ್ಣು ಇಡುವ ಅಗತ್ಯವೂ ಇದೆ. ಕಸದ ವಿಲೇವಾರಿಯು ನಗರಪಾಲಿಕೆ ಮತ್ತು ಜನತೆಯ ಜಂಟಿ ಹೊಣೆಯಾಗಿರುತ್ತದೆ ಎಂಬುದನ್ನು ಮರೆಯದಿರೋಣ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಮನದ ಬೇಗುದಿ

ಎಚ್. ಆನಂದರಾಮ ಶಾಸ್ತ್ರೀ

ಕಣ್ಣೊಳಗೆ ಕಸ ಬಿದ್ದಿದೆಯೇ?

ತಪ್ಪಿತಸ್ಥ'ರ ಮನೆಮುಂದೆ ಕಸ ಸುರಿಯುವ ಗ್ರೇಟರ್ ಬೆಂಗಳೂರು ಅಥಾರಿಟಿಯ 'ಕಸ ಸುರಿಯುವ ಹಬ್ಬ'ದ ಹಿನ್ನೆಲೆಯಲ್ಲಿ, ಒಂದು ವಾಸ್ತವದ ಚಿತ್ರಣ ಇಲ್ಲಿದೆ.

ಬೆಂಗಳೂರಿನಲ್ಲಿ ನನ್ನ ಮನೆ ಇರುವ ಏರಿಯಾದಲ್ಲಿ ಪೌರಕಾರ್ಮಿಕರು ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಬಂದು ರಸ್ತೆಗಳ ಕಸ ಗುಡಿಸಿ ಕಾಸಿಗೆ ಕೈಯೊಡ್ಡಿ ತೆರಳುತ್ತಾರೆ. ಪ್ರತಿದಿನ ರಾತ್ರಿ ಹನ್ನೊಂದರ ನಂತರ, ಬೆಳಗಿನ ಒಳಗೆ ಅನಾಮಿಕರು ಸುರಿದುಹೋಗುವ ಎಂಜಲು ತ್ಯಾಜ್ಯಗಳೂ ಸೇರಿದಂತೆ ಕೆಟ್ಟಾ ಕೊಳಕು ಕಸದ ರಾಶಿಗಳು ರಸ್ತೆಯೆಲ್ಲ ಹರಡಿಕೊಂಡಿರುತ್ತವೆ. ಸುತ್ತಲಿನ ಮನೆಗಳವರ ಕೃಪಾಪೋಷಿತ ಬೀದಿನಾಯಿಗಳು-ಮನೆನಾಯಿಗಳು ಆ ಕಸಗಳನ್ನು ಚೆಲ್ಲಾಡಿ ಇಡೀ ರಸ್ತೆಯನ್ನೂ ಪರಿಸರವನ್ನೂ ನರಕವಾಗಿಸುತ್ತವೆ. ಯಾರೋ ಸುರಿದುಹೋದ ಕಸ ನನ್ನ ಮನೆಯೂ ಸೇರಿದಂತೆ ಯಾರದೋ ಮನೆಗಳ ಮುಂದೆ ಬಂದು ಬಿದ್ದು ಆ ಮನೆಗಳವರ ಬಗ್ಗೆ ತಪ್ಪು ಕಲ್ಪನೆಗೆ ಎಡೆಮಾಡುತ್ತದೆ.

ಇನ್ನು, ಕಸದ ಗಾಡಿಯವರು ಎರಡು ದಿನಕ್ಕೊಮ್ಮೆ ಬರುತ್ತಾರೆ, ಕೆಲವು ಸಲ ಮೂರು ದಿನಗಳೂ ಆಗುತ್ತವೆ. ಅವರು ಮನೆ ಕಸದ ಜತೆಗೆ, ಗೊಣಗಾಡುತ್ತಾ ಕೂಗಾಡುತ್ತಾ ಒಂದಷ್ಟು ರಸ್ತೆ ಕಸವನ್ನು ಎತ್ತುತ್ತಾರೆ. ಉಳಿದಂತೆ, ತಿಪ್ಪೆರಾಶಿಯ ಮಧ್ಯೆಯೇ ನಿವಾಸಿಗಳ ನಿತ್ಯದ ಬಾಳು ಸಾಗಬೇಕಾಗಿದೆ. ನನ್ನ ಮನೆಯೆದುರಿನ ರಸ್ತೆಮೇಲೆ ಯಾರೋ ಎಸೆದುಹೋದ ಮತ್ತು ನಾಯಿಗಳು ನನ್ನ ಮನೆಯ ಗೇಟಿನವರೆಗೂ ಚೆಲ್ಲಾಡಿದ ಎಂಜಲು ತ್ಯಾಜ್ಯ, ದೇಹ ಸಂಬಂಧಿ ತ್ಯಾಜ್ಯ ಇತ್ಯಾದಿ ಘೋರ 'ಕಸ'ಗಳನ್ನು ಹೆಚ್ಚುಕಮ್ಮಿ ಪ್ರತಿನಿತ್ಯ ನಾನೇ ಒಟ್ಟುಮಾಡಿ ಸೂಕ್ತ ರೀತಿಯಲ್ಲಿ ಕಸದ ಗಾಡಿಗಳಿಗೆ ವಿಲೇವಾರಿ ಮಾಡುತ್ತಿದ್ದೇನೆ. ನಾಗರಿಕರ ದೂರುಗಳಿಗೆ, ವಿನಂತಿಗಳಿಗೆ ಸೂಕ್ತ ಪ್ರತಿಕ್ರಿಯೆಯೂ ಇಲ್ಲ, ಕ್ರಮವೂ ಇಲ್ಲ. ಬೆಂಗಳೂರಿನ ಹಲವೆಡೆ ಇದೇ ಪರಿಸ್ಥಿತಿ ಇದೆ.

ವಾಸ್ತವವು ಹೀಗಿರುವಾಗ, ಮಹಾನಗರಪಾಲಿಕೆಯು ತನ್ನಲ್ಲಿ ಲೋಪ ಇಟ್ಟುಕೊಂಡು, ಕಸ ಸುರಿಯುತ್ತೇವೆಂದು ನಾಗರಿಕರನ್ನು ಬೆದರಿಸುವುದು ಎಷ್ಟು ಸರಿ? ಮೇಲೆ ವಿವರಿಸಿರುವ ವಸ್ತುಸ್ಥಿತಿಯು ಮಹಾನಗರಪಾಲಿಕೆಯ ಕಣ್ಣಿಗೆ ಕಾಣಿಸದಂತೆ ಅದರ ಕಣ್ಣೊಳಗೇನಾದರೂ ಕಸ ಬಿದ್ದಿದೆಯೇ?

ರಸ್ತೆಗುಂಡಿ ಮುಚ್ಚುವ ಬದಲು ದೂರುವವರನ್ನು ಟೀಕಿಸುವುದು, ಮೂತ್ರಾಲಯಗಳನ್ನು ಕಟ್ಟಿಸುವ ಬದಲು ಮೂತ್ರ ವಿಸರ್ಜಿಸುವವರನ್ನು ದೂಷಿಸುವುದು, ಮನುಷ್ಯರನ್ನು ಕಚ್ಚುವ-ಕೊಲ್ಲುವ ಬೀದಿನಾಯಿಗಳನ್ನು ನಿಯಂತ್ರಿಸುವ ಬದಲು ಪೊಳ್ಳು ಆಶ್ವಾಸನೆ ನೀಡುತ್ತ ಕಾಲ ತಳ್ಳುವುದು, ಫುಟ್ಪಾತ್ ಸರಿಯಾಗಿ ನಿರ್ಮಿಸದೆ-ತೆರವುಗೊಳಿಸದೆ ರಸ್ತೆ ಸುರಕ್ಷೆ ಬಗ್ಗೆ ಉಪದೇಶ ಮಾಡುವುದು, ನಿಷೇಧಿತ ಸ್ಥಳಗಳಲ್ಲಿ ಬೀಡಿ-ಸಿಗರೇಟ್ ಮಾರುತ್ತಾ ಅಲ್ಲೇ ಧೂಮಪಾನಕ್ಕೂ ಅವಕಾಶಮಾಡಿಕೊಡುವ ವ್ಯಾಪಾರಿಗಳಿಗೆ ಫೈನ್ ಹಾಕಿ ಅಲ್ಲೊಂದು ಬೋರ್ಡ್ ಸಿಕ್ಕಿಸಿ, ಮರುದಿನದಿಂದಲೇ ಆ ಕಾನೂನುಬಾಹಿರ ಚಟುವಟಿಕೆ ಮುಂದುವರಿಯುತ್ತಿದ್ದರೂ ನೋಡಿಕೊಂಡು ಸುಮ್ಮನಿರುವುದು, ಇಂಥ 'ಅದ್ಭುತ' ಆಡಳಿತ ವ್ಯವಸ್ಥೆಯಲ್ಲಿ ನಾವು ನಾಗರಿಕರು ಜೀವನ ಸಾಗಿಸುತ್ತಿದ್ದೇವಲ್ಲವೇ?

(ಲೇಖಕರು ಹಿರಿಯ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:292

ಸಮಾಚಾರ ಸಣ್ಣದಲ್ಲ

ಪ್ರಧಾನಿ ಮೋದಿ ವಿರುದ್ಧ ಖರ್ಗೆ ಟೀಕೆ



ದೆಹಲಿ: ಆರ್‌ಜೆಡಿ ಪಕ್ಷವು ಕಾಂಗ್ರೆಸ್‌ನಿಂದ ಮುಖ್ಯಮಂತ್ರಿ ಹುದ್ದೆಯನ್ನು ಕಿತ್ತುಕೊಂಡಿದೆ, ಹಾಗಾಗಿ ಮಹಾಘಟಬಂಧನ ಮೈತ್ರಿಕೂಟದಲ್ಲಿ ಬಿರುಕು ಮೂಡಲು ಕಾರಣವಾಗಿದೆ ಎಂದು ಪ್ರಧಾನಿ ಮೋದಿ ಅವರ ಹೇಳಿಕೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ನಿರಾಕರಿಸಿದ್ದಾರೆ. 'ಅದೆಲ್ಲವೂ ಸುಳ್ಳು, ಪ್ರಧಾನಿಗೆ ಬಿಹಾರ ಚುನಾವಣೆ ಬಗ್ಗೆ ಹೇಳಲು ಬೇರೆ ಏನೂ ಇಲ್ಲ, ಯಾರೊಬ್ಬರೂ ಯಾರಿಗೂ ಹೇಳಿಲ್ಲ. ಕಾಂಗ್ರೆಸ್ ಎಂದಿಗೂ ಹೀಗೆ ಮಾಡಿಲ್ಲ' ಎಂದು ಖರ್ಗೆ ಇಲ್ಲಿ ಎಕ್ಸ್ ಜಾಲತಾಣದ ಮೂಲಕ ತಿಳಿಸಿದರು. 'ಇಂತಹ ಹೇಳಿಕೆಗಳು ಪ್ರಧಾನಿ ಕಚೇರಿಗೆ ತರವಲ್ಲ, ಪ್ರಧಾನಿಯವರು ಇಂತಹ ಮಾತುಗಳನ್ನು ಹೇಳುವುದು ನಗೆಪಾಟಲಿಗೆ ಈಡಾಗುವಂತಹದ್ದಾಗಿದೆ. ಇದು ಅವರ ಮಟ್ಟವನ್ನು ತೋರಿಸುತ್ತದೆ. ಪ್ರಧಾನಿಯೊಬ್ಬರು ಯಾವ ಮಟ್ಟದಲ್ಲಿ ಮಾತನಾಡಬೇಕು ಎಂಬುದನ್ನು ಬದಿಗಿಟ್ಟು ಅವರು ಬಿಹಾರದಲ್ಲಿ ಚುನಾವಣಾ ಭಾಷಣ ಮಾಡುತ್ತಿದ್ದಾರೆ' ಎಂದು ಹೇಳಿದರು.

ಡ್ರೋಣ್‌ನಲ್ಲಿ ಕಳ್ಳಸಾಗಣೆ ಹೆರಾಯಿನ್ ವಶಕ್ಕೆ

ಗಂಗಾನಗರ್: ಭಾರತ-ಪಾಕಿಸ್ತಾನ ಗಡಿ ಬಳಿ ಡ್ರೋಣ್‌ಗಳ ಮೂಲಕ ಹೆರಾಯಿನ್ ಕಳ್ಳಸಾಗಣೆ ಮಾಡುತ್ತಿದ್ದ ದುಷ್ಕರ್ಮಿಗಳ ಪ್ರಯತ್ನವನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಅಧಿಕಾರಿಗಳು ವಿಫಲಗೊಳಿಸಿದ್ದಾರೆ. ಘಟನೆ ವೇಳೆ 2.5 ಕೋಟಿ ಮೊತ್ತದ 500 ಗ್ರಾಂ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ತಡರಾತ್ರಿ ಡ್ರೋಣ್‌ಗಳ ಶಬ್ದ ಕೇಳಿಬಂದಾಗ ಎಚ್ಚೆತ್ತುಕೊಂಡ 118ನೇ ಬೆಟಾಲಿಯನ್‌ನ ಬಿಎಸ್‌ಎಫ್ ಸಿಬ್ಬಂದಿ ತಕ್ಷಣ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದರು. ಬಳಿಕ ಬಿಎಸ್‌ಎಫ್ ಮತ್ತು ಪೊಲೀಸರು ಹತ್ತಿರದ ಹೊಲಗಳಲ್ಲಿ ಜಂಟಿ ಶೋಧ ಕಾರ್ಯಾಚರಣೆಯನ್ನು ನಡೆಸಿದರು. ಬಿಎಸ್‌ಎಫ್ ಮತ್ತು ಸ್ಥಳೀಯ ಪೊಲೀಸರು ಹತ್ತಿರದ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆಯನ್ನು ತೀವ್ರಗೊಳಿಸಿ, ಹಲವಾರು ಗ್ರಾಮಸ್ಥರನ್ನು ವಿಚಾರಣೆ ನಡೆಸಿದರು. ಈ ವೇಳೆ ಗ್ರಾಮವೊಂದರ ಬಳಿ ತೆರೆದ ಮೈದಾನದಲ್ಲಿ ಹಳದಿ ಪ್ಯಾಕೆಟ್ ಪತ್ತೆಯಾಗಿದೆ. ಈ ಪ್ಯಾಕೆಟ್‌ನಲ್ಲಿ ಸುಮಾರು 500 ಗ್ರಾಂ ಹೆರಾಯಿನ್ ಇತ್ತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈ ಕಳ್ಳಸಾಗಣೆ ವಸ್ತುಗಳ ಮೌಲ್ಯ 2.5 ಕೋಟಿ ರು. ಎಂದು ಅಂದಾಜಿಸಲಾಗಿದೆ.

ನಕಲಿ ವಿಜ್ಞಾನಿ ಬಂಧನ

ಮುಂಬೈ: ಬಾಬಾ ಪರಮಾಣು ಸಂಶೋಧನಾ ಕೇಂದ್ರದ ವಿಜ್ಞಾನಿ ಎಂದು ಹೇಳಿಕೊಂಡು ಸೂಕ್ಷ್ಮ ಪರಮಾಣು ದತ್ತಾಂಶ ವಿನಿಮಯಕ್ಕಾಗಿ ಕೋಟ್ಯಂತರ ವಿದೇಶಿ ಹಣವನ್ನು ಪಡೆದಿದ್ದಕ್ಕಾಗಿ 60 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ವಿಜ್ಞಾನಿ ಎಂದು ಸುಳ್ಳು ಹೇಳಿಕೊಂಡು ದೇಶಾದ್ಯಂತ ಪ್ರಯಾಣಿಸಿದ್ದಕ್ಕಾಗಿ ಅಖ್ತರ್ ಹುಸೇನಿ ಅವರನ್ನು ಕಳೆದ ತಿಂಗಳು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಜಾರ್ಖಂಡ್‌ನ ಜಮ್ಶೆಡ್‌ಪುರದ ನಿವಾಸಿ ಹುಸೇನಿ ಅವರಿಂದ 10ಕ್ಕೂ ಹೆಚ್ಚು ನಕ್ಷೆಗಳು ಮತ್ತು ಪರಮಾಣು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ಡೇಟಾವನ್ನು ಸಹ ವಶಪಡಿಸಿಕೊಳ್ಳಲಾಗಿದೆ. ಹಲವಾರು ನಕಲಿ ಪಾಸ್‌ಪೋರ್ಟ್‌ಗಳು, ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳು ಮತ್ತು ನಕಲಿ ಐ.ಡಿಯನ್ನೂ ಸಹ ವಶಪಡಿಸಿಕೊಳ್ಳಲಾಗಿದೆ. ಒಂದು ಐಡಿ ಈ ವ್ಯಕ್ತಿಯನ್ನು ಅಲಿ ರಜಾ ಹುಸೇನ್ ಎಂದು ಗುರುತಿಸಿದರೆ, ಇನ್ನೊಂದು ಐಡಿಯಲ್ಲಿ ಅಲೆಕ್ಸಾಂಡರ್ ಪಾಮರ್ ಎಂದು ಹೆಸರಿಸಲಾಗಿದೆ. ಹುಸೇನಿಯ ಸಹೋದರ ಆದಿಲ್ ಅವರನ್ನು ದೆಹಲಿಯಲ್ಲಿ ಬಂಧಿಸಲಾಗಿದೆ.

ವಿಮಾನ ತುರ್ತು ಭೂಸ್ಪರ್ಶ

ಉಲಾನ್‌ಬಾತರ್: ಸ್ಯಾನ್ ಫ್ರಾನ್ಸಿಸ್ಕೋದಿಂದ ದೆಹಲಿಗೆ ಪ್ರಯಾಣಿಸುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ತಾಂತ್ರಿಕ ದೋಷ ಕಂಡು ಬಂದಿದೆ. ವಿಮಾನದ ಸಿಬ್ಬಂದಿಗೆ ತಾಂತ್ರಿಕ ದೋಷದ ಅನುಮಾನ ಬಂದ ನಂತರ ವಿಮಾನವನ್ನು ಮಂಗೋಲಿಯಾದ ಉಲಾನ್‌ಬಟಾಟರ್‌ನಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಇಳಿಸಲಾಗಿದೆ. ಈ ಕುರಿತು ಏರ್ ಇಂಡಿಯಾ ಸ್ಪಷ್ಟನೆ ನೀಡಿದ್ದು, ವಿಮಾನವು ಉಲಾನ್ ಬತಾರ್‌ನಲ್ಲಿ ಸುರಕ್ಷಿತವಾಗಿ ಇಳಿಯಿತು ಮತ್ತು ಅಗತ್ಯ ತಪಾಸಣೆಗೆ ಒಳಗಾಗುತ್ತಿದೆ ಎಂದಿದೆಯಲ್ಲದೆ, ಎಲ್ಲಾ ಪ್ರಯಾಣಿಕರನ್ನು ಸಹಕಾರ ನೀಡಲು ನಮ್ಮ ಸಿಬ್ಬಂದಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ, ಪರಿಸ್ಥಿತಿ ಸುರಕ್ಷಿತವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

{ ಅಮಿತ್ ಶಾ } ಕೇಂದ್ರ ಗೃಹ ಸಚಿವ

ಬಿಹಾರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದರೆ ರಕ್ಷಣಾ ಕಾರಿಡಾರ್ ಸ್ಥಾಪಿಸಲಿದ್ದೇವೆ. ಪ್ರತೀ ಜಿಲ್ಲೆಗಳಲ್ಲೂ ಎಂಎಸ್‌ಎಂಇ ಹಾಗೂ ಕೈಗಾರಿಕಾ ಪಾರ್ಕ್ ಸೇರಿದಂತೆ ಇತರ ಕಾರ್ಖಾನೆಗಳನ್ನೂ ತೆರೆಯಲಾಗುವುದು. ಹಾಗೆಯೇ ರಾಜ್ಯವನ್ನು ಪ್ರವಾಹ ಮುಕ್ತಗೊಳಿಸಲು ಆಯೋಗವನ್ನೂ ರಚಿಸಲಾಗುವುದು.

ಹೈದರಾಬಾದ್-ವಿಜಯಪುರ ಹೆದ್ದಾರಿಯಲ್ಲಿ ನಡೆದ ದುರಂತ | ಬಸ್ ಪ್ರಯಾಣಿಕರ ಮೇಲೆ ಜಲ್ಲಿಕಲ್ಲು ಬಿದ್ದ ರಭಸಕ್ಕೆ ಹೆಚ್ಚು ಜೀವಹಾನಿ

ತೆಲಂಗಾಣದಲ್ಲಿ ಭೀಕರ ಅಪಘಾತ: 24 ಸಾವು

ಹೈದರಾಬಾದ್: ಇಲ್ಲಿನ ರಂಗಾರೆಡ್ಡಿ ಜಿಲ್ಲೆಯ ಚೆವೆಲ್ಲಾ ಬಳಿ ಸೋಮವಾರ ಬೆಳಗ್ಗೆ ಬಸ್ ಹಾಗೂ ಟ್ರಕ್ ಲಾರಿ ನಡುವೆ ಭೀಕರ ಅಪಘಾತ ಸಂಭವಿಸಿದ್ದು, ಕನಿಷ್ಠ 24 ಮಂದಿ ಸಾವಿಗೀಡಾಗಿ 20 ಮಂದಿ ಗಾಯಗೊಂಡಿದ್ದಾರೆ.

ಮಿರ್ಜಗುಡದ ಹೈದರಾಬಾದ್-ವಿಜಯಪುರ ಹೆದ್ದಾರಿಯಲ್ಲಿ ಈ ಭೀಕರ ದುರಂತ ನಡೆದಿದ್ದು, ಜಲ್ಲಿಕಲ್ಲು ತುಂಬಿದ್ದ ಟ್ರಕ್‌ವೊಂದು ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ತೆಲಂಗಾಣ ರಾಜ್ಯ ಸಾರಿಗೆ ನಿಗಮ (ಆರ್‌ಟಿಸಿ) ಬಸ್‌ಗೆ ಡಿಕ್ಕಿ ಹೊಡೆದಿದೆ. ಟ್ರಕ್ ಅನ್ನು ಭಾರೀ ವೇಗದಲ್ಲಿ ಚಾಲನೆ ಮಾಡಿರುವುದೇ ಈ ಅಪಘಾತಕ್ಕೆ ಕಾರಣ ಎಂದು ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ.

ಅಪಘಾತ ನಡೆದ ಸ್ಥಳದ ಬಳಿ ಅಪಾಯಕಾರಿ ತಿರುವು ಇದ್ದು, ಇದೇ ಪ್ರದೇಶದಲ್ಲಿ ಅತೀ ವೇಗದಲ್ಲಿ ಬಂದ ಲಾರಿಯು ಬಸ್‌ಗೆ ಡಿಕ್ಕಿ ಹೊಡೆದಿದೆ. ಆ ವೇಳೆ ಅದರಲ್ಲಿದ್ದ ಜಲ್ಲಿಕಲ್ಲು ಬಸ್ ಒಳಗಡೆ ಇದ್ದ ಪ್ರಯಾಣಿಕರ ಮೇಲೆ ಸುರಿದ ಕಾರಣ ಹೆಚ್ಚಿನ ಜೀವಹಾನಿಗೆ ಕಾರಣವಾಗಿದೆ. 10ಕ್ಕೂ ಹೆಚ್ಚು ಮಂದಿ ಜಲ್ಲಿಕಲ್ಲುಗಳ ಅಡಿಯಲ್ಲಿ ಸಿಲುಕಿ ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಅಪಘಾತದಲ್ಲಿ ಬಸ್ ಪ್ರಯಾಣಿಕರು, ಬಸ್ ಡ್ರೈವರ್ ಮತ್ತು ಟಿಪ್ಪರ್ ಚಾಲಕ ಸಾವನ್ನಪ್ಪಿದ್ದಾರೆ. ಒಂದು ವರ್ಷದ ಮಗು ಸೇರಿದಂತೆ ಮಹಿಳೆಯರು ಮತ್ತು ಪುರುಷರು ಪ್ರಾಣ ಕಳೆದುಕೊಂಡಿದ್ದಾರೆ. 20 ಜನರು ಗಾಯಗೊಂಡಿದ್ದು, ಐವರ ಸ್ಥಿತಿ ಗಂಭೀರವಾಗಿದೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಳ ಆಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಅಪಘಾತದ ಬಳಿಕ ಚೆವೆಲ್ಲಾ-ವಿಕಾರಾಬಾದ್ ಮಾರ್ಗದಲ್ಲಿ ಸಂಚಾರ ದಟ್ಟಣೆ ಸಂಭವಿಸಿದ ಕಾರಣ ಇತರ ವಾಹನ ಸವಾರರು ಪರದಾಡಿದ ಘಟನೆ ನಡೆದಿದೆ.

ಘಟನೆಯಲ್ಲಿ ಗಾಯಗೊಂಡವರನ್ನು ಚೆವೆಲ್ಲಾ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಘಟನಾ ಸ್ಥಳದಲ್ಲಿ ಸಿಲುಕಿದ್ದ ಬಸ್ ಹಾಗೂ ಟ್ರಕ್ ಅನ್ನು ಜೆಸಿಬಿ ಮೂಲಕ ಎತ್ತಲಾಗಿದೆ. ಘಟನೆ ವೇಳೆ ಬಸ್‌ನಲ್ಲಿ ಸುಮಾರು 70 ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದರು ಎನ್ನಲಾಗುತ್ತಿದೆ.

ಸಿ.ಎಂ ರೇವಂತ್ ರೆಡ್ಡಿ ಅವರು ತಕ್ಷಣವೇ ಅಪಘಾತದ ಸ್ಥಳಕ್ಕೆ ಹೋಗಲು ಅಧಿಕಾರಿಗಳಿಗೆ ಆದೇಶಿಸಿದ್ದಾರೆ. ಅಗತ್ಯ ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ. ಬಸ್ ಅಪಘಾತದಲ್ಲಿ ಗಾಯಗೊಂಡ ಎಲ್ಲರನ್ನೂ ತಕ್ಷಣವೇ ಹೈದರಾಬಾದ್‌ಗೆ ಸ್ಥಳಾಂತರಿಸಲು ಮತ್ತು ಅವರಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡುವಂತೆ ಸಿಎಸ್ ಮತ್ತು ಡಿಜಿಪಿಗೆ ಆದೇಶಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಲು ಮತ್ತು ಅದಕ್ಕಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗೂ ಸೂಚಿಸಿದ್ದಾರೆ.

ಬಸ್-ಟ್ರಕ್ ಲಾರಿ ಅಪಘಾತದ ದೃಶ್ಯ.

ಜೆಸಿಬಿ ಮೂಲಕ ಬಸ್‌ನೊಳಗೆ ತುಂಬಿರುವ ಜಲ್ಲಿಕಲ್ಲು ತೆರವು ಕಾರ್ಯ

- ಒಟ್ಟು 70 ಪ್ರಯಾಣಿಕರಿದ್ದ ಸರಕಾರಿ ಬಸ್
- ಭಾರೀ ವೇಗದ ಟ್ರಕ್ ಚಾಲನೆ ಅಪಘಾತಕ್ಕೆ ಕಾರಣ
- ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಳ ಆಗುವ ಸಾಧ್ಯತೆ

ಮೋದಿ ಸಂತಾಪ, ಪರಿಹಾರ ಘೋಷಣೆ

ತೆಲಂಗಾನದಲ್ಲಿ ನಡೆದ ರಸ್ತೆ ಅಪಘಾತ ಬಗ್ಗೆ ಪ್ರಧಾನಿ ಮೋದಿಯವರು ಸಂತಾಪ ಸೂಚಿಸಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಸಂತಾಪ ಪೋಸ್ಟ್ ಮಾಡಿರುವ ಅವರು, 'ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಜೀವಹಾನಿ ತೀವ್ರ ದುಃಖ ತಂದಿದೆ. ಈ ಕಷ್ಟದ ಸಮಯದಲ್ಲಿ ಸಂತ್ರಸ್ತರು ಮತ್ತು ಅವರ ಕುಟುಂಬ ಗಳಿಗೆ ತೀವ್ರ ಸಂತಾಪ ಸೂಚಿಸುತ್ತೇನೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ. ಇದೇ ವೇಳೆ ಮೃತರ ಕುಟಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ 2 ಲಕ್ಷ ರು. ಹಾಗೂ ಗಾಯಾಳುಗಳಿಗೆ 50,000 ರು. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ್ದಾರೆ.

ತೆಲಂಗಾಣ ಸಾರಿಗೆ ಸಚಿವ ಪೊನ್ನಮ್ ಪ್ರಭಾಕರ್ ಅವರು ಆಸ್ಪತ್ರೆಗೆ ತೆರಳಿ ಗಾಯಗೊಂಡವರ ಯೋಗಕ್ಷೇಮ ವಿಚಾರಿಸಿದರು.

ಜಲ್ಲಿ ರಾಶಿ ಅಡಿಯಲ್ಲೇ ಹಲವರು ಸಮಾಧಿ

ಬಸ್ ಮೇಲೆ ಜಲ್ಲಿಕಲ್ಲುಗಳು ರಭಸವಾಗಿ ಬಿದ್ದಿದ್ದರಿಂದ ಅಪಘಾತದಲ್ಲಿ ಸಾವಿನ ಸಂಖ್ಯೆ ಹೆಚ್ಚಾಗಲು ಕಾರಣ ಎನ್ನಲಾಗುತ್ತಿದೆ. ಏಕಾಏಕಿ ಬಸ್‌ನಲ್ಲಿದ್ದ ಪ್ರಯಾಣಿಕರ ಮೇಲೆ ಬಿದ್ದ ಜಲ್ಲಿಕಲ್ಲುಗಳು ಮಧ್ಯೆ ಸಿಲುಕಿಯೇ ಸುಮಾರು 10ಕ್ಕೂ ಹೆಚ್ಚು ಪ್ರಯಾಣಿಕರು ಸಾವನ್ನಪ್ಪಿದ್ದಾರೆ. ಮೂರು ಜೆಸಿಬಿಗಳ ಸಹಾಯದಿಂದ ಜಲ್ಲಿಕಲ್ಲುಗಳ ರಾಶಿಯ ಅಡಿಯಲ್ಲಿ ಸಿಲುಕಿರುವ ಪ್ರಯಾಣಿಕರನ್ನು ಹೊರ ತೆಗೆಯಲಾಯಿತು. ಅಪಘಾತ ನಡೆಯುವಾಗ ಬಸ್‌ನಲ್ಲಿ ಸುಮಾರು 70 ಪ್ರಯಾಣಿಕರಿದ್ದರು ಎಂದು ವರದಿಗಳು ತಿಳಿಸಿವೆ.

ಬೀದಿ ನಾಯಿಗಳಿಗೆ ಆಹಾರ ನೀಡುವ ವಿಚಾರ ಅರ್ಜಿದಾರರ ವಾದ ಆಲಿಸಲು ಪೀಠಕ್ಕೆ ಮನವಿ

ನ.7ರಂದು ಸುಪ್ರೀಂ ನಿರ್ದೇಶನ

ದೆಹಲಿ: ಸರಕಾರಿ ಮತ್ತು ಸಾರ್ವಜನಿಕ ವಲಯ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ನೌಕರರು ನಾಯಿಗಳಿಗೆ ಆಹಾರ ನೀಡುವ ಮತ್ತು ಪ್ರೋತ್ಸಾಹಿಸುವ ಹಾಗೂ ಬೆಂಬಲಿಸುವ ಕುರಿತಂತೆ ನವೆಂಬರ್ 7ರಂದು ನಿರ್ದೇಶನಗಳನ್ನು ನೀಡುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್ ವಿ ಅಂಜಾರಿಯಾ ಅವರನ್ನೊಳಗೊಂಡ ಮೂವರು ನ್ಯಾಯಮೂರ್ತಿಗಳ ವಿಶೇಷ ಪೀಠವು ಈ ವಿಚಾರವಾಗಿ ಸಮಗ್ರ ವಿಚಾರಣೆ ನಡೆಸುತ್ತಿದೆ.

ಈ ವಿಷಯವಾಗಿ ಸಲ್ಲಿಕೆಯಾಗಿದ್ದ ಅರ್ಜಿಗಳ ಪರ ಹಾಜರಾಗಿದ್ದ ವಕೀಲರಲ್ಲಿ ಒಬ್ಬರು ಈ ಕುರಿತು ನಿರ್ದೇಶನಗಳನ್ನು ನೀಡುವ ಮೊದಲು ಅವುಗಳ ಬಗೆಗಿನ ನಮ್ಮ ವಾದವನ್ನು ಆಲಿಸಬೇಕೆಂದು ಪೀಠದ ಬಳಿ ಮನವಿ ಮಾಡಿಕೊಂಡರು. ಸಾಂಸ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ, ನಾವು ಯಾವುದೇ ವಾದಗಳನ್ನು ಕೇಳುವುದಿಲ್ಲ ಎಂದು ನ್ಯಾಯಮೂರ್ತಿ ಮೆಹ್ತಾ ಈ ವೇಳೆ ಪ್ರತಿಕ್ರಿಯಿಸಿದರು. ಹೆಚ್ಚಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಕೋರ್ಟ್ ಎದುರು ಹಾಜರಾಗಿದ್ದನ್ನು ಪೀಠವು ಇದೇ ವೇಳೆ ತನ್ನ ಗಮನಕ್ಕೆ ತೆಗೆದುಕೊಂಡಿತು. ಕೇರಳದ ಮುಖ್ಯ ಕಾರ್ಯದರ್ಶಿ ಸಲ್ಲಿಸಿದ ವಿನಾಯಿತಿ ಅರ್ಜಿಗೆ ಪೀಠ ಸಮ್ಮತಿ ನೀಡಿತು, ಅವರ ಬದಲಿಗೆ ರಾಜ್ಯದ ಪ್ರಧಾನ ಕಾರ್ಯದರ್ಶಿಯೊಬ್ಬರು ನ್ಯಾಯಾಲಯದಲ್ಲಿ ಹಾಜರಿದ್ದರು.

20 ಸಾವು, 320ಕ್ಕೂ ಅಧಿಕ ಮಂದಿಗೆ ಗಾಯ

ಆಫ್ಘಾನ್: ಪ್ರಬಲ ಭೂಕಂಪ

ಆಫ್ಘಾನ್ ಭೂಕಂಪದ ಗಾಯಾಳುವಿನ ರಕ್ಷಣೆಗೆ ಯತ್ನ.

ಕಾಬುಲ್: ಅಫಘಾನಿಸ್ತಾನದಲ್ಲಿ ಸೋಮವಾರ ಮುಂಜಾನೆ ಪ್ರಬಲ ಭೂಕಂಪನ ಸಂಭವಿಸಿದ್ದು ಕನಿಷ್ಠ 20 ಮಂದಿ ಸಾವನ್ನಪ್ಪಿ, 320ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸೋಮವಾರ ಮುಂಜಾನೆ ಉತ್ತರ ಅಫಘಾನಿಸ್ತಾನದ ಮಜಾರ್-ಎ ಶರೀಫ್ ನಗರದ ಬಳಿ 6.3 ತೀವ್ರತೆಯ ಭೂಕಂಪ ಸಂಭವಿಸಿದ್ದು, ಹತ್ತಾರು ಕಟ್ಟಡಗಳು ನೆಲಕ್ಕುರುಳಿವೆ ಎಂದು ಪ್ರಾಂತೀಯ ಅಧಿಕಾರಿಗಳು ತಿಳಿಸಿದ್ದಾರೆ.

ರಿಕ್ಟರ್ ಮಾಪಕದಲ್ಲಿ ಭೂಕಂಪನದ ತೀವ್ರತೆಯು 6.3ರಷ್ಟು ದಾಖಲಾಗಿದೆ. ಭೂಕಂಪದ ಕೇಂದ್ರಬಿಂದು ಅಫಘಾನಿಸ್ತಾನದ ಖುಲ್ಮ್‌ನಿಂದ ಪಶ್ಚಿಮ-ನೈಋತ್ಯಕ್ಕೆ 22 ಕಿ.ಮೀ ದೂರದಲ್ಲಿದೆ ಮತ್ತು 28 ಕಿ.ಮೀ ಆಳದಲ್ಲಿದೆ ಎಂದು ಅಮೆರಿಕ ಭೂಕಂಪ ಮಾಪನ ಕೇಂದ್ರದ (ಯುಎಸ್‌ಜಿಎಸ್) ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯರಾತ್ರಿ 12.59ರ ಸುಮಾರಿಗೆ ಭೂಕಂಪ ಸಂಭವಿಸಿದ್ದು, ಗಾಯಾಳುಗಳನ್ನು ಆರೋಗ್ಯ ಕೇಂದ್ರಗಳಿಗೆ ವರ್ಗಾಯಿಸಲಾಗಿದೆ ಎಂದು ಮಜಾರ್-ಎ ಶರೀಫ್ ಬಳಿಯ ಪರ್ವತ ಉತ್ತರ ಪ್ರಾಂತ್ಯದ ಸಮಂಗನ್‌ನಲ್ಲಿರುವ ಆರೋಗ್ಯ ಇಲಾಖೆಯ ವಕ್ತಾರ ಸಮೀಮ್ ಜೋಯಂಡಾ ರಾಯಿಟರ್ಸ್‌ಗೆ ತಿಳಿಸಿದ್ದಾರೆ. ಕಳೆದ ವಾರವಷ್ಟೇ ಅಫ್ಘಾನಿಸ್ತಾನದಲ್ಲಿ 4.3 ತೀವ್ರತೆಯ ಮತ್ತೊಂದು ಭೂಕಂಪ ಸಂಭವಿ ಸಿತ್ತು. ಆಗಸ್ಟ್ 31ರಂದು ಪಾಕಿಸ್ತಾನ ಗಡಿಯ ಬಳಿ ಪೂರ್ವ ಆಫ್ಘಾನಿನಲ್ಲಿ ಸಂಭವಿಸಿದ 6.0 ತೀವ್ರತೆಯ ಭೂಕಂಪವು 2,200ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿತ್ತು.

ಜುಬೀನ್ ಗರ್ಗ್ ಸಾವಿನ ಪ್ರಕರಣ

ಡಿ.8ರೊಳಗೆ ಆರೋಪ ಪಟ್ಟಿ

ದೆಹಲಿ: ಜುಬೀನ್ ಗರ್ಗ್ ಸಾವಿನ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಡಿಸೆಂಬರ್ 8ರೊಳಗೆ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಲಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸೋಮವಾರ ಹೇಳಿದ್ದಾರೆ. ಪ್ರಸಿದ್ಧ ಗಾಯಕನದ್ದು ಅಪಘಾತವಲ್ಲ, ಕೊಲೆ ಎಂದು ಮುಖ್ಯಮಂತ್ರಿ ಪುನರುಚ್ಚರಿಸಿದ್ದಾರೆ. ಜುಬೀನ್ ಗರ್ಗ್ ಕೊಲೆ ಪ್ರಕರಣದಲ್ಲಿ ಡಿಸೆಂಬರ್ 8ರೊಳಗೆ ಆರೋಪಪಟ್ಟಿ ಸಲ್ಲಿಸುವ ಗುರಿಯನ್ನು ನಾನು ಹೊಂದಿದ್ದೇನೆ, ಅದಕ್ಕೆ ನಾವು ಸಿದ್ಧರಿದ್ದೇವೆ ಎಂದು ಅಸ್ಸಾಂ ಸಿಎಂ ಹೇಳಿದರು. ಘಟನೆ ವಿದೇಶದಲ್ಲಿ ನಡೆದಿರುವುದರಿಂದ, ಆರೋಪಪಟ್ಟಿ ಸಲ್ಲಿಸಲು ಗೃಹ ಸಚಿವಾಲಯ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳಲು ಮುಖ್ಯಮಂತ್ರಿ ಶರ್ಮಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದು ಮುಂದಿನ 3-4 ದಿನಗಳಲ್ಲಿ ಅನುಮೋದನೆ ಸಿಗಬಹುದು. ವಿದೇಶದಲ್ಲಿ ಒಂದು ಘಟನೆ ನಡೆದರೆ, ಆರೋಪ ಪಟ್ಟಿ ಸಲ್ಲಿಸುವ ಮೊದಲು ಗೃಹ ಸಚಿವಾಲಯದಿಂದ ಅನುಮೋದನೆ ಪಡೆಯುವುದು ಅವಶ್ಯಕ. ಮುಂದಿನ 3-4 ದಿನಗಳಲ್ಲಿ ಎಸ್‌ಐಟಿ ಗೃಹ ಸಚಿವಾಲಯಕ್ಕೆ ಪತ್ರ ಬರೆಯಲಿದೆ ಎಂದರು.

ಭಾರತೀಯನ ಅಪಹರಣ

ಡಾರ್ಫರ್: ಕಳೆದ ಕೆಲ ದಿನಗಳಿಂದ ಸುಡಾನ್‌ನಲ್ಲಿ ಹಿಂಸಾಚಾರ ಜೋರಾಗಿದ್ದು, 13 ದಶಲಕ್ಷಕ್ಕೂ ಹೆಚ್ಚು ಜನರು ಅಲ್ಲಿಂದ ಸ್ಥಳಾಂತರಗೊಂಡಿದ್ದಾರೆ. ಇದೀಗ ಆಘಾತಕಾರಿ ವಿಷಯವೊಂದು ಹೊರ ಬಿದ್ದಿದ್ದು, ಆರ್‌ಎಸ್‌ಎಫ್ ಬಂಡುಕೋರರು ಭಾರತೀಯ ಮೂಲದ ವ್ಯಕ್ತಿಯನ್ನು ಅಪಹರಿಸಿದ್ದಾರೆ ಎಂದು ತಿಳಿದು ಬಂದಿದೆ. ಸದ್ಯ ಅಪಹರಣಕ್ಕೊಳಗಾದ ವ್ಯಕ್ತಿಯ ವಿಡಿಯೊವಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಒಡಿಶಾದ ಜಗತ್ಸಿಂಗ್‌ಪುರ ಜಿಲ್ಲೆಯ ಆದರ್ಶ್ ಬೆಹೆರಾ ಎಂದು ಗುರುತಿಸಲಾದ ಭಾರತೀಯ ವ್ಯಕ್ತಿಯೊಬ್ಬರು ಇಬ್ಬರು ಆರ್‌ಎಸ್‌ಎಫ್ ಸೈನಿಕರ ನಡುವೆ ಕುಳಿತಿರುವುದನ್ನು ತೋರಿಸಲಾಗಿದೆ.

ಕೊಯಮತ್ತೂರು: ಕಾಲೇಜು ವಿದ್ಯಾರ್ಥಿನಿ ಅಪಹರಿಸಿ ಲೈಂಗಿಕ ದೌರ್ಜನ್ಯ

ವಿದ್ಯಾರ್ಥಿನಿಯ ಅತ್ಯಾಚಾರ

ಕೊಯಮತ್ತೂರು: ಇಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಭಾನುವಾರ ತಡರಾತ್ರಿ ಮೂವರು ವ್ಯಕ್ತಿಗಳು ಕಾಲೇಜು ವಿದ್ಯಾರ್ಥಿನಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದು, ಘಟನೆಯು ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.

ಪೊಲೀಸರ ಪ್ರಕಾರ, ಮೂಲತಃ ಮಧುರೈನ ಪ್ರಸ್ತುತ ಕೊಯಮತ್ತೂರಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯನ್ನು ವಿಮಾನ ನಿಲ್ದಾಣದ ಬಳಿಯ ಬೃಂದಾವನ ನಗರದಲ್ಲಿ ರಾತ್ರಿ 11 ಗಂಟೆ ಸುಮಾರಿಗೆ ಕಾರಿನಲ್ಲಿ ಕುಳಿತಿದ್ದಾಗ ಅಪಹರಿಸಲಾಗಿದೆ. ಮೂವರು ದುಷ್ಕರ್ಮಿಗಳು ಯುವತಿ ಕುಳಿತಿದ್ದ ಕಾರಿನ ಬಳಿ ಬಂದು, ಆಕೆಯ ಸ್ನೇಹಿತನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ, ಅಪಹರಿಸಿದ್ದಾರೆ. ನಂತರ ಹಲ್ಲೆಕೋರರು ಸಂತ್ರಸ್ತೆಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಅಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಪರಾರಿಯಾಗಿದ್ದಾರೆ. ಗಾಯಗೊಂಡು, ಪ್ರಜ್ಞೆ ತಪ್ಪಿದ್ದ ಆಕೆಯ ಸ್ನೇಹಿತ ಸ್ವಲ್ಪ ಸಮಯದ ನಂತರ ಪ್ರಜ್ಞೆ ಮರಳಿದ ಬಳಿಕ ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಅನಿಲ್ ಅಂಬಾನಿಗೆ ಸೇರಿದ 3 ಸಾವಿರ ಕೋಟಿ ರು. ಮೌಲ್ಯದ ಆಸ್ತಿ ಇಡಿ ವಶ

ದೆಹಲಿ: ರಿಲಯನ್ಸ್ ಗ್ರೂಪ್ ಮುಖ್ಯಸ್ಥ ಅನಿಲ್ ಅಂಬಾನಿ ಒಡೆತನದ ಸಮೂಹ ಸಂಸ್ಥೆಗಳ ವಿರುದ್ಧ ಕೇಳಿ ಬಂದಿದ್ದ ಅಕ್ರಮ ಹಣ ವರ್ಗಾವಣೆ ಆರೋಪದ ಕುರಿತು ನಡೆಯುತ್ತಿರುವ ತನಿಖೆಯ ಭಾಗವಾಗಿ ಸುಮಾರು 3 ಸಾವಿರ ಕೋಟಿ ರು.ಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ. ಅನಿಲ್ ಅಂಬಾನಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಇ.ಡಿ ನಾಲ್ಕು ತಾತ್ಕಾಲಿಕ ಆದೇಶಗಳನ್ನು ಹೊರಡಿಸಿದೆ ಎಂದು ಹೇಳಲಾಗಿದೆ. ಈ ಆಸ್ತಿಗಳ ಪೈಕಿ ಮುಂಬೈನ ಪಾಲಿ ಹಿಲ್‌ನಲ್ಲಿರುವ ಅನಿಲ್ ಅಂಬಾನಿಯ ನಿವಾಸ ಹಾಗೂ ಅವರ ಒಡೆತನದ ಸಮೂಹ ಸಂಸ್ಥೆಗಳಿಗೆ ಸಂಬಂಧಿಸಿದ ಇನ್ನಿತರ ವಸತಿ ಹಾಗೂ ವಾಣಿಜ್ಯ ಆಸ್ತಿಗಳು ಸೇರಿವೆ ಎನ್ನಲಾಗಿದೆ. ದೆಹಲಿಯ ಮಹಾರಾಜ ರಂಜಿತ್ ಸಿಂಗ್ ಮಾರ್ಗದಲ್ಲಿರುವ ರಿಲಯನ್ಸ್ ಸೆಂಟರ್‌ಗೆ ಸಂಬಂಧಿಸಿದ ಜಮೀನು, ದಿಲ್ಲಿ, ನೋಯ್ಡಾ, ಘಾಝಿಯಾಬಾದ್, ಮುಂಬೈ, ಪುಣೆ, ಥಾಣೆ, ಹೈದರಾಬಾದ್, ಚೆನ್ನೈ ಹಾಗೂ ಪೂರ್ವ ಗೋದಾವರಿ ನಗರಗಳಲ್ಲಿರುವ ಇನ್ನಿತರ ಆಸ್ತಿಪಾಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಕಾಂಗ್ರೆಸ್‌ಗೆ ಕುಟುಂಬ ರಾಜಕೀಯ ಜನ್ಮಸಿದ್ಧ ಹಕ್ಕು

ದೆಹಲಿ: ನೆಹರು-ಗಾಂಧಿ ರಾಜವಂಶದ ಪ್ರಭಾವವು ರಾಜಕೀಯದ ಜನ್ಮಸಿದ್ಧ ಹಕ್ಕು ಎಂಬ ಕಲ್ಪನೆಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಹೇಳಿದ್ದಾರೆ.

ದಶಕಗಳಿಂದ ಒಂದು ಕುಟುಂಬವು ಭಾರತೀಯ ರಾಜಕೀಯದ ಮೇಲೆ ಪ್ರಾಬಲ್ಯ ಸಾಧಿಸಿದೆ. ಸ್ವತಂತ್ರ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು, ಪ್ರಧಾನಿಗಳಾದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ, ಪ್ರಸ್ತುತ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಸಂಸದ ಪ್ರಿಯಾಂಕಾ ಗಾಂಧಿ ವಾದ್ರಾ, ಸೇರಿದಂತೆ ನೆಹರು-ಗಾಂಧಿ ರಾಜವಂಶದ ಪ್ರಭಾವವು ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದೊಂದಿಗೆ ಸಂಬಂಧ ಹೊಂದಿದೆ. ಆದರೆ ರಾಜಕೀಯ ನಾಯಕತ್ವವು ಜನ್ಮಸಿದ್ಧ ಹಕ್ಕು ಎಂಬ ಕಲ್ಪನೆಯನ್ನು ಅದು ಗಟ್ಟಿಗೊಳಿಸಿದೆ. ಈ ಕಲ್ಪನೆಯು ಪ್ರತಿಯೊಂದು ಪಕ್ಷದಲ್ಲಿ, ಪ್ರತಿಯೊಂದು ಪ್ರದೇಶದಲ್ಲಿ ಮತ್ತು ಪ್ರತಿಯೊಂದು ಹಂತದಲ್ಲೂ ಭಾರತೀಯ ರಾಜಕೀಯದಲ್ಲಿ ಬೇರೂರಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ತಿಳಿಸಿದ್ದಾರೆ.

ಕುಟುಂಬ ರಾಜಕೀಯ ಕಾಂಗ್ರೆಸ್‌ಗೆ ಮಾತ್ರ ಸೀಮಿತವಾಗಿಲ್ಲ ಎಂದ ತರೂರ್, ಮಹಾರಾಷ್ಟ್ರದಲ್ಲಿ, ಶಿವಸೇನಾ ಸಂಸ್ಥಾಪಕ ಬಾಳ್ ಠಾಕ್ರೆ, ನಾಯಕತ್ವವನ್ನು ತಮ್ಮ ಮಗ ಉದ್ಧವ್‌ಗೆ ಹಸ್ತಾಂತರಿಸಿದರು, ಅವರು ಈಗ ಆದಿತ್ಯಗೆ ಹಸ್ತಾಂತರಿಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ನಂತರ ಅವರ ಮಗ ಅಖಿಲೇಶ್ ಯಾದವ್, ಈಗ ಸಂಸದ ಮತ್ತು ಪಕ್ಷದ ಅಧ್ಯಕ್ಷರಾಗಿದ್ದಾರೆ. ಅದೇ ರೀತಿ ಬಿಹಾರದ ಲೋಕ ಜನಶಕ್ತಿ ಪಕ್ಷದ ರಾಮ್ ವಿಲಾಸ್ ಪಾಸ್ವಾನ್ ಅವರ ನಂತರ ಅವರ ಮಗ ಚಿರಾಗ್ ಪಾಸ್ವಾನ್ ಅಧಿಕಾರಕ್ಕೆ ಬಂದರು.

ದೇಶದ ಹೃದಯಭಾಗವನ್ನು ಮೀರಿ, ಕುಟುಂಬ ರಾಜಕೀಯ ಮುಂದುವರೆದಿದೆ. ಜಮ್ಮು ಮತ್ತು ಕಾಶ್ಮೀರವನ್ನು ಅಬ್ದುಲ್ಲಾ ಅವರ ಮೂರು ತಲೆಮಾರುಗಳು ಮುನ್ನಡೆಸುತ್ತಿವೆ. ಮುಫ್ತಿ ಕುಟುಂಬವು ವಿರೋಧ ಪಕ್ಷದಲ್ಲಿ ಪ್ರಾಬಲ್ಯ ಹೊಂದಿದೆ. ಪಂಜಾಬ್‌ನಲ್ಲಿ, ಶಿರೋಮಣಿ ಅಕಾಲಿ ದಳವು ಪ್ರಕಾಶ್ ಸಿಂಗ್ ಬಾದಲ್ ಅವರಿಂದ ಅವರ ಮಗ ಸುಖ್‌ಬೀರ್‌ಗೆ ಹಸ್ತಾಂತರವಾಯಿತು ಎಂದರು.

ವಿಜ್ಞಾನ, ತಂತ್ರಜ್ಞಾನ ನಾವೀನ್ಯತೆ ಸಮಾವೇಶ | ಖಾಸಗಿ ವಲಯದ ಸಂಶೋಧನೆಗೆ 1 ಲಕ್ಷ ಕೋಟಿ ರು. ನಿಧಿ

ನಾವೀನ್ಯತೆ ಪ್ರೋತ್ಸಾಹಕ್ಕೆ ಮೋದಿ ಚಾಲನೆ

ದೆಹಲಿ: ಭಾರತ್ ಮಂಟಪನಲ್ಲಿ ಉದಯೋನ್ಮುಖ ವಿಜ್ಞಾನ ಮತ್ತು ತಂತ್ರಜ್ಞಾನ ನಾವೀನ್ಯತೆ ಸಮಾವೇಶವನ್ನು ಪ್ರಧಾನಿ ಮೋದಿ ಸೋಮವಾರ ಉದ್ಘಾಟಿಸಿದರು. ಈ ವೇಳೆ ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಲಾದ ಸಂಶೋಧನೆ ಅಭಿವೃದ್ಧಿ ಮತ್ತು ನಾವೀನ್ಯತೆ (ಆರ್‌ಡಿಐ) ಯೋಜನೆಗೆ 1 ಲಕ್ಷ ಕೋಟಿ ರು. ನಿಧಿಗೆ ಚಾಲನೆ ನೀಡಿದರು.

ಮಧ್ಯಂತರ ಬಜೆಟ್ ವೇಳೆ ಆರ್‌ಡಿಐಗೆ ಹಣಕಾಸು ಮೀಸಲಿಟ್ಟು ಮಾತನಾಡಿದ್ದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಈ ನಿಧಿಯು ಖಾಸಗಿ ವಲಯವು ಸಂಶೋಧನೆ ಮತ್ತು ನಾವೀನ್ಯತೆಯನ್ನು ಗಮನಾರ್ಹವಾಗಿ ಹೆಚ್ಚಿಸಲು ಪ್ರೋತ್ಸಾಹಿಸುತ್ತದೆ ಎಂದಿದ್ದರು.

ಸೋಮವಾರ ಬೆಳಿಗ್ಗೆ ಈ ಸಮಾವೇಶದ ಉದ್ಘಾಟನೆಯಾಗಿದ್ದು, ಬುಧವಾರದ ವರೆಗೂ ನಡೆಯಲಿದೆ. ನೊಬೆಲ್ ಪ್ರಶಸ್ತಿ ವಿಜೇತರು, ಖ್ಯಾತ ವಿಜ್ಞಾನಿಗಳು, ನಾವೀನ್ಯಕಾರರು ಮತ್ತು ನೀತಿ ನಿರೂಪಕರು ಸೇರಿದಂತೆ ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು, ಕೈಗಾರಿಕೆಯ ಉದ್ಯಮಿಗಳು ಈ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ.

ಕಳೆದ 10ರಿಂದ 11 ವರ್ಷಗಳಲ್ಲಿ ಈ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಭಾರತ ಇನ್ಮುಂದೆ ಕೇವಲ ತಂತ್ರಜ್ಞಾನದ ಗ್ರಾಹಕನಲ್ಲ, ತಂತ್ರಜ್ಞಾನದ ಮೂಲಕ ಪರಿವರ್ತನೆಯ ಪ್ರವರ್ತಕವಾಗಲಿದೆ. ಭಾರತದಲ್ಲಿ ಆಧುನಿಕ ನಾವೀನ್ಯತೆ ಪರಿಸರ ವ್ಯವಸ್ಥೆಯು ಅಭಿವೃದ್ಧಿ ಹೊಂದಲು ನಮ್ಮ ಸರ್ಕಾರವು ಸಂಶೋಧನೆಯನ್ನು ಸುಲಭಗೊಳಿಸುವತ್ತ ಗಮನ ಹರಿಸುತ್ತಿದೆ ಎಂದು ಮೋದಿ ಈ ಸಂದರ್ಭದಲ್ಲಿ ಹೇಳಿದರು.

ಈ ದೃಷ್ಟಿಕೋನವನ್ನು ಸಾಧಿಸಲು, ಕೇಂದ್ರ ಸರಕಾರವು ಹಣಕಾಸು ನಿಯಮಗಳು ಮತ್ತು ಖರೀದಿ ನೀತಿಗಳಲ್ಲಿ ಗಮನಾರ್ಹ ಸುಧಾರಣೆಗಳನ್ನು ಪರಿಚಯಿಸಿದೆ. ಹೆಚ್ಚುವರಿಯಾಗಿ, ಪ್ರಯೋಗಾಲಯದಿಂದ ಮಾರುಕಟ್ಟೆಗೆ ಮೂಲಮಾದರಿಗಳ ಪರಿವರ್ತನೆಯನ್ನು ವೇಗಗೊಳಿಸಲು ನಾವು ಪ್ರೋತ್ಸಾಹಕಗಳು ಮತ್ತು ಪೂರೈಕೆ ಸರಪಳಿ ಚೌಕಟ್ಟುಗಳನ್ನು ಸುವ್ಯವಸ್ಥಿತಗೊಳಿಸಿದ್ದೇವೆ ಎಂದೂ ಪ್ರಧಾನಿ ವಿವರಿಸಿದರು.



ಪ್ರಧಾನಿ ಮೋದಿ ಅವರು ಕೇಂದ್ರ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಜತೆ ಆರ್‌ಡಿಐ ಯೋಜನೆಗೆ ಚಾಲನೆ ನೀಡಿದರು.

ಪ್ರಮುಖ ಉದ್ದೇಶಗಳು

ಆರ್‌ಡಿಐ ಯೋಜನೆಯ ಮುಖ್ಯ ಗುರಿಯು ಖಾಸಗಿ ವಲಯವನ್ನು ಪ್ರಮುಖ ಕ್ಷೇತ್ರಗಳಲ್ಲಿ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆಯನ್ನು ಗಮನಾರ್ಹವಾಗಿ ಹೆಚ್ಚಿಸಲು ಪ್ರೋತ್ಸಾಹಿ ಸುವುದಾಗಿದೆ. ಹೆಚ್ಚಿನ ಅಪಾಯದ, ಹೆಚ್ಚಿನ ಪರಿಣಾಮದ ಸಂಶೋಧನಾ ಯೋಜನೆಗಳಿಗೆ ಇರುವ ಹಣಕಾಸು ಕೊರತೆ ನಿವಾರಣೆ, ತಾಂತ್ರಿಕ ಸ್ವಾವಲಂಬನೆ ಯನ್ನು ಉತ್ತೇಜಿಸುವುದು ಹಾಗೂ ಪ್ರಮುಖ ತಂತ್ರಜ್ಞಾನಗಳಲ್ಲಿ ಭಾರತದ ಜಾಗತಿಕ ಸ್ಪರ್ಧಾತ್ಮಕತೆಯನ್ನು ಬಲಪಡಿಸುವುದು ಯೋಜನೆಯ ಪ್ರಮುಖ ಉದ್ದೇಶಗಳಾಗಿವೆ.

ನ್ಯೂಕ್ಲಿಯರ್ ಎಚ್ಚರಿಕೆ ನೀಡಿದ ಟ್ರಂಪ್

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 1992ರಲ್ಲಿ ಸ್ಥಗಿತಗೊಳಿಸಿದ್ದ ಪರಮಾಣು ಶಸ್ತ್ರಾಸ್ತ್ರ ಪುನರ್ ಆರಂಭಿಸುವುದಾಗಿ ಘೋಷಣೆ ಮಾಡಿದ ಕೆಲವೇ ದಿನಗಳ ಬಳಿಕ ಜಗತ್ತನ್ನು 150 ಬಾರಿ ಸ್ಫೋಟಿಸಲು ನಮ್ಮಲ್ಲಿ ಸಾಕಷ್ಟು ಪರಮಾಣು ಶಸ್ತ್ರಾಸ್ತ್ರಗಳಿವೆ ಎಂದು ಸ್ಫೋಟಕ ಹೇಳಿಕೆಯನ್ನು ನೀಡಿದ್ದಾರೆ. ಅಮೆರಿಕದ ಗುಪ್ತಚರ ಸಂಸ್ಥೆಗಳು ಚೀನಿಯರು ಅಮೆರಿಕದ ವಿದ್ಯುತ್ ಗ್ರಿಡ್ ಮತ್ತು ನೀರಿನ ವ್ಯವಸ್ಥೆಗಳ ಕೆಲವು ಭಾಗಗಳಿಗೆ ನುಸುಳಿದ್ದಾರೆ ಎಂದು ಆರೋಪಿಸುತ್ತಿರುವ ಮಧ್ಯೆ ಈ ಹೇಳಿಕೆ ಬಂದಿವೆ. ಬೀಜಿಂಗ್ ಅಮೆರಿಕದ ಬೌದ್ಧಿಕ ಆಸ್ತಿ ಮತ್ತು ಅಮೆರಿಕನ್ನರ ವೈಯಕ್ತಿಕ ಡೇಟಾವನ್ನು ಕದ್ದ ಆರೋಪವನ್ನೂ ಹೊಂದಿದೆ.

ಚೀನಾ ಬಗ್ಗೆ ಮಾತನಾಡಿದ ಅವರು ಇದು ತುಂಬಾ ಸ್ಪರ್ಧಾತ್ಮಕ ಜಗತ್ತು, ವಿಶೇಷವಾಗಿ ಚೀನಾ ಮತ್ತು ಯುಎಸ್ ವಿಷಯಕ್ಕೆ ಬಂದಾಗ ನಾವು ಯಾವಾಗಲೂ ಅವರನ್ನು ಗಮನಿಸುತ್ತಿರುತ್ತೇವೆ. ಪರೀಕ್ಷೆಗಳು ಯಾವುದೇ ಪರಮಾಣು ಸ್ಫೋಟಗಳನ್ನು ಒಳಗೊಂಡಿರುವುದಿಲ್ಲ, ಆದರೆ ಕೇವಲ ಸಿಸ್ಟಮ್-ಲೆವೆಲ್ ಪರೀಕ್ಷೆಯಾಗಿರುತ್ತವೆ ಎಂದು ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಸ್ಪಷ್ಟಪಡಿಸಿದ್ದಾರೆ. ಆದರೂ ಪದೇ ಪದೇ ಅಣ್ವಸ್ತ್ರದ ಕುರಿತು ಮಾತನಾಡುತ್ತಿರುವುದು ಅನುಮಾನಕ್ಕೆ ಎಡೆಮಾಡಿ ಕೊಟ್ಟಿದೆ. ಪರಮಾಣು ಕ್ರಿಯೆಯ ಸಂದರ್ಭದಲ್ಲಿ ಅಗತ್ಯವಿರುವ ಸರಿಯಾದ ಜ್ಯಾಮಿತಿ ಮತ್ತು ಸೆಟಪ್ ಅನ್ನು ಒದಗಿಸಲು ಪರಮಾಣು ಶಸ್ತ್ರಾಸ್ತ್ರಗಳ ಇತರ ಘಟಕಗಳನ್ನು ಪರಿಶೀಲಿಸುವುದು ಈ ಪರೀಕ್ಷೆಗಳ ಉದ್ದೇಶವಾಗಿದೆ ಎಂದು ರಕ್ಷಣಾ ಇಲಾಖೆ ತಿಳಿಸಿದೆ. ಪರೀಕ್ಷೆಗೆ ಜವಾಬ್ದಾರರಾಗಿರುವ ಏಜೆನ್ಸಿಯ ಇಂಧನ ಕಾರ್ಯದರ್ಶಿ, ಯೋಜಿತ ಪರೀಕ್ಷೆಯು ಪರಮಾಣು ಶಸ್ತ್ರಾಸ್ತ್ರದ ಎಲ್ಲಾ ಇತರ ಭಾಗಗಳು ಸೂಕ್ತವಾದ ಜ್ಯಾಮಿತಿಯನ್ನು ತಲುಪಿಸುತ್ತವೆ ಮತ್ತು ಅವು ಪರಮಾಣು ಸ್ಫೋಟವನ್ನು ಸ್ಥಾಪಿಸುತ್ತವೆ ಎಂದು ಖಚಿತಪಡಿಸಿಕೊಳ್ಳಲು ಒಳಗೊಂಡಿರುತ್ತದೆ ಎಂದೂ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಿಎ ಪರೀಕ್ಷೆಯಲ್ಲಿ ಭಾರ್ಗವಿ ಉತ್ತೀರ್ಣ

ಬೆಂಗಳೂರು: ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ನಡೆಸಿದ ಚಾರ್ಟರ್ಡ್ ಅಕೌಂಟೆನ್ಸಿ (ಸಿಎ) 2025 ರ ಪರೀಕ್ಷೆಯಲ್ಲಿ ಕೆ. ಭಾರ್ಗವಿ ಉತ್ತೀರ್ಣರಾಗಿದ್ದಾರೆ. ಕೆ. ಭಾರ್ಗವಿ ಅವರು ಕಾರೇಮನೆ ಶಿವರಾಮ ಕೃಷ್ಣ ಭಟ್ ಮತ್ತು ಭಾಗೀರಥಿ ಭಟ್ ದಂಪತಿಯ ಪುತ್ರಿ. ಸಾಧಾರಣ ಕುಟುಂಬದಿಂದ ಬಂದ ಭಾರ್ಗವಿ ಸರಕಾರಿ ಪ್ರೌಢಶಾಲೆ ಬಿಸಗೋಡ ಅಲ್ಲಿ ಶಿಕ್ಷಣ ಪಡೆದು, ನಂತರ ಬಿಕಾಂ ಪದವಿಯನ್ನು ಪೂರ್ಣಗೊಳಿಸಿದ್ದರು. ಸತತ ಪ್ರಯತ್ನ ಮತ್ತು ನಂಬಿಕೆ ಇದ್ದರೆ ಯಾವುದೇ ಕನಸು ದೂರವಲ್ಲ ಎಂಬುದನ್ನು ತಮ್ಮ ಸಾಧನೆಯ ಮೂಲಕ ಇವರು ಸಾಬೀತುಪಡಿಸಿದ್ದಾರೆ.ಅವರು ಇದೇ ರೀತಿಯ ಹಿನ್ನೆಲೆ ಇರುವ ಅನೇಕ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾರೆ.

ಬೀದಿ ಸ್ವಚ್ಛಗೊಳಿಸಿದ ಅಮೆರಿಕದ ಉದ್ಯಮಿ



ಬೆಂಗಳೂರು: ನಗರದಲ್ಲಿ ದಿನದಿಂದ ದಿನಕ್ಕೆ ರಸ್ತೆಗುಂಡಿಗಳು, ಕಸದ ರಾಶಿ ಹಾಗೂ ನೈರ್ಮಲ್ಯದ ಕೊರತೆ ಹೆಚ್ಚಾಗುತ್ತಿದ್ದು, ಹಲವು ಅಭಿಯಾನಗಳನ್ನು ನಡೆಸಿದರೂ ಕಸ ರಸ್ತೆಗೆಸೆಯುವವರ ಸಂಖ್ಯೆ ಹೆಚ್ಚಾಗಿದೆ. ಅಮೆರಿಕದ ಉದ್ಯಮಿ ಟೋನಿ ಕ್ಲೋರ್ ಎಂಬವವರು ಬೆಂಗಳೂರಿನ ಬೀದಿಗಳನ್ನು ಸ್ವಚ್ಛಗೊಳಿಸಿ ಸ್ವಚ್ಛ ಭಾರತ ಸಂದೇಶವನ್ನು ಹೊಸ ರೀತಿಯಲ್ಲಿ ಸಾರಿದ್ದಾರೆ. ಐದು ವರ್ಷಗಳ ಭಾರತೀಯ ವೀಸಾ ಪಡೆದು ಬೆಂಗಳೂರಿನಲ್ಲಿ ನೆಲೆಸಿರುವ ಈ ಅಮೆರಿಕನ್ ವ್ಯಕ್ತಿ, ಪೌರಕಾರ್ಮಿಕರ ಜತೆ ಸೇರಿ ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸಿದರು. ಅವರು ಲುಂಗಿ ತೊಟ್ಟು, ಕೈಯಲ್ಲಿ ಪೊರಕೆ ಹಿಡಿದು ಬಿಬಿಎಂಪಿ ಕಾರ್ಮಿಕರ ಜತೆ ಕೆಲಸ ಮಾಡುತ್ತಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಟೋನಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ವಿಡಿಯೋ ಹಂಚಿಕೊಂಡಿದ್ದು, ಬೆಂಗಳೂರಿನ ಪಾದಚಾರಿ ಮಾರ್ಗಗಳು ಕೊಳಕಾಗಿವೆ. ನಾನು ಬಿಬಿಎಂಪಿಯ ಹೀರೋಗಳ ಜತೆ 'ಶ್ವೇತ ಪೌರ ಕಾರ್ಮಿಕ' ಆಗಿ ಸೇರಿದ್ದೇನೆ ಎಂದು ಹಾಸ್ಯಮಯ ಶೀರ್ಷಿಕೆ ಬರೆದಿದ್ದಾರೆ. ಅವರ ಈ ವಿಡಿಯೋ ಈಗ ಮೂರು ಲಕ್ಷಕ್ಕೂ ಹೆಚ್ಚು ವೀಕ್ಷಣೆಗಳನ್ನು ಪಡೆದುಕೊಂಡಿದ್ದು, ನೂರಾರು ಮಂದಿ ಪ್ರಶಂಸೆಯ ಕಾಮೆಂಟ್‌ಗಳೊಂದಿಗೆ ಪ್ರತಿಕ್ರಿಯಿಸಿದ್ದಾರೆ. ಒಬ್ಬ ಬಳಕೆದಾರ ವಿದೇಶಿಗರು ನಮ್ಮ ನಗರವನ್ನು ಸ್ವಚ್ಛಗೊಳಿಸುತ್ತಿರುವುದು ನಮಗೆ ನಾಚಿಕೆಗೇಡಿನ ಸಂಗತಿ ಎಂದರೆ, ಮತ್ತೊಬ್ಬರು ಸ್ವಚ್ಛ ಭಾರತ ಅಭಿಯಾನದ ನಿಜವಾದ ಮುಖ ನೀವು! ಎಂದು ಶ್ಲಾಘಿಸಿದ್ದಾರೆ. ಇನ್ನೊಬ್ಬರು ಟೋನಿ ಕ್ಲೋರ್ ಅವರ ಈ ಕೆಲಸ ಎಲ್ಲರಿಗೂ ಪ್ರೇರಣೆ ಎಂದು ಕಾಮೆಂಟ್ ಮಾಡಿದ್ದಾರೆ. ಟೋನಿ ಅವರು ಈ ಹಿಂದೆ ಪ್ರಧಾನಿ ನರೇಂದ್ರ ಮೋದಿಗೆ ಧನ್ಯವಾದ ತಿಳಿಸಿ, ಭಾರತದಲ್ಲಿ 5 ವರ್ಷ ಉಳಿಯಲು ಅವಕಾಶ ನೀಡಿದಕ್ಕಾಗಿ ನಾನು ಕೃತಜ್ಞ ಎಂದು ಹೇಳಿದ್ದಾರೆ. ಅವರ ಈ ನಿಸ್ವಾರ್ಥ ಕಾರ್ಯದಿಂದ ಬೆಂಗಳೂರಿನ ನಾಗರಿಕರು ಮಾತ್ರವಲ್ಲ, ಇಡೀ ದೇಶವೇ ಮೆಚ್ಚುಗೆ ವ್ಯಕ್ತಪಡಿಸಿದೆ.

4809 ಕೋಟಿ ರು. ನಿವ್ವಳ ಲಾಭ

Bank of Baroda

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ ಪ್ರಸಕ್ತ ಹಣಕಾಸು ವರ್ಷದಲ್ಲಿ ಸೆಪ್ಟೆಂಬರ್ ಅಂತ್ಯದವರೆಗಿನ ಎರಡನೇ ಮಾಸಿಕ ವರದಿ ಬಿಡುಗಡೆ ಮಾಡಿದ್ದು, 4,809 ಕೋಟಿ ರು. ನಿವ್ವಳ ಲಾಭ ಗಳಿಸಿದೆ. ಕಾರ್ಯಾಚರಣೆಯ ಲಾಭ 7,576 ಕೋಟಿ ರು. ಇದೆ. ಬಡ್ಡಿಯಿಂದ ಗಳಿಸಿದ ನಿವ್ವಳ ಆದಾಯ 11,954 ಕೋಟಿ ರು. ಇದ್ದು, ಕಳೆದ ತ್ರೈಮಾಸಿಕಕ್ಕೆ ಹೋಲಿಸಿದರೆ 4.5ರಷ್ಟು ಏರಿಕೆ ಕಂಡಿದೆ. ಬಡ್ಡಿಯೇತರ ಆದಾಯವೂ ಶೇ.7ರ ದರದಲ್ಲಿ ಪ್ರಗತಿ ಸಾಧಿಸಿದ್ದು, 3,515 ಕೋಟಿ ರು. ಇದೆ. ಇನ್ನು ಬ್ಯಾಂಕಿನ ಒಟ್ಟಾರೆ ಅನುತ್ಪಾದಕ ಆಸ್ತಿ ಪ್ರಮಾಣ ಶೇ.2.50 ಯಿಂದ ಶೇ.2.16ಕ್ಕೆ ಇಳಿಕೆಯಾಗಿದೆ. ಕಾರ್ಯಾಚರಣೆ ಖರ್ಚು 7,893 ಕೋಟಿ ರು. ಆಗಿದೆ. ನಮ್ಮ ಬ್ಯಾಂಕ್ ಬಲಿಷ್ಠವಾದ ಬೆಳವಣಿಗೆ ಸಾಧಿಸುತ್ತಿದೆ. ಸ್ವತ್ತುಗಳ ಗುಣಮಟ್ಟ ಉತ್ತಮಗೊಳ್ಳುವುದರೊಂದಿಗೆ ಲಾಭದ ಪ್ರಮಾಣವೂ ಸುಧಾರಿಸುತ್ತಿದೆ ಎಂದು ಬ್ಯಾಂಕ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಟಿಟಿಕೆ ಪ್ರೆಸ್ಟೀಜ್ ನೂತನ ಬ್ಲೆಂಡರ್ ಬಿಡುಗಡೆ

ಬೆಂಗಳೂರು: ಟಿಟಿಕೆ ಪ್ರೆಸ್ಟೀಜ್ ವತಿಯಿಂದ ಪ್ರೆಸ್ಟೀಜ್ ಬ್ಲೆಂಡರ್ ನ್ಯೂಟ್ರಿಮೇಟ್ ಅನ್ನು ಬಿಡುಗಡೆಗೊಳಿಸಿದೆ. ಪ್ರೆಸ್ಟೀಜ್ ನ್ಯೂಟ್ರಿಮೇಟ್ 400 ವ್ಯಾಟ್ ಶಕ್ತಿಶಾಲಿಯ ಮೋಟಾರ್ ಹೊಂದಿದ್ದು, ಸುಗಮ ಮತ್ತು ಸ್ಥಿರವಾದ ಫಲಿತಾಂಶಗಳನ್ನು ಖಚಿತ ಪಡಿಸುತ್ತದೆ ಎಂದು ಸಂಸ್ಥೆ ಹೇಳಿದೆ. ಈ ಉಪಕರಣ ಎರಡು ಬಹುಪಯೋಗಿ ಜಾಡಿಗಳನ್ನು ಹೊಂದಿದ್ದು, ಒಂದು 600 ಮಿಲಿ ಎತ್ತರದ ಜಾರ್ ಮತ್ತು 400 ಮಿಲಿ ಮಧ್ಯಮ ಜಾರ್ ಹೊಂದಿದೆ. ಒದ್ದೆಯಾದ ಹಾಗೂ ಒಣ ಪದಾರ್ಥಗಳನ್ನು ಸಲೀಸಾಗಿ ನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ. ನ್ಯೂಟ್ರಿಮೇಟ್ ಸುರಕ್ಷತೆಗೆ ಮೊದಲ ಆದ್ಯತೆ ನೀಡುತ್ತಿದ್ದು, ಆಕಸ್ಮಿಕ ಕಾರ್ಯಾಚರಣೆಯನ್ನು ತಡೆಗಟ್ಟಲು ಡ್ಯುಯಲ್ ಸೇಫ್ಟಿ ಇಂಟರ್‌ಲಾಕ್ ವ್ಯವಸ್ಥೆಯನ್ನು ಹೊಂದಿದೆ.

ಚುನಾವಣೆಯಲ್ಲಿ ಭಾಗವಹಿಸಲು ತೆರಳಲು ಡಿಕೆಶಿ ಮನವಿ | ಬಿಹಾರಿ ಸಂಘಕ್ಕೆ ಬೆಂಗಳೂರಿನಲ್ಲಿ ನಿವೇಶನದ ಭರವಸೆ

ಮತ ಹಾಕಲು ಬಿಹಾರಿಗಳಿಗೆ 3 ದಿನ ರಜೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಇಂಡಿ ಕೂಟಕ್ಕೆ ನೆರವಾಗಲು ಕರ್ನಾಟಕದಲ್ಲಿರುವ ಬಿಹಾರಿಗಳಿಗೆ ಮೂರು ದಿನ ವೇತನ ಸಹಿತ ರಜೆ ಕೊಡಿಸುವ ಭರವಸೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಕಟಿಸಿದ್ದಾರೆ.

ಬ್ಯಾಟರಾಯನಪುರದ ಕಾಫಿ ಬೋರ್ಡ್ ಲೇಔಟ್‌ನಲ್ಲಿ ಬಿಹಾರ ಮೂಲದ ಬೆಂಗಳೂರು ನಿವಾಸಿಗಳ ಸಂಘದ ಸದಸ್ಯರನ್ನು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಭೇಟಿ ಮಾಡಿದ್ದು, ಮತಯಾಚನೆ ಮಾಡಿದರು. 3-4 ದಿನಗಳ ರಜೆ ತೆಗೆದುಕೊಂಡು ತಮ್ಮ ಊರುಗಳಿಗೆ ಹೋಗಿ ಇಂಡಿಯಾ ಮೈತ್ರಿಕೂಟಕ್ಕೆ ಮತ ಚಲಾಯಿಸುವಂತೆ ಮನವಿ ಮಾಡಿದರು. ಇದೇ ವೇಳೆ ಬೆಂಗಳೂರಿನಲ್ಲಿ ಬಿಹಾರಿಗಳ ಸಂಘಕ್ಕೆ ನಾಗರಿಕ ಸೌಲಭ್ಯ ನಿವೇಶನ ಮಂಜೂರು ಮಾಡುವುದಾಗಿ ಭರವಸೆ ನೀಡಿದರು.

ಬಿಹಾರದಲ್ಲಿ ಲಕ್ಷಾಂತರ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕಿತ್ತು ಹಾಕಲಾಗಿದೆ. ನಿಮ್ಮ ಊರಿನಲ್ಲಿರುವವರ ಬದುಕನ್ನು ಉಳಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ನೀವುಗಳು ಇಲ್ಲಿ ಬದುಕು ಕಟ್ಟಿಕೊಂಡಿರಬಹುದು. ಆದರೆ, ನಿಮ್ಮ ಮತಗಳು ಅಲ್ಲಿರಬಹುದು. ಅಥವಾ ನಿಮ್ಮ ಸಂಬಂಧಿಕರು ಅಲ್ಲಿರಬಹುದು. ಅವರಿಗೆ ಮತದಾನ ಮಾಡಲು ನೀವು ತಿಳಿಸಿ. ನೀವುಗಳು ಸಹ ಮತದಾನ ಮಾಡಲು ಊರಿಗೆ ತೆರಳಿ.

> ಬಿಹಾರದವರು ಇಲ್ಲದಿದ್ದರೆ ಬೆಂಗಳೂರಿನಲ್ಲಿ ಅತ್ಯುತ್ತಮ ಕಟ್ಟಡಗಳನ್ನು ನಿರ್ಮಾಣ ಮಾಡಲು ಸಾಧ್ಯವಿರುತ್ತಿರಲಿಲ್ಲ. ನೀವು ಶ್ರಮಜೀವಿಗಳು. ಮರಗೆಲಸ, ಎಲೆಕ್ಟ್ರಿಕಲ್ ಕೆಲಸಗಳು, ವಿನ್ಯಾಸದ ಕೆಲಸಗಳು ಸೇರಿದಂತೆ ಯಾವುದೇ ಕೆಲಸ ನೀಡಿದರು ಅತ್ಯಂತ ಶ್ರದ್ಧೆಯಿಂದ ನಿರ್ವಹಣೆ ಮಾಡುವವರು. ನಿಮ್ಮ ಸಂಘದ ಸಮುದಾಯ ಭವನಕ್ಕೆ ನಿವೇಶನ ನೀಡಲಾಗುವುದು. ಇನ್ನೊಂದು ತಿಂಗಳಲ್ಲಿ ಇದರ ಬಗ್ಗೆ ಬೇರೆ ರಾಜ್ಯದ ಸಂಘಟನೆಗಳಿಗೆ ನಿವೇಶನಗಳನ್ನು ಮೀಸಲಿಡುವ ಬಗ್ಗೆ ಅಧಿಸೂಚನೆ ಹೊರಡಿಸಲಾಗುವುದು.
> – ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಬ್ಯಾಟರಾಯನಪುರದ ಕಾಫಿ ಬೋರ್ಡ್ ಲೇಔಟ್‌ನಲ್ಲಿ ಬಿಹಾರ ಮೂಲದ ಬೆಂಗಳೂರು ನಿವಾಸಿಗಳ ಸಂಘದ ಸದಸ್ಯರನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭೇಟಿ ಮಾಡಿ ಮತಯಾಚನೆ ಮಾಡಿದರು.

ನಿವೇಶನ ಭರವಸೆ ನೀಡಿದ ಡಿಕೆ ವಿರುದ್ಧ ಜೆಡಿಎಸ್ ಕಿಡಿ

ಬಿಹಾರಿಗಳಿಗೆ ರಜೆ ಹಾಗೂ ಬಿಹಾರಿ ಸಂಘಕ್ಕೆ ನಿವೇಶನ ನೀಡುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಭರವಸೆಯನ್ನು ಟೀಕಿಸಿರುವ ಜೆಡಿಎಸ್, 'ನಮ್ಮ ತೆರಿಗೆ, ನಮ್ಮ ಹಕ್ಕು' ಎಂದು ಗಂಟಲು ಹರಿದುಕೊಳ್ಳುವ ರಾಜ್ಯ ಕಾಂಗ್ರೆಸ್ಸಿಗರೇ. ನಿಮ್ಮ ಡೋಂಗಿತನಕ್ಕೆ ಏನೆನ್ನಬೇಕು? ಮತಕ್ಕೋಸ್ಕರ ಕನ್ನಡಿಗರ ಭೂಮಿಯನ್ನು ವಲಸಿಗರಿಗೆ ಧಾರೆ ಎರೆಯಲು ನಿಮ್ಮ ದೈನೇಸಿತನಕ್ಕೆ ಧಿಕ್ಕಾರ ಎಂದು ಟೀಕಿಸಿದೆ. ಕನ್ನಡಿಗರ ಹಿತ ಕಾಪಾಡುವ ಬದಲು ಹೈಕಮಾಂಡ್ ಗುಲಾಮಗಿರಿಗಾಗಿ ಪರಭಾಷಿಕರ ಮತಕ್ಕಾಗಿ ಓಲೈಕೆ ರಾಜಕಾರಣದಲ್ಲಿ ತೊಡಗಿದ್ದೀರಿ ಎಂದಿದೆ. ನಮ್ಮ ರಾಜ್ಯದ ಹೆಚ್ಚು ಪಾಲು ಬಿಹಾರಕ್ಕೆ ಹೋಗುತ್ತದೆ, ಅಲ್ಲಿ ಉದ್ಯೋಗ ಸೃಷ್ಟಿಯಾಗದ ಕಾರಣ ಬಿಹಾರಿಗಳು ಕರ್ನಾಟಕಕ್ಕೆ ಬಂದು ಕನ್ನಡಿಗರ ಮಕ್ಕಳ ಉದ್ಯೋಗ ಕಸಿದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರೇ ನಿಮ್ಮ ನಾಲಿಗೆಗಳು ಏಕೆ ಅಪಶ್ರುತಿ ನುಡಿಯುತ್ತಿವೆ ಎಂದು ಪ್ರಶ್ನಿಸಿದೆ.

ನಿಮಗೆಲ್ಲರಿಗು ಮೂರು ದಿನ ರಜೆ ನೀಡುವಂತೆ ನೀವುಗಳು ಕೆಲಸ ನಿರ್ವಹಿಸುವ ಸಂಸ್ಥೆಗಳು, ಗುತ್ತಿಗೆದಾರರಿಗೆ ಹಾಗೂ ಕ್ರೆಡಾಯ್ ಸಂಸ್ಥೆಗೆ ಸೂಚಿಸುತ್ತೇನೆ ಎಂದು ತಿಳಿಸಿದರು.

ಈ ವೇಳೆ ಸ್ಥಳದಲ್ಲಿದ್ದ ಕೆಲ ಬಿಹಾರಿ ನಿವಾಸಿಗಳು, ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಬೇಕೆಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಕೆಶಿ ಅವರು, ಮೊದಲು ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿ. ತೇಜಸ್ವಿ ಯಾದವ್ ಬಿಹಾರ ರಾಜ್ಯದ ಸಿಎಂ ಆಗಲಿ. ತೇಜಸ್ವಿ ಅವರನ್ನು ಸಿಎಂ ಮಾಡುವುದು ಮತ್ತು ರಾಹುಲ್ ಗಾಂಧಿ ಅವರನ್ನು ಪ್ರಧಾನಿಯನ್ನಾಗಿ ಮಾಡುವುದು ಪ್ರಮುಖ ಆದ್ಯತೆಯಾಗಿದೆ ಹೇಳಿದರು. ನನಗೆ ದೊಡ್ಡ ಸ್ಥಾನ ಬೇಕು ಎಂದು ನೀವೆಲ್ಲರೂ ಹೇಳಿದ್ದೀರಿ. ನನಗೆ ಅದು ಮುಖ್ಯವಲ್ಲ. ಬಿಹಾರದಲ್ಲಿ ಮಹಾಘಟ ಬಂಧನ ಅಧಿಕಾರಕ್ಕೆ ತಂದರೆ ನನಗೆ ಎಲ್ಲಾ ಸ್ಥಾನವನ್ನು ನೀವು ಕೊಟ್ಟಂತೆ. ನಿಮ್ಮ ಒಂದೊಂದು ಮತವೂ ಮಹಾಘಟಬಂದನ್ ಅಧಿಕಾರಕ್ಕೆ ಬರಲು ಮುಖ್ಯವಾದುದು. ಈ ಮೊದಲಿನಂತೆ ನಿತೀಶ್ ಕುಮಾರ್ ಅವರ ಕೈಯಲ್ಲಿ ಬಿಹಾರವಿಲ್ಲ. ಅವರು ರಾಜಕೀಯದ ಕೊನೆಗಾಲದಲ್ಲಿದ್ದಾರೆ ಎಂದಿದ್ದಾರೆ.

ಜನರ ಪ್ರಶ್ನೆಗಳಿಗೆ ಮೊದಲು ಉತ್ತರ ನೀಡಲಿ: ಆರ್.ಅಶೋಕ

ಸುರಂಗ ರಸ್ತೆಯ ಕುರಿತು ಜನರಿಗೆ ಮಾಹಿತಿ ನೀಡಿ

ಬೆಂಗಳೂರು: ಕಾಂಗ್ರೆಸ್ ಸರಕಾರ ಸುರಂಗ ರಸ್ತೆ ಯೋಜನೆ ಬಗ್ಗೆ ಜನರಿಗೆ ಮಾಹಿತಿ ನೀಡಿಲ್ಲ. ಜನರ ಪ್ರಶ್ನೆಗಳಿಗೆ ಮೊದಲು ಉತ್ತರ ನೀಡಲಿ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ ಬೆಂಗಳೂರಿನಲ್ಲಿ ನಿರ್ಮಿಸಲಿರುವ ಸುರಂಗ ರಸ್ತೆ ಯೋಜನೆಯ ಬಗ್ಗೆ ನಗರದ ಜನರಿಗೆ ಯಾವುದೇ ಮಾಹಿತಿ ನೀಡಿಲ್ಲ. ನಾನು ಅಧಿಕಾರಿಗಳನ್ನು ಈ ಬಗ್ಗೆ ಕೇಳಿದಾಗ 124 ಇಲಾಖೆಗಳಿಂದ ಅನುಮತಿ ಪಡೆಯಬೇಕಿದೆ ಎಂದು ತಿಳಿದುಬಂದಿದೆ. ನನ್ನನ್ನೇ ಸಮಿತಿ ಅಧ್ಯಕ್ಷರನ್ನಾಗಿ ಮಾಡುತ್ತಾರೆಂದು ಹೇಳಿದ್ದಾರೆ. ಇಂತಹ ಯೋಜನೆ ಮಾಡಲು ಇವರಿಗೆ ನೈಪುಣ್ಯತೆ ಇದೆಯೇ ಎಂದು ಸಾಬೀತುಪಡಿಸಲು ಸಿಎಂ ಹಾಗೂ ಡಿಸಿಎಂ ರಸ್ತೆಗುಂಡಿಗಳನ್ನು ಮುಚ್ಚಿಸಲಿ. ಗುಂಡಿ ಮುಚ್ಚಲು ಆಗದವರು ಸುರಂಗ ಹೇಗೆ ಮಾಡುತ್ತಾರೆ? ಇದಕ್ಕೆ ಹಣ ಎಲ್ಲಿದೆ ಎಂದು ಪ್ರಶ್ನಿಸಿದರು.

ಬಿಜೆಪಿಯವರು ಅಭಿವೃದ್ಧಿಯ ವಿರೋಧಿಗಳಲ್ಲ. ಆದರೆ ಮೊದಲು ರಸ್ತೆಗುಂಡಿ ಮುಚ್ಚಿಸಲಿ, ಕಸ ನಿರ್ವಹಣೆ ಮಾಡಲಿ. ಯೋಜನೆ ಖಂಡಿತ ಮಾಡುತ್ತೇವೆ ಎಂದು ದೌರ್ಜನ್ಯದಂತೆ ಮಾತನಾಡಬಾರದು. ಲಾಲ್‌ಬಾಗ್, ಕೆಂಪೇಗೌಡ ಗೋಪುರ ಹಾಳು ಮಾಡಬಾರದು. ಪರಿಸರ ನಾಶ ಮಾಡಬಾರದು. ನನಗೆ ಉತ್ತರ ಕೊಡುವ ಬದಲು ಜನರಿಗೆ ಸರಕಾರ ಉತ್ತರ ನೀಡಬೇಕು. ನಾನಿಲ್ಲಿ ಜನರ ಧ್ವನಿಯಾಗಿ ಮಾತಾಡುತ್ತಿದ್ದೇನೆ ಎಂದು ಹೇಳಿದರು.

ರೈತರನ್ನು ಮರೆತ ರಾಜ್ಯ ಸರಕಾರ

ಕುರ್ಚಿ ಕಿತ್ತಾಟದಲ್ಲಿ ರೈತರನ್ನು ಸಂಪೂರ್ಣವಾಗಿ ಮರೆತಿರುವ ಸರಕಾರ, ಬೆಳಗಾವಿ, ಬಾಗಲಕೋಟೆ, ಉತ್ತರಕನ್ನಡ ಜಿಲ್ಲೆಗಳ ಕಬ್ಬು ಬೆಳೆಗಾರರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದರೂ ಕ್ಯಾರೆ ಎನ್ನುತ್ತಿಲ್ಲ. ಅನ್ನದಾತರ ಸಂಕಷ್ಟಕ್ಕೆ ಸ್ಪಂದಿಸದ ಈ ರೈತವಿರೋಧಿ ಕಾಂಗ್ರೆಸ್ ಸರಕಾರ ಇದ್ದರೆಷ್ಟು, ಹೋದರೆಷ್ಟು, ರಾಜೀನಾಮೆ ಕೊಟ್ಟು ಕರ್ನಾಟಕ ಉಳಿಸಿ ಎಂದು ಆರ್.ಅಶೋಕ ಹೇಳಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಇನ್ನು ರೈತರು ತಮ ಸಂಕಷ್ಟವನ್ನು ಯಾರ ಬಳಿ ಹೇಳಿಕೊಳ್ಳಬೇಕು ಸ್ವಾಮಿ? ಇನ್ನೆಷ್ಟು ದಿನ ಈ ಭಂಡ ಬಾಳು ನಿಮ್ಮದು ? ಒಂದೆಡೆ ಸೂರ್ಯಕಾಂತಿ, ಉದ್ದಿನಕಾಳು, ಸೋಯಾಬೀನ್ ಹೆಸರುಕಾಳು ಬೆಳೆದ ರೈತರು ತಮ ಫಸಲು ಮಾರಲಾಗದೆ ಸಂಕಷ್ಟದಲ್ಲಿದ್ದರೆ, ಮತ್ತೊಂದೆಡೆ ಕಬ್ಬು ಬೆಳೆಗಾರರು ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅಲುಗಾಡುತ್ತಿರುವ ಕುರ್ಚಿಯಿಂದ ಹತಾಶರಾಗಿದ್ದು, ತಾಳ್ಮೆ ಕಳೆದುಕೊಂಡು ಎಲ್ಲರ ಮೇಲೂ ಸಿಡಿಮಿಡಿ ಎನ್ನುತ್ತಿದ್ದೀರಿ. ನಾಯಕತ್ವ ಬದಲಾವಣೆ ಗೊಂದಲದಿಂದ ಸಚಿವರು, ಶಾಸಕರು ದಿಕ್ಕು ತೋಚದೆ ಹೈರಾಣಾಗಿ ಮನೆಯಿಂದ ಆಚೆ ಬರುತ್ತಿಲ್ಲ ಎಂದಿದ್ದಾರೆ.

2030ರೊಳಗೆ 180 ಶತಕೋಟಿಗಳ ರಫ್ತು ಗುರಿ

ಎಲೆಕ್ಟ್ರಾನಿಕ್ಸ್ ವಲಯದಲ್ಲಿ ಮೌಲ್ಯ ಸೃಷ್ಟಿ ಮಾಡಲು ಐಇಎಸ್ ಬದ್ಧ



ಬೆಂಗಳೂರು: ಎಲೆಕ್ಟ್ರಾನಿಕ್ಸ್ ವಲಯದಲ್ಲಿ ಮೌಲ್ಯ ಸೃಷ್ಟಿ ಮಾಡಲು ಮತ್ತು ಬೆಳವಣಿಗೆಯ ಮುಂದಿನ ಅಲೆಯನ್ನು ಮುನ್ನಡೆಸಲು ಐಇಎಸ್ಎ ಬದ್ಧವಾಗಿದೆ ಎಂದು ಸಂಘದ ಅಧ್ಯಕ್ಷ ಅಶೋಕ್ ಚಂದಕ್ ಹೇಳಿದರು.

ಈ ಬಗ್ಗೆ ಮಾತನಾಡಿದ ಅವರು, ನಮ್ಮ ಸಾಮೂಹಿಕ ಪ್ರಯತ್ನಗಳು, 2030ರೊಳಗೆ 500 ಶತಕೋಟಿ ಎಲೆಕ್ಟ್ರಾನಿಕ್ಸ್ ಉದ್ಯಮವನ್ನು ಅಭಿವೃದ್ಧಿಪಡಿಸುವ ಪ್ರಧಾನ ಮಂತ್ರಿಯವರ ದೂರದೃಷ್ಟಿಗೆ ಸಂಪೂರ್ಣವಾಗಿ ಹೊಂದಿಕೆಯಾಗಿವೆ. ಇದು ಆಳವಾದ ಮೌಲ್ಯ ವರ್ಧನೆ, ಬಲವಾದ ಉತ್ಪಾದನಾ ಸಾಮರ್ಥ್ಯಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಆಧರಿಸಿದ್ದು, 2030ರೊಳಗೆ 180 ಶತಕೋಟಿಗಳ ಮಹತ್ವಾಕಾಂಕ್ಷೆಯ ರಫ್ತು ಗುರಿ ಹೊಂದಿದೆ ಎಂದರು.

ಸಹಭಾಗಿತ್ವ ಮತ್ತು ನೀತಿಯ ಮೂಲಕ, ಭಾರತವು ತನ್ನ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಬಹುದು ಮತ್ತು ಎಲೆಕ್ಟ್ರಾನಿಕ್ಸ್ ವಿನ್ಯಾಸ, ಉತ್ಪಾದನೆ ಮತ್ತು ರಫ್ತುಗಳಿಗಾಗಿ ವಿಶ್ವಾಸಾರ್ಹ ಕೇಂದ್ರವಾಗಿ ತನ್ನನ್ನು ತಾನು ಸ್ಥಾಪಿಸಿಕೊಳ್ಳಬಹುದು. ಸದಸ್ಯ ಕಂಪನಿಗಳು ಉತ್ಪಾದನೆ, ಉತ್ಪನ್ನ ನಾವೀನ್ಯತೆ, ಘಟಕ ಅಭಿವೃದ್ಧಿ, ಕೌಶಲ್ಯ ಮತ್ತು ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿ ಹೂಡಿಕೆಗಳನ್ನು ಹೆಚ್ಚಿಸಲು ಸಂಪೂರ್ಣವಾಗಿ ಬದ್ಧವಾಗಿದ್ದು, ಇದು ಜಾಗತಿಕ ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಪ್ರಮುಖ ಆಟಗಾರನಾಗಿ ಭಾರತದ ಸ್ಥಾನವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಹೇಳಿದರು.

ಪ್ರೊ.ಶ್ರೀಧರ್, ತಮಿಳು ಸೆಲ್ವಿಗೆ ಜಿ.ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ್ ಪ್ರಶಸ್ತಿ ಪ್ರದಾನ

ಕನ್ನಡದ ಹಿರಿಮೆ ಪರ ಭಾಷಿಕರಿಗೆ ಪರಿಚಯಿಸಬೇಕಿದೆ

ಶಿವಮೊಗ್ಗ: ಕಥೆಕೂಟ ನೀಡುವ ಜಿ.ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ್ ಪ್ರಶಸ್ತಿಯನ್ನು ಪ್ರೊ.ಎಸ್.ಎನ್.ಶ್ರೀಧರ್ ಹಾಗೂ ಪ್ರೊ.ತಮಿಳ್ ಸೆಲ್ವಿ ಅವರಿಗೆ ನೀಡಲಾಯಿತು.

ಸಾಗರದ ತುಮರಿಯ ಶಾಂತವೇರಿ ಗೋಪಾಲಗೌಡ ಸಭಾಭವನದಲ್ಲಿ ನಡೆದ ಕಥೆಕೂಟ ದಶಮಾನೋತ್ಸವ ಕಾರ್ಯಕ್ರಮದಲ್ಲಿ ನ್ಯೂಯಾರ್ಕ್‌ನ ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ಮತ್ತು ಭಾರತೀಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀಧರ್‌ಗೆ 2024ನೇ ಸಾಲಿನ ಪ್ರಶಸ್ತಿ, ಮದ್ರಾಸ್ ವಿವಿಯಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿರುವ ತಮಿಳು ಸೆಲ್ವಿಯವರಿಗೆ 2025ನೇ ಸಾಲಿನ ಭಾಷಾ ಸಮ್ಮಾನ್ ಪ್ರಶಸ್ತಿ ನೀಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ತಮಿಳು ಸೆಲ್ವಿಯವರು, ಕನ್ನಡ ಭಾಷೆಯು ಬಹಳ ಪ್ರಾಚೀನ ಭಾಷೆ ಮತ್ತು ಅತ್ಯಂತ ಶ್ರೀಮಂತ ಸಾಹಿತ್ಯ ಹೊಂದಿರುವ ಭಾಷೆ. ಈ ಮಹತ್ವಪೂರ್ಣ ಸಾಹಿತ್ಯವನ್ನು ಬೇರೆ ಬೇರೆ ಭಾಷಿಕರಿಗೆ ಪರಿಚಯಿಸುವ ಕೆಲಸ ನಮ್ಮಲ್ಲಿ ಆಗಿಲ್ಲ. ತೀರಾ ಇತ್ತೀಚೆಗೆ ಒಂದೆರಡು ಪ್ರಯತ್ನಗಳು ಆಗಿರುವುದು ಬಿಟ್ಟರೆ ದೊಡ್ಡ ಪ್ರಮಾಣದ ಕೆಲಸ ಆಗಿಲ್ಲ. ಹಾಗಾಗಿ ಕನ್ನಡದ ಈ ಸ್ಥಿತಿಗೆ ಒಂದರ್ಥದಲ್ಲಿ ನಾವೇ ಕಾರಣ. ಈಗಲಾದರೂ ಕನ್ನಡದ ಹಿರಿಮೆಯನ್ನು ಬೇರೆ ಭಾಷೆಯವರಿಗೆ ಪರಿಚಯಿಸುವ ಕೆಲಸ ಆಗಬೇಕಿದೆ ಎಂದು ಹೇಳಿದರು.

ಶಿವಮೊಗ್ಗದ ಸಾಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಎಸ್.ಎನ್.ಶ್ರೀಧರ್‌ಗೆ ಭಾಷಾ ಸಮ್ಮಾನ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಭಾಷಾ ಸಮ್ಮಾನ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರೊ. ಎಸ್.ಎನ್.ಶ್ರೀಧರ್ ಅವರು, ಕೆಲವು ಸಮಯದ ಹಿಂದೆ ನಾನು ದೆಹಲಿಯಲ್ಲಿ ನಡೆದ ಕಮ್ಮಟವೊಂದರಲ್ಲಿ ಭಾಗವಹಿಸಿದ್ದೆ. ಅವರೆಲ್ಲಾ ರಾಮಾಯಣ, ಮಹಾಭಾರತ ಕುರಿತು ಅಧ್ಯಯನ ಮಾಡಿದವರು. ಅಲ್ಲಿ ನಾನು ಕುಮಾರವ್ಯಾಸನ ಕುರಿತು ಮಾತನಾಡಿದರೆ ಅಲ್ಲಿನ ಯಾರೊಬ್ಬರಿಗೂ ಏನೂ ಗೊತ್ತಿರಲಿಲ್ಲ. ಕನ್ನಡದ ಇಂಥದ್ದೊಂದು ಮಹತ್ವದ ಕೃತಿಯ ಪರಿಚಯವೇ ಇಲ್ಲದಿರುವುದು ತಿಳಿದು ನನಗೆ ಬೇಸರವಾಯಿತು. ಅದಕ್ಕಾಗಿ ಕುಮಾರವ್ಯಾಸ ಭಾರತವನ್ನು ಇಂಗ್ಲಿಷಿಗೆ ಭಾಷಾಂತರಿಸುವ ಕಾರ್ಯ ಮಾಡಿದೆ. ಈ ಕ್ಲಿಷ್ಟಕರ ಕೆಲಸದಲ್ಲಿ ನನ್ನ ತಂಡದಲ್ಲಿ ಕೃಷ್ಣಮೂರ್ತಿ ಹನೂರು, ಎಚ್ ಎಸ್ ರಾಘವೇಂದ್ರ ರಾವ್, ಸಿಎನ್ ರಾಮಚಂದ್ರರಾವ್ ಕೈಜೋಡಿಸಿದ್ದಾರೆ. ಈ ಕೆಲಸವನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಧನ್ಯತೆ ತಂದಿದೆ ಎಂದರು.

> ಕಥೆಕೂಟ ಕಥಾಜಗತ್ತಿನ ದಿಗಂತವನ್ನು ವಿಸ್ತರಿಸುವ ಪ್ರಯತ್ನದಲ್ಲಿ ನಿರತವಾಗಿದೆ. ಕಳೆದ 10 ವರ್ಷಗಳಲ್ಲಿ ಇಲ್ಲಿ ಸಾಕಷ್ಟು ಕತೆಗಾರರು ಬೆಳೆದಿದ್ದಾರೆ. ಕತೆಯ ಸಾಧ್ಯತೆಗಳನ್ನು ತಿಳಿದುಕೊಂಡಿದ್ದಾರೆ. ಕೃತಿಗಳನ್ನು ನೀಡಿದ್ದಾರೆ. ದಶಮಾನೋತ್ಸವ ಸಂಭ್ರಮ ಸಾರ್ಥಕ ಕ್ಷಣ.
> – ಜೋಗಿ, ಸಾಹಿತಿ

ಹಿರಿಯ ಕವಿ ಸುಬ್ರಾಯ ಚೊಕ್ಕಾಡಿಯವರಿಗೆ ಕಥೆಕೂಟ ದಶಮಾನೋತ್ಸವ ಪ್ರಶಸ್ತಿ ಘೋಷಿಸಲಾಯಿತು. ಗೋಪಾಲ ಕೃಷ್ಣ ಕುಂಟಿನಿ, ಜಿ.ವಿ. ಅರುಣ, ಖ್ಯಾತ ಕಾದಂಬರಿಕಾರ ಗಜಾನನ ಶರ್ಮಾ, ಸಂಸ್ಕೃತ ವಿದ್ವಾಂಸ ಜಗದೀಶ್ ಶರ್ಮಾ, ನಿರ್ದೇಶಕ ಬಿ.ಎಸ್. ಲಿಂಗದೇವರು, ರಂಗ ನಿರ್ದೇಶಕ ಪ್ರಕಾಶ್ ಶೆಟ್ಟಿ, ನಿರ್ದೇಶಕಿ ಚಂಪಾ ಶೆಟ್ಟಿ ಸೇರಿ ಹಲವರಿದ್ದರು.

ವಿಜಯನಗರ ಕ್ಲಬ್‌ನಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಕಲ್ಪತರು ಗ್ರಾಮೀಣ ಬ್ಯಾಂಕ್‌ನ ಎರಡನೇ ಅಧ್ಯಕ್ಷ ಬಿ. ಕೋದಂಡ ರಾಮ್ ಅವರು 90 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅವರನ್ನು ಸಂದರ್ಭದಲ್ಲಿ ಗೌರವಿಸಲಾಯಿತು. ಪಿ.ಎನ್.ಸ್ವಾಮಿ, ಜಯರಾಮ್, ಕೆ.ಟಿ,ಮಂಜುನಾಥಯ್ಯ ಇದ್ದರು.

ರಸ್ತೆಬದಿ ಕಸ ಎಸೆವ ವಿಡಿಯೊ ಕಳಿಸಿ, ಬಹುಮಾನ ಗೆಲ್ಲಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಬೀದಿ ಬದಿಯಲ್ಲಿ ಕಸ ಸುರಿಯುವುದನ್ನು ತಪ್ಪಿಸುವ ಸಲುವಾಗಿ ಕಸ ಸುರಿಯುವವರ ಮನೆಯ ಮುಂದೆ ಕಸ ಸುರಿದು ದಂಡ ವಸೂಲಿ ಮಾಡಲು ಬಿಎಸ್‌ಡಬ್ಲ್ಯೂಎಂಎಲ್ ಮುಂದಾಗಿದ್ದು, ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಿದೆ.

ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಡೆಯುವ ಸಲುವಾಗಿ ರಸ್ತೆ ಬದಿ ಹಾಗೂ ಎಲ್ಲೆಂದರಲ್ಲಿ ಕಸ ಎಸೆದು ಹೋಗುವವರಿಗೆ ಕಡಿವಾಣ ಹಾಕುವ ಸಲುವಾಗಿ, ಕಸ ಎಸೆಯುವವರ ವಿಡಿಯೋಗಳನ್ನು ನೀಡಿದವರಿಗೆ 250ಮ ರು. ಬಹುಮಾನ ನೀಡುವುದಾಗಿ ಘೋಷಿಸಿದ್ದು, ಬಿಎಸ್‌ಡಬ್ಲ್ಯೂಎಂಎಲ್‌ನ ವಾಟ್ಸಾಪ್ ಸಂಖ್ಯೆ-9448197197 ನಲ್ಲಿ ವೀಡಿಯೊವನ್ನು ಹಂಚಿಕೊಳ್ಳುವವರಿಗೆ 250 ರು. ಬಹುಮಾನ ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಸ್‌ಡಬ್ಲ್ಯೂಎಂಎಲ್ ವ್ಯವಸ್ಥಾಪಕ ನಿರ್ದೇಶಕ ಕರೀಗೌಡ ಮಾತನಾಡಿ, ಮುಂದಿನ 30 ರಿಂದ 40 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ನಗರದ ಅಗತ್ಯಗಳಿಗೆ ಅನುಗುಣವಾಗಿ ಮೂಲಸೌಕರ್ಯವನ್ನು ಪುನರ್‌ರಚಿಸುವಾಗ, ಈ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಮತ್ತು ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ಸರಕಾರದಿಂದ ಸ್ಪಷ್ಟ ಸೂಚನೆಗಳು ಬಂದಿವೆ. ವಿಡಿಯೋಗಳನ್ನು ಹಂಚಿಕೊಳ್ಳುವ ಜನರು ಸಾಧ್ಯವಾದರೆ ನಿಯಮ ಉಲ್ಲಂಘಿಸಿದವರ ವಿವರಗಳನ್ನೂ ಹಂಚಿಕೊಳ್ಳಬೇಕು ಎಂದರು.

ಸಂಸ್ಥೆ ಈವರೆಗೂ 800ಕ್ಕೂ ಹೆಚ್ಚು ಬ್ಲಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಿದ್ದು, ಸಾಕಷ್ಟು ಜಾಗೃತಿ, ಅಭಿಯಾನದ ಬಳಿಕವೂ ಜನರು ಈಗಲೂ ರಸ್ತೆ ಬದಿಗಳಲ್ಲಿ ಕಸಗಳನ್ನು ಎಸೆದು ಹೋಗುತ್ತಿದ್ದಾರೆ. ಈಗಲೂ ಇದನ್ನು ನಾವು ನೋಡುತ್ತಿದ್ದೇವೆ. ಮನೆ ಬಾಗಿಲಿಗೆ ಆಟೋ ಟಿಪ್ಪರ್‌ಗಳು ಬಂದರೂ ಕಸ ಹಾಕಲು ಸೋಮಾರಿಗಳಾಗಿದ್ದಾರೆ. ಹೀಗಾಗಿ ವಿಡಿಯೊ ಹಂಚಿಕೊಳ್ಳುವವರಿಗೆ ಯುಪಿಐ ಖಾತೆ ಮೂಲಕ ಬಹುಮಾನದ ಹಣ ನೀಡುವ ಕುರಿತು ಚಿಂತನೆ ನಡೆಸಲಾಗುತ್ತಿದೆ. ಮಾಹಿತಿ ನೀಡಿದವರ ಮಾಹಿತಿ ರಹಸ್ಯವಾಗಿಡಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಯೋಜನೆಯಿಂದ ಜಿಬಿಎ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಕುರಿತ ಪ್ರಶ್ನೆಗೆ ಉತ್ತರಿಸಿ, ಜಿಬಿಎ ನಷ್ಟವನ್ನು ಅನುಭವಿಸುವುದಿಲ್ಲ. ಬಹುಮಾನದ ಹಣವನ್ನು ಜನರಿಂದಲೇ ಸಂಗ್ರಹಿಸಿದ ದಂಡದ ಮೊತ್ತದಿಂದಲೇ ಪಾವತಿಸಲಾಗುವುದು. ಬೇಜವಾಬ್ದಾರಿಯಿಂದ ಎಸೆಯುವ ತ್ಯಾಜ್ಯದ ಪ್ರಮಾಣ ಮತ್ತು ಪ್ರಕಾರವನ್ನು ಅವಲಂಬಿಸಿ 1,000 ರಿಂದ 10,000 ರು. ಸಂಗ್ರಹಿಸುತ್ತಿದ್ದೇವೆ. 250 ರು. ಬಹುಮಾನವಾಗಿ ನೀಡುವುದು ನಷ್ಟವಲ್ಲ. ಇದು ನಗರವನ್ನು ಸ್ವಚ್ಛವಾಗಿಡಲು ಜನರನ್ನು ಪ್ರೋತ್ಸಾಹಿಸುತ್ತದೆ ಎಂದು ತಿಳಿಸಿದ್ದಾರೆ.

ರಸ್ತೆ ಕಾಮಗಾರಿ ಗುಣಮಟ್ಟ ಖಾತ್ರಿಪಡಿಸಿಕೊಳ್ಳಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಸ್ತೆ ಕಾಮಗಾರಿ ಗುಣಮಟ್ಟವನ್ನು ಖಚಿತ ಪಡಿಸಿಕೊಂಡು ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಸೂಚನೆ ನೀಡಿದರು.

ಬ್ಯಾಟರಾಯನಪುರ ವಿಭಾಗದ ಹಳೆ ವಾರ್ಡ್ ಸಂಖ್ಯೆ 8ರ ಆಕೃತಿ ಪ್ರಾಸ್ಪೆರಾ ಬಡಾವಣೆಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಪರಿಶೀಲಿಸಿ ಅಗತ್ಯ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಆಯುಕ್ತರು ಸ್ಥಳದಲ್ಲಿದ್ದ ಅಭಿಯಂತರರಿಗೆ ರಸ್ತೆ ನಿರ್ಮಾಣದ ವೇಳೆ ಕೆಂಬಾರ್ ನೀಡಿರುವುದನ್ನು ಖಚಿತಪಡಿಸಿಕೊಳ್ಳಲು, ಜತೆಗೆ ಜಲಮಂಡಳಿಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಮ್ಯಾನ್‌ಹೋಲ್‌ಗಳನ್ನು ರಸ್ತೆಯ ಮಟ್ಟಕ್ಕೆ ಎತ್ತರಿಸುವಂತೆ ಕ್ರಮ ಕೈಗೊಳ್ಳಬೇಕು. ಅದೇ ರೀತಿ ಕಾಂಕ್ರೀಟ್ ಚರಂಡಿಗಳಲ್ಲಿ ನಿಯಮಿತವಾಗಿ ಡಿಸಿಲ್ಟಿಂಗ್ ಕಾರ್ಯಗಳನ್ನು ನಡೆಸಿ, ನೀರಿನ ಹರಿವು ಸುಗಮವಾಗುವಂತೆ ನೋಡಿಕೊಳ್ಳಲು ಹಾಗೂ ರಸ್ತೆಯ ಗುಣಮಟ್ಟವನ್ನು ಕಾಪಾಡಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸಬೇಕು ಎಂದು ನಿರ್ದೇಶನ ನೀಡಿದರು.

ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಉದ್ದೇಶದಿಂದ ಹಾಗೂ ನಾಗರೀಕರಲ್ಲಿ ಸಾರ್ವಜನಿಕ ಸ್ಥಳಗಳ ಸ್ವಚ್ಛತಾ ಮನೋಭಾವವನ್ನು ರೂಢಿಸಿಕೊಳ್ಳಲು ಅರಿವು ಮೂಡಿಸುವ ನಿಟ್ಟಿನಲ್ಲಿ ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನೇತೃತ್ವದಲ್ಲಿ ಸಾಮೂಹಿಕ ತೀವ್ರ ಸ್ವಚ್ಛತಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.



ಬ್ಯಾಟರಾಯನಪುರ ವಿಭಾಗದ ಹಳೆ ವಾರ್ಡ್ ಸಂಖ್ಯೆ 8ರ ಆಕೃತಿ ಪ್ರಾಸ್ಪೆರಾ ಬಡಾವಣೆಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ವೀಕ್ಷಿಸಿದರು.

ಈ ಕಾರ್ಯಕ್ರಮವು ನ.8 ರಂದು ಬೆಳಗ್ಗೆ 10:30ರಿಂದ ಸಂಜೆ 4:00ರವರೆಗೆ ನಡೆಯಲಿದ್ದು, ಉತ್ತರ ನಗರ ಪಾಲಿಕೆಯ ಹೆಬ್ಬಾಳ, ಪುಲಿಕೇಶಿನಗರ, ಸರ್ವಜ್ಞನಗರ, ಯಲಹಂಕ, ಬ್ಯಾಟರಾಯನಪುರ, ದಾಸರಹಳ್ಳಿ ಮತ್ತು ರಾಜರಾಜೇಶ್ವರಿ ನಗರ ವಿಭಾಗಗಳಲ್ಲಿ ಒಟ್ಟು 93.9 ಕಿ.ಮೀ ರಸ್ತೆಗಳಲ್ಲಿ ತ್ಯಾಜ್ಯ, ಸಿಲ್ಟ್, ಡೆಬ್ರಿಸ್ ಹಾಗೂ ಮರದ ರೆಂಬೆ-ಕೊಂಬೆಗಳನ್ನು ತೆರವುಗೊಳಿಸುವ ಜೊತೆಗೆ ಚರಂಡಿಗಳನ್ನು ಸ್ವಚ್ಛಗೊಳಿಸುವ ಕಾರ್ಯ ಕೈಗೊಳ್ಳಲಾಗುವುದು.

ನಗರದ ಸ್ವಚ್ಛತೆಯನ್ನು ಕಾಪಾಡಲು ಪಾಲಿಕೆಯ ಸಿಬ್ಬಂದಿಗಳು ಪ್ರತಿದಿನ ಶ್ರಮಿಸುತ್ತಿದ್ದಾರೆ. ಪ್ರತಿ ಶುಕ್ರವಾರ ಬೆಳಗ್ಗೆ 7ರಿಂದ 9ರ ವರೆಗೆ, ಆಯುಕ್ತರ ನೇತೃತ್ವದಲ್ಲಿ ಫೋನ್ ಇನ್ ಕಾರ್ಯಕ್ರಮದ ಮೂಲಕ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಆಲಿಸಿ ಪರಿಹರಿಸುವ ಕ್ರಮ ಕೈಗೊಳ್ಳಲಾಗುತ್ತದೆ. ವಾಟ್ಸ್ ಆ್ಯಪ್, ಸಹಾಯ ಆಪ್ ಹಾಗೂ ಕೇಂದ್ರೀಕೃತ ಸಹಾಯವಾಣಿ ಮೂಲಕ ಸ್ವೀಕೃತವಾಗುವ ದೂರುಗಳನ್ನು 24 ರಿಂದ 48 ಗಂಟೆಗಳೊಳಗೆ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ.

ಈ ವೇಳೆ ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಮುಖ್ಯ ಅಭಿಯಂತರ ರಂಗನಾಥ್, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಿಬ್ಬಂದಿ ಇದ್ದರು.

ಪಾರಿವಾಳದ ಶ್ವಾಸಕೋಶ ಸಮಸ್ಯೆಗೆ ಕ್ರಮವಹಿಸಿ

ಬೆಂಗಳೂರು: ನಗರದಲ್ಲಿ ಪಾರಿವಾಳಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಶ್ವಾಸಕೋಶದ ಸಮಸ್ಯೆ ಹೆಚ್ಚಾಗುತ್ತಿರುವ ಬಗ್ಗೆ ಶಾಸಕ ಸುರೇಶ್ ಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಮಾಜಿ ಸಚಿವ ಸುರೇಶ್ ಕುಮಾರ್ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಪತ್ರದಲ್ಲಿ ಅವರು, ಬೆಂಗಳೂರಿನ ವಿವಿಧ ಉದ್ಯಾನವನಗಳಲ್ಲಿ ಮತ್ತು ಇನ್ನೂ ಕೆಲವು ಬಯಲು ಪ್ರದೇಶಗಳಲ್ಲಿ ಪಾರಿವಾಳಗಳಿಗೆ ಧಾನ್ಯಗಳನ್ನು ನೀಡುವ ದಾನಿಗಳು ಕಾರ್ಯೋನ್ಮುಖರಾಗಿದ್ದಾರೆ. ಅವರ ಹೃದಯವಂತಿಕೆ ನಿಜಕ್ಕೂ ಶ್ಲಾಘನೀಯ. ಆದರೆ, ಈ ಪಾರಿವಾಳಗಳ ಸಂಖ್ಯೆ ವಿಪರೀತ ಮಟ್ಟದಲ್ಲಿ ಹೆಚ್ಚಾಗುತ್ತಿರುವುದರಿಂದ ನಾಗರಿಕರಿಗೆ ಶ್ವಾಸಕೋಶದ ಸಮಸ್ಯೆ ಹೆಚ್ಚಾಗುತ್ತಿರುವ ಬಗ್ಗೆ ಅನೇಕ ವೈದ್ಯಕೀಯ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಇದರಿಂದ ದಿನನಿತ್ಯ ಉದ್ಯಾನವನಗಳಲ್ಲಿ ವಾಕಿಂಗ್ ಹೋಗುವವರು, ವ್ಯಾಯಾಮ ಮಾಡುವವರು ಸಹಜವಾಗಿ ಆತಂಕಕ್ಕೆ ಈಡಾಗಿದ್ದಾರೆ ಮತ್ತು ಈ ಬಗ್ಗೆ ನನಗೆ ಮನವಿಗಳನ್ನು ನೀಡಿದ್ದಾರೆ. ಈ ಕುರಿತು ನಾಗರಿಕರ ಆರೋಗ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಏನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ತೀರ್ಮಾನ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಪಾರಿವಾಳದ ಹಿಕ್ಕೆಗಳು ಮಾರಕ: ತಜ್ಞರು ಹೇಳುವಂತೆ, ಪಾರಿವಾಳಗಳು ಮನುಷ್ಯರಿಗೆ ಅನೇಕ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುತ್ತವೆ. ವಿಶೇಷವಾಗಿ, ಅವುಗಳ ಹಿಕ್ಕೆಗಳು ಸೋಂಕುಗಳಿಗೆ ಕಾರಣವಾಗುವ ಸೂಕ್ಷ್ಮಜೀವಿಗಳ ವಾಹಕಗಳಾಗಿವೆ. ಹಿಕ್ಕೆಗಳು ಕ್ರಿಪ್ಟೋಕೊಕಸ್ ಮತ್ತು ಹಿಸ್ಟೋಪ್ಲಾಸ್ಮಾಸಿಸ್ ನಂತಹ ಶಿಲೀಂಧ್ರಗಳನ್ನು ಹಾಗೂ ವಿವಿಧ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳನ್ನು ಹೊಂದಿರುತ್ತವೆ. ಇವು ಧೂಳಿನ ರೂಪದಲ್ಲಿ ಮಣ್ಣು, ನೀರು ಮತ್ತು ಗಾಳಿಯನ್ನು ಪ್ರವೇಶಿಸುತ್ತವೆ. ದುರ್ಬಲಗೊಂಡ ರೋಗನಿರೋಧಕ ಶಕ್ತಿ ಹೊಂದಿರುವ ಜನರು ಮತ್ತು ಮಕ್ಕಳಲ್ಲಿ ಅಲರ್ಜಿ, ಉಸಿರಾಟದ ತೊಂದರೆಗಳು ಮತ್ತು ಮೆನಿಂಜೈಟಿಸ್‌ನಂತಹ ಕಾಯಿಲೆಗಳು ಬರುವ ಅಪಾಯವಿದೆ ಎಂದು ವೈದ್ಯಕೀಯ ತಜ್ಞರು ಎಚ್ಚರಿಸುತ್ತಾರೆ.

ಭೋಜ್‌ಪುರ ಜಿಲ್ಲೆಯಿಂದ ಪಟನಾಕ್ಕೆ ಬರುವಾಗ ಮನೇರ್ ವಿಧಾನಸಭೆ ವ್ಯಾಪ್ತಿಯ ಅಹಿಯಾಪುರ ಮಾಂಜಿ ಟೋಲಿಯಲ್ಲಿ ಮಾಂಜಿಗಳ ಪಾಡನ್ನು ಕೇಳುವವರಿಲ್ಲ. ವಿವಿಧ ತಲೆಮಾರುಗಳು ಇಲ್ಲಿ ಕಷ್ಟದಿಂದ ಬದುಕುತ್ತಿದ್ದರೂ, ಸರಕಾರ, ಸ್ಥಳೀಯಾಡಳಿತಗಳು ಮಾತ್ರ ಈ ಶಾಪಗ್ರಸ್ಥರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ನೆಮ್ಮದಿಯಿಂದ ಬದುಕಲು ಸೂರು ಕಟ್ಟಿಕೊಡಲಿಲ್ಲ ಎನ್ನುವುದು ಇವರ ಬಹುದೊಡ್ಡ ಗೋಳು. ಇಟ್ಟಿಗೆಗಳಲ್ಲಿ ಕಟ್ಟಿದ ಮನೆಗಳೆಲ್ಲವೂ ಇಂದೋ-ನಾಳೆಯೋ ಎಂಬಂತಿವೆ. ಮಳೆ ಬಂದರಂತೂ ಕೇಳುವುದೇ ಬೇಡ, ಓಣಿಗಳಲ್ಲಿ ನೀರು ತುಂಬಿ ಮನೆಯೊಳಗೆ ನುಗ್ಗಿಬಿಡುತ್ತವೆ.

ಬದಲಾಗದ ನತದೃಷ್ಟ ಮಾಂಜಿಗಳ ಬದುಕು

ಬಿಹಾರದಲ್ಲಿ ಮಾಂಜಿಗಳ (ಮುಸಹರ) ಬದುಕು ಎಷ್ಟೊಂದು ಶೋಚನೀಯವಾಗಿದೆ ಎಂಬುದನ್ನು ತಿಳಿದುಕೊಳ್ಳಲು ಮುಸಹರ ಟೋಲಿಗಳಿಗೆ (ಸಣ್ಣಸಣ್ಣ ಹಳ್ಳಿಗಳು) ಭೇಟಿ ನೀಡಬೇಕು. ಪರಿಶಿಷ್ಟ ಜಾತಿ ವ್ಯಾಪ್ತಿಯ ಮಾಂಜಿಗಳನ್ನು ಇಲಿ ತಿಂದು ಬದುಕುವವರು ಎಂದೇ ಗುರುತಿಸಲಾಗಿದೆ. ಬಿಹಾರದ ಅನೇಕ ಕಡೆ ಮುಸಹರರಿದ್ದಾರೆ. ವಿದೇಶದ ಹಲವು ಸಂಶೋಧಕರು ಇಲಿ ತಿನ್ನುವ ಮಾನವರನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದುಂಟು. ಸರಕಾರಗಳು ಅಭಿವೃದ್ಧಿಯಿಂದ ಅತಿ ದೂರವಿಟ್ಟದ್ದರಿಂದ ಪ್ರಗತಿಯ ಬೆಳಕನ್ನೇ ಕಾಣದೆ, ನತದೃಷ್ಟ ಬದುಕು ಸಾಗಿಸುತ್ತಿದ್ದಾರೆ ಈ ಮಾಂಜಿಗಳು. ಪಾಳು ಬಿದ್ದ ಮನೆಗಳು, ದುಃಖ, ವೇದನೆ, ಹತಾಶೆ, ನಿರುದ್ಯೋಗ, ಶೋಷಣೆಯಿಂದ ಜರ್ಝರಿತರಾಗಿರುವ ಇಲ್ಲಿನ ಮುಸಹರರಿಗೆ ಭವಿಷ್ಯವೂ ಕತ್ತಲೆ ಎನಿಸಿದೆ.

ಭೋಜ್‌ಪುರ ಜಿಲ್ಲೆಯಿಂದ ಪಟನಾಕ್ಕೆ ಬರುವಾಗ ಮನೇರ್ ವಿಧಾನಸಭೆ ವ್ಯಾಪ್ತಿಯ ಅಹಿಯಾಪುರ ಮಾಂಜಿ ಟೋಲಿಗೆ ನಾನು ಭೇಟಿ ನೀಡಿದೆ. ರಾಷ್ಟ್ರೀಯ ಹೆದ್ದಾರಿಗೆ ತಾಗಿಕೊಂಡಿರುವ ಈ ಟೋಲಿಯಲ್ಲಿ ಮಾಂಜಿಗಳ ಪಾಡನ್ನು ಕೇಳುವವರಿಲ್ಲ. ವಿವಿಧ ತಲೆಮಾರುಗಳು ಇಲ್ಲಿ ಕಷ್ಟದಿಂದ ಬದುಕುತ್ತಿದ್ದರೂ, ಸರಕಾರ, ಸ್ಥಳೀಯಾಡಳಿತಗಳು ಮಾತ್ರ ಈ ಶಾಪಗ್ರಸ್ಥರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ನೆಮ್ಮದಿಯಿಂದ ಬದುಕಲು ಸೂರು ಕಟ್ಟಿಕೊಡಲಿಲ್ಲ ಎನ್ನುವುದು ಇವರ ಬಹುದೊಡ್ಡ ಗೋಳು. ಇಟ್ಟಿಗೆಗಳಲ್ಲಿ ಕಟ್ಟಿದ ಮನೆಗಳೆಲ್ಲವೂ ಇಂದೋ-ನಾಳೆಯೋ ಎಂಬಂತಿವೆ. ಮಳೆ ಬಂದರಂತೂ ಕೇಳುವುದೇ ಬೇಡ. ಓಣಿಗಳಲ್ಲಿ ನೀರು ತುಂಬಿ ಮನೆಯೊಳಗೆ ನುಗ್ಗಿಬಿಡುತ್ತವೆ, ನಂತರ ಅಲ್ಲಿ ಜೀವಿಸುವವರದ್ದು ನಾಯಿಪಾಡು.

ಅಹಿಯಾಪುರ ಟೋಲಿಯಲ್ಲಿ ಸುಮಾರು 1400 ಮತದಾರರಿದ್ದಾರೆ. ಎನ್‌ಡಿಎ ಮೈತ್ರಿಕೂಟ, ಇಂಡಿ ಒಕ್ಕೂಟ, ಜನ ಸುರಾಜ್ ಪಾರ್ಟಿ ಸೇರಿದಂತೆ ಯಾವ ಪಕ್ಷದವರೂ ಈವರೆಗೆ ಇಲ್ಲಿ ಮತ ಕೇಳಲು ಬಂದಿಲ್ಲ. 'ಮತ ಕೇಳಲು ಬರುವ, ನಮ್ಮ ಸಮಸ್ಯೆಗಳನ್ನು ಆಲಿಸುವ ಮಂದಿಗೆ ಮತ ಹಾಕುತ್ತೇವೆ' ಎಂದು ನಿವಾಸಿಗರು 'ವಿಶ್ವವಾಣಿ' ಜತೆ ಮಾತನಾಡಿದರು. 'ಅಷ್ಟಕ್ಕೂ ಮತ ಹಾಕಿ ಏನು ಪ್ರಯೋಜನ ಹೇಳಿ? ನಮ್ಮ ಜೀವನ ಹೀಗೆ ಇರುತ್ತದಲ್ಲ' ಎನ್ನುತ್ತಾರೆ ಅವರು.

'ಗಟ್ಟಿ ಮೇಲ್ಚಾವಣಿ, ಕಿಟಕಿ, ಸರಿಯಾದ ಬಾಗಿಲುಗಳಿಲ್ಲದ ನಿಕೃಷ್ಟ ಸ್ಥಿತಿಯಲ್ಲಿರುವ ಮನೆಗಳಲ್ಲಿ ತಲೆಮಾರುಗಳಿಂದ ಬದುಕುತ್ತಿದ್ದೀರಿ. ನೀವು ಸರಕಾರಗಳಿಗೆ ಮನೆ ಕಟ್ಟಿ ಕೊಡಿ ಎಂದು ಮನವಿ ನೀಡಿಲ್ಲವೇ? ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಅರ್ಜಿ ಸಲ್ಲಿಸಿಲ್ಲವೇ?' ಎಂದು ನಾವು ಕೇಳಿದ್ದಕ್ಕೆ, 'ಅರ್ಜಿಗಳನ್ನು ಕೊಟ್ಟಿದ್ದೇವೆ ಸರ್, ಆದರೆ ನಮ್ಮ ಗ್ರಾಮ ಮುಖಿಯಾ ಅವರ ಕೆಲಸದಲ್ಲೇ ಬ್ಯುಸಿ ಇರುತ್ತಾರೆ. ನಮಗೆ ಯಾರೂ ಮನೆ ಕಟ್ಟಿಕೊಡಲಿಲ್ಲ, ನೀವೇ ನೋಡಿ, ಈ ಮನೆಗಳಲ್ಲಿ ಬದುಕಲು ಸಾಧ್ಯ ಉಂಟೇ?' ಎಂದು ಗದ್ಗದಿತ ದನಿಯಲ್ಲಿ ಹೇಳಿದರು ಚನರ್ ದೇವ್ ಮಾಂಜಿ.

ಇಂದೋ ನಾಳೆಯೋ ಎಂಬ ತನ್ನ ಮನೆ ಎದುರು ಲಖ್‌ಪತಿಯಾ ದೇವಿ.

ಶೌಚಾಲಯದ ಕೊರತೆ: ಯುವಕರು ಛೇಡಿಸುತ್ತಾರೆ..!

ಒಂದೆಡೆ ಕೇಂದ್ರ ಸರಕಾರ ದೇಶದೆಲ್ಲೆಡೆ ಬಡವರ ಮನೆಗಳಿಗೆ ಶೌಚಾಲಯಗಳನ್ನು ನಿರ್ಮಿಸಿಕೊಟ್ಟ ಬಗ್ಗೆ ಹೇಳುತ್ತದೆ. ರಾಜ್ಯ ಸರಕಾರಗಳೂ ಈ ಬಗ್ಗೆ ಅಭಿಯಾನ ನಡೆಸುತ್ತವೆ. ಆದರೆ ರಾಜಧಾನಿ ಪಟನಾದಿಂದ ಕೇವಲ 45 ಕಿ.ಮೀ ದೂರದ ಮಾಂಜಿ ಸಮುದಾಯದ ಟೋಲಿಯ ಯಾರ ಮನೆಯಲ್ಲೂ ಶೌಚಾಲಯ ಕಾಣುವುದಿಲ್ಲ. ಇಲ್ಲಿ ನೀರು ಹರಿದು ಹೋಗಲೇ ಸೂಕ್ತ ವ್ಯವಸ್ಥೆ ಇಲ್ಲ. ಇನ್ನು ಶೌಚಾಲಯ ಹೇಗೆ ನಿರ್ಮಾಣ ಮಾಡುವುದು? ಹೀಗಾಗಿ ನಾವು ಬಯಲು ಪ್ರದೇಶಕ್ಕೆ ಹೋಗುತ್ತೇವೆ. ಆದರೆ ಅಲ್ಲೂ ಹುಡುಗರು, ಯುವಕರು ಬಂದು ನಮ್ಮನ್ನು ಛೇಡಿಸುತ್ತಾರೆ. ನಮಗೆ ನಾಚಿಕೆಯಾಗುತ್ತದೆ. ಕನಿಷ್ಠ ನೀರು ಹರಿದುಹೋಗಲು ವ್ಯವಸ್ಥೆಯಾದಲ್ಲಿ ಶೌಚಾಲಯ ನಾವೇ ನಿರ್ಮಿಸುತ್ತೇವೆ ಎಂದರು ಜೂಲಿ ಕುಮಾರಿ. ಜೂಲಿ ಕುಮಾರಿ ಅವರ ಮನೆಯ ಇಟ್ಟಿಗೆ ಮೇಲ್ಚಾವಣಿ ಕುಸಿದು ಬಿದ್ದದ್ದರಿಂದ ಅದೇ ಗಲ್ಲಿಯ ಬೇರೊಬ್ಬರ ಮನೆಯಲ್ಲಿ ಬಾಡಿಗೆಗಿದ್ದಾರೆ. ಜೂಲಿಯಂತೆ ಅನೇಕರ ಮನೆ ಮೇಲ್ಚಾವಣಿ ಮನೆಗೆ ಕುಸಿದು ಬಿದ್ದಿರುವುದನ್ನು ಇಲ್ಲಿ ಕಾಣಬಹುದು.

90ರ ದಶಕದಲ್ಲಿ ಲಾಲೂ ಕೊಟ್ಟಿದ್ದು

90ರ ದಶಕದ ನಂತರ ಲಾಲು ಪ್ರಸಾದ್ ಯಾದವ್ ರಾಜ್ಯದ ಸಿಎಂ ಆದ ಮೇಲೆ ಇಟ್ಟಿಗೆಗಳ ಮನೆ ನಿರ್ಮಾಣಕ್ಕೆ ಹಣ ಕೊಟ್ಟರು. ಅವರಿಂದಾಗಿ ನಮಗೆ ಇಷ್ಟಾದರೂ ಇದೆ. ಮಳೆ ಬಂದು ಮನೆಗೆ ನೀರು ತುಂಬಿದಾಗ ಇಲ್ಲಿನ ರಸ್ತೆಯ ಮತ್ತೊಂದು ಬದಿಯಲ್ಲಿರುವ ಸಿಮೆಂಟ್ ಕಟ್ಟಡದೊಳಗೆ ಸೇರಿಕೊಳ್ಳುತ್ತಾರೆ. ಸಣ್ಣ ಅಂಗನವಾಡಿ ಕಟ್ಟಡವನ್ನು ಲಾಲೂ ಕಟ್ಟಿಸಿಕೊಟ್ಟಿದ್ದರು ಎನ್ನುವ ಸ್ಥಳೀಯರು, ಇದು ಇಲ್ಲದಿದ್ದರೆ ನಾವು ಬೀದಿಯಲ್ಲೇ ಬದುಕಬೇಕು ಎಂದರು.

ವಿಕಲಾಂಗನ ಗೋಳು

ಅಪಘಾತದಲ್ಲಿ ವರ್ಷಗಳ ಹಿಂದೆ ಕಾಲು ಕಳೆದುಕೊಂಡ ವೃದ್ಧ ಸುದರ್ಶನ್ ಮಾಂಜಿ ಮನೆಯಂತೂ ದೊಡ್ಡ ಮಳೆ ಬಂದರೆ ಕುಸಿದುಬೀಳಲಿದೆ. ಮನೆಗೆ ಬಾಗಿಲುಗಳಿಲ್ಲ. ಎತ್ತರದ ಗೋಡೆಗಳಲ್ಲ. ಮಣ್ಣು, ಇಟ್ಟಿಗೆಗಳು ಯಾವಾಗ ಬೇಕಾದರೂ ಉದುರಬಹುದು. ಮನೆ ಮೇಲೆ ಪ್ಲಾಸ್ಟಿಕ್ ಶೀಟು, ಕಟ್ಟಿಗೆಗಳನ್ನು ಹಾಕಿ ಮಳೆಯಿಂದ ರಕ್ಷಣೆ ಪಡೆದುಕೊಂಡರೂ, ಜೋರು ಮಳೆ ಬಂದರೆ, ಮನೆಯೊಳಗೆಲ್ಲಾ ರಸ್ತೆ ನೀರು ಹರಿದುಬರುತ್ತದೆ. ತನ್ನ ಕಷ್ಟ ಹೇಳಿಕೊಂಡರೂ ತನ್ನ ಜೀವನದಲ್ಲಿ ಪರಿವರ್ತನೆ ಆದೀತು ಎಂಬ ಭರವಸೆ ಆತನಲ್ಲಿ ಕಾಣಲಿಲ್ಲ.

ವಿಕಲಾಂಗ ಸುದರ್ಶನ್ ಮಾಂಜಿ

ನಮ್ಮಲ್ಲಿ ನಲ್ಲಿಗಳಿಲ್ಲದೆ, ನೀರು ಪೂರೈಕೆ ಸರಿಯಾಗಿಲ್ಲ. ನೀರು ಪೂರೈಕೆಗೆ ವ್ಯವಸ್ಥೆಯಾದರೆ ಅನುಕೂಲ. ಈ ರೀತಿ ಬದುಕಿ ಸಾಕಾಗಿದೆ. ಇನ್ನಾದರೂ ಕನಿಷ್ಠ ವ್ಯವಸ್ಥೆಗಳನ್ನು ಹೊಂದಿ ನೆಮ್ಮದಿಯಿಂದ ಬದುಕಬೇಕು ಅನಿಸುತ್ತದೆ.

- ಸರಿತಾ ದೇವಿ, ಅಹಿಯಾಪುರ್ ಮಾಂಜಿ ಟೋಲಿ ನಿವಾಸಿ

ಲಾಲೂ ಅಧಿಕಾರಕ್ಕೆ ಬರುವ ಮುನ್ನ ಮೇಲ್ಜಾತಿಯವರು ನಮ್ಮ ಟೋಲಿಗೆ ಬಂದಾಗ ಕುರ್ಚಿಯಲ್ಲಿ ಕೂರುತ್ತಿದ್ದರು. ನಾವು ನೆಲದಲ್ಲಿರುತ್ತಿದ್ದೆವು. ಲಾಲೂ ಬಂದ ಮೇಲೆ ಸ್ವಾಭಿಮಾನದಿಂದ ಬದುಕುವಂತೆ ಮಾಡಿದರು. ಮೊದಲು ಜಮೀನು ಮಾಲೀಕರು ಕರೆದಾಗ ಕೆಲಸಕ್ಕೆ ಹೋಗಲೇಬೇಕಿತ್ತು. ಈಗ ಗೌರವದಿದ ಕೆಲಸಕ್ಕೆ ಬರುತ್ತೀರಾ ಎಂದು ಕೇಳುತ್ತಾರೆ, ಇಷ್ಟವಿದ್ದರಷ್ಟೇ ನಾವು ಹೋಗುತ್ತೇವೆ.

- ಗೋಪಿ ಮಾಂಜಿ ಮತ್ತು ಮಂತು ಮಾಂಜಿ, ಅಹಿಯಾಪುರ

ಬಿಹಾರದಲ್ಲಿ ಮೂರ್ನಾಲ್ಕು ದಿನಗಳಿಂದ ಮಳೆ ಬಿದ್ದ ಪರಿಣಾಮ ಇಲ್ಲಿನ ಓಣಿಗಳು ಕೆಸರುಮಯವಾಗಿವೆ. ಈ ಕೆಸರನ್ನು ತುಳಿದುಕೊಂಡೇ ಮನೆಗಳಿಗೆ ಹೋಗಬೇಕು. ಚಮಾರ್ ಮಾಂಜಿ ಎಂಬವರ ಮನೆ ಒಳಗಿನ ಅಡುಗೆ ಕೋಣೆಯ ಒಂದು ಬದಿಯಲ್ಲಿ ಇಟ್ಟಿಗೆ ಕಡಿಮೆಯಾಗಿ ಗೋಡೆ ತೆರೆದುಕೊಂಡಿರುವ ಸ್ಥಿತಿಯಲ್ಲಿದೆ. ಇದರಿಂದಾಗಿ ಮಳೆ ನೀರು ನೇರವಾಗಿ ಮನೆ ಒಳಗೇ ಬೀಳುತ್ತದೆ. ಅಲ್ಲಿ ಮಳೆ ನೀರು ಬಿದ್ದು ಕೆಸರು ತುಂಬಿದ್ದು, ಇನ್ನೂ ಒಣಗಿಲ್ಲ, ಹೀಗಾಗಿ ಅಲ್ಲಿ ಕಾಲಿಡಲೇ ಸಾಧ್ಯವಿಲ್ಲ. ಕೆಲ ಹಳೆ ತಲೆಮಾರಿನವರ 2-3 ಮಕ್ಕಳು ಮದುವೆಯಾಗಿ ನಂತರ ಮೊಮ್ಮಕ್ಕಳೂ ಸೇರಿಕೊಳ್ಳುವುದರಿಂದ ಸಣ್ಣ ಸಣ್ಣ ಜೋಪಡಿಗಳಲ್ಲಿ ಬದುಕಲೇ ಇಕ್ಕಟ್ಟಿನ ಸ್ಥಿತಿ ಇದೆ.

ಎನ್‌ಡಿಎ ಮೈತ್ರಿಕೂಟದ ಮಿತ್ರಪಕ್ಷದ ಹಿಂದುಸ್ತಾನಿ ಅವಾಮಿ ಮೋರ್ಚಾದ ನಾಯಕ ಜೀತನ್ ರಾಮ್ ಮಾಂಜಿ ಇದೇ ಮಾಂಜಿ ಸಮುದಾಯದ ಅತಿದೊಡ್ಡ ನಾಯಕ. 2014 ರಲ್ಲಿ ನಿತೀಶ್ ಕುಮಾರ್ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾಗ ಮುಖ್ಯಮಂತ್ರಿಯನ್ನಾಗಿ ಜೀತನ್ ರಾಮ್ ಮಾಂಜಿಯವನ್ನು ಆಯ್ಕೆ ಮಾಡಿದ್ದರು. ಸದ್ಯ ಜೀತನ್ ಮಾಂಜಿ ಕೇಂದ್ರ ಸಚಿವರೂ ಆಗಿದ್ದಾರೆ. ಆದರೆ ಬಿಹಾರದ ಮಾಂಜಿಗಳ ಬದುಕು ಮಾತ್ರ ಹಿಂದೆ ಹೇಗಿತ್ತೋ ಹಾಗೆಯೇ ಇದೆ ಎನ್ನುವುದಕ್ಕೆ ಅಹಿಯಾಪುರ ಮಾಂಜಿ ಟೋಲಿಯೇ ಸಾಕ್ಷಿ.

ವಿದ್ಯಾಭ್ಯಾಸಕ್ಕಾಗಿ ಮಕ್ಕಳು ಪಕ್ಕದ ಸರಕಾರಿ ಶಾಲೆಗೆ ಹೋಗುತ್ತಾರೆ. ಈ ಟೋಲಿಯಲ್ಲಿ ಪದವಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ ಒಬ್ಬನೇ ಒಬ್ಬ ವ್ಯಕ್ತಿ ಇಲ್ಲ. ಹೀಗಾಗಿ, ಒಳ್ಳೆಯ ಉದ್ಯೋಗದಲ್ಲಿ ಇರುವ ಪ್ರಶ್ನೆಯೇ ಇಲ್ಲ. ಇಲ್ಲಿ ಮಾಂಜಿಗಳು ಜಮೀನು ಮಾಲೀಕರ ಕೃಷಿಯಲ್ಲಿ ಕೆಲಸ ಅಥವಾ ಇನ್ನಿತರ ದಿನಗೂಲಿ ಕೆಲಸ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದಾರೆ. 2023ರ ಬಿಹಾರ ಸರಕಾರದ ಜನಗಣತಿ ವರದಿ ಪ್ರಕಾರ 13.07 ಕೋಟಿ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಶೇ.19.65ರಷ್ಟಿದೆ. ಅದರಲ್ಲಿ ಮುಸಹರರ ಪಾಲು ಶೇ.3.08 ಎಂದು ದಾಖಲಾಗಿದೆ.

ಮಾಂಜಿ ಟಫಲಿಯ ಗತಿಗೆಟ್ಟ ಸ್ಥಿತಿ

ತನ್ನ ಮನೆ ಎದುರು ಮಕ್ಕಳು, ಮೊಮ್ಮಕ್ಕಳೊಂದಿಗೆ ಸರಿತಾ ದೇವಿ (ಮಧ್ಯೆ) ಮಾಂಜಿ ಟೋಲಿಯ ಗತಿಗೆಟ್ಟ ಸ್ಥಿತಿ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ), ಹುಬ್ಬಳ್ಳಿ.

ಸಂಖ್ಯೆ: ಎಚ್‌ಡಿಎಂಸಿ/63/04/2024-25 ದಿನಾಂಕ: 03-11-2025

ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2023 ರ ಪ್ರಕಾರ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ ಸರ್ಕಾರಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸನ್ 2021-2022 ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ / ಮುಕ್ತ ಅನುದಾನದ ಉಳಿಕೆ ಮೊತ್ತದ ಯೋಜನೆಯಡಿಯಲ್ಲಿ **1) ಇಂಡೆಂಟ್ ನಂ. 45750/10.00ಲಕ್ಷ/3ನೇಕರೆ/ಸಾಮಾನ್ಯ,** ಸನ್ 2023-24 ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ **2) ಇಂಡೆಂಟ್ ನಂ. 20268/15.64ಲಕ್ಷ/5ನೇ ಕರೆ/ಸಾಮಾನ್ಯ,** ಸನ್ 2024-25 ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ **3) ಇಂಡೆಂಟ್ ನಂ. 34107/14.00ಲಕ್ಷ/2ನೇಕರೆ/ಸಾಮಾನ್ಯ,** ಸನ್ 2021-22 ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ **4) ಇಂಡೆಂಟ್ ನಂ. 42510/20.00ಲಕ್ಷ/ಪ.ಜಾ(ಎಸ್.ಸಿ),** ಸನ್ 2025-26 ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ **5) ಇಂಡೆಂಟ್ ನಂ. 46790/3.80ಲಕ್ಷ/3ನೇಕರೆ/ಸಾಮಾನ್ಯ, 6) ಇಂಡೆಂಟ್ ನಂ. 49523/82.00ಲಕ್ಷ/ 2ನೇಕರೆ ಸಾಮಾನ್ಯ,** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದ ಹೆಸರು, ಇ.ಎಂ.ಡಿ, ಕಾಮಗಾರಿ ನಿರ್ವಹಣಾ ಅವಧಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ವೆಬ್‌ಸೈಟ್: **https://kppp.karnataka.gov.in** ರಲ್ಲಿ ಪಡೆಯಬಹುದು. ಸದರಿ ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: **05-11-2025** ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

1) ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **19-11-2025 ರಂದು ಸಂಜೆ 4.00 ಘಂಟೆವರೆಗೆ** ಹಾಗೂ ಟೆಂಡರ್ ತೆರೆಯುವ ದಿನಾಂಕ: **20-11-2025 ರಂದು ಸಂಜೆ 4.30 ಘಂಟೆ ನಂತರ. 2) ಕ್ರ.ಸಂ. 6** ರ ಕಾಮಗಾರಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ: **21-11-2025 ರಂದು ಸಂಜೆ 4.30 ಘಂಟೆ ನಂತರ.**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.
ವಾ.ಸಾ.ಇ/ಧಾರವಾಡ/820/ಅಡ್ವರ್ಟೋರ್/2025-26

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ
ಕಾರ್ಯನಿರ್ವಾಹಕ ಇಂಜನೀಯರವರ ಕಾರ್ಯಾಲಯ,
ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ವಿಭಾಗ ನಂ.02, ಬಾಗಲಕೋಟೆ - 587102.
ದೂರವಾಣಿ : 08354-297054, ಇ-ಮೇಲ್: eebtda2@gmail.com

ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ-2/ಟೆಂಡರ ನಂ.05/2025-26/2267
ದಿನಾಂಕ:03.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಬರುವ ಕಾಮಗಾರಿಗಳ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಲಮ್‌ಸಮ್ ಟರ್ನಕೀ ಆಧಾರದ ಮೇಲೆ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೆ.ಟಿ.ಪಿ.ಪಿ ನಿಯಮಾಳಿಯಂತೆ ಆಹ್ವಾನಿಸಲಾಗಿದೆ,

1) ಇಂಡೆಂಟ್ ನಂ: 8/3ನೇ ಕರೆ, ಟೆಂಡರ್‌ಗಿಟ್ಟ ಮೊತ್ತವು ರೂ. 1310.28 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) ಇರುತ್ತದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ಹಾಗೂ ಕಾಮಗಾರಿಯ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" **ವೆಬ್‌ಸೈಟ್ www.kppp.karnataka.gov.in** ಮೂಲಕ ವೀಕ್ಷಿಸಬಹುದು. **ದಿನಾಂಕ 08-12-2025** ಸಂಜೆ 5.00 ಗಂಟೆವರೆಗೆ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. **ದಿನಾಂಕ: 10-12-2025** ರಂದು ಬೆಳಿಗ್ಗೆ 11.00 ಗಂಟೆ (ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್‌ನ್ನು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 11-12-2025** ರಂದು **ಬೆಳಿಗ್ಗೆ 11:00 ಗಂಟೆ** (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಚೇರಿಯ ಅವಧಿಯಲ್ಲಿ **ದೂರವಾಣಿ ಸಂಖ್ಯೆ: 08354-297054** ಸಂಪರ್ಕಿಸಬಹುದಾಗಿದೆ.

Please note henceforth, any changes in calendar of events/ corrigendum/ ammendment will be published in KPPP portal only and will not be published in Newspaper.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ. 02,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟ/369/ಮಣಿಪಾಲ್/2024-25

ವಿದೇಶದ ನೆಲದಲ್ಲಿ ಕನ್ನಡ ಡಿಂಡಿಮ ಬಾರಿಸುತ್ತಿರುವ ಕಲಿಗಳು

ಬೆಂಕಿ ಬಸಣ್ಣ, ನ್ಯೂಯಾರ್ಕ್

ಸಂಗೀತ ಕನ್ನಡ ಕೂಟ, ಮಿನ್ನಿಯಾಪೊಲೀಸ್, ಮಿನ್ನೆಸೋಟ

ಕ್ರಿ.ಶ.1970ರ ದಶಕದಲ್ಲಿ ಅಮೆರಿಕದ ಮಿನ್ನೆಸೋಟ ರಾಜ್ಯದಲ್ಲಿ ಬಂದು ನೆಲೆಸಿದ್ದ ಕೆಲವು ಉತ್ಸಾಹಿ ಕನ್ನಡ ಗೆಳೆಯರ ಬಳಗ ಆರಂಭಿಸಿದ ಸಂಗೀತ ಕನ್ನಡ ಕೂಟ, ಇಂದು ಮಿನ್ನೆಸೋಟ ಸಂಗೀತ ಕನ್ನಡ ಕೂಟವಾಗಿ ಮುನ್ನೂರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ದೊಡ್ಡ ಪರಿವಾರವಾಗಿ ಬೆಳೆದಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ಸಹೃದಯಿ ಕನ್ನಡಿಗರು, ಅವರ ಕನ್ನಡ ಅಭಿಮಾನ ಮತ್ತು ನಿಸ್ವಾರ್ಥ ಸೇವೆ.

ವಿಶ್ವದೆಲ್ಲೆಡೆ ಕನ್ನಡದ ಕಂಪನ್ನು ಪಸರಿಸುತ್ತಿರುವ ಕನ್ನಡ ಸಂಘಗಳಲ್ಲಿ ಮಿನ್ನೆಸೋಟ ಸಂಗೀತ ಕನ್ನಡ ಕೂಟದ ಕೂಟದ ಪಾತ್ರ ವಿಶಿಷ್ಟವಾದದ್ದು. ಸಿಲಿಕಾನ್ ಸಿಟಿಯಿಂದ ಸಿಲಿಕಾನ್ ಕಣಿವೆಗೆ ಬೆಸೆದಿರುವ ಕೊಂಡಿ ತುಂಬಾ ಗಟ್ಟಿ ಮತ್ತು ಅಷ್ಟೇ ಹಳೆಯದ್ದು. ಇದು ಅಕ್ಕ ಸಂಸ್ಥೆಯ ಸದಸ್ಯ ಸಂಸ್ಥೆ. ಅಮೆರಿಕದ ಬೃಹತ್ ಭೂ ಪ್ರದೇಶದ ವಿವಿಧ ಭಾಗದಲ್ಲಿ ಹರಡಿ ನೆಲೆ ನಿಂತಿರುವ ಕನ್ನಡಿಗರು ತಮ್ಮ ಕುಟುಂಬ, ಸ್ನೇಹಿತರ ಬಳಗದ ಜೊತೆಗೆ ಕನ್ನಡ ಸಂಘಗಳನ್ನು ಕಟ್ಟಿ ಬೆಳೆಸುತ್ತಿದ್ದಾರೆ. ಅಂಥ ಕನ್ನಡ ಸಂಘಗಳಲ್ಲಿ, ಮಿನ್ನೆಸೋಟ ರಾಜ್ಯದಲ್ಲಿ ಕನ್ನಡ ಕಟ್ಟುವ ಕೆಲಸದಲ್ಲಿ ತೊಡಗಿರುವ 'ಸಂಗೀತ ಕನ್ನಡ ಕೂಟ'ವೂ ಒಂದು.

ಸಂಘ ಸ್ಥಳೀಯ ಸದಸ್ಯರ, ಮಕ್ಕಳ ಪ್ರತಿಭೆಗೆ ವೇದಿಕೆಯನ್ನು ಒದಗಿಸುವದರ ಜತೆಗೆ, ಕನ್ನಡ ನಾಡು ನುಡಿ ಸಂಸ್ಕೃತಿಯನ್ನು ಅಲ್ಲಿನ ಜನಕ್ಕೆ ಪರಿಚಯ ಮಾಡಿಕೊಡುವುದು, ಅದನ್ನು ಕಾಪಿಟ್ಟು ಪೋಷಿಸಿ ಅಲ್ಲಿಯೇ ಹುಟ್ಟಿ ಬೆಳೆದ ನವ ತಲೆಮಾರಿನ ಅನಿವಾಸಿ ಭಾರತೀಯ ಹಾಗೂ ಅನಿವಾಸಿ ಕನ್ನಡಿಗರಿಗೆ ಧಾರೆಯೆರೆಯುವ ಕೆಲಸವನ್ನು ಸಂಗೀತ ಕನ್ನಡ ಕೂಟ ಮಾಡುತ್ತಾ ಬಂದಿದೆ. ಅದಲ್ಲದೆ ಭಾರತ, ಮತ್ತು ಕರ್ನಾಟಕದ ವಿವಿಧೆಡೆ ಯಾವುದೇ ವಿಪತ್ತು ಬಂದರೂ ನಮ್ಮ ಸಂಘ ದೇಣಿಗೆ ಸಂಗ್ರಹಣೆ ಮಾಡಿ ಸಹಾಯಹಸ್ತ ನೀಡುತ್ತದೆ. ಇತ್ತೀಚೆಗೆ ಕರೋನ ಮಹಾಮಾರಿಯ ಸಮಯದಲ್ಲೂ ಇಲ್ಲಿನ ಜನರಿಂದ ಸಹಾಯ ಒದಗಿಸಿದೆ.ಅದಲ್ಲದೇ ಶಾಲಾ ಮಕ್ಕಳಿಗೆ ಪಠ್ಯಪುಸ್ತಕ ಸಲಕರಣೆ ಪೂರೈಕೆ, ಇತ್ಯಾದಿ ಸಾಮಾಜಿಕ ಸೇವೆಯನ್ನು ನಡೆಸುತ್ತಾ ಬಂದಿದೆ. ಪ್ರತಿ ವರ್ಷ, ಸಂಕ್ರಾಂತಿ ಹಬ್ಬದಂದು ಸದಸ್ಯರನೇಕರು ಸೇರಿ, ಸಾಮಾನು ಸರಂಜಾಮುಗಳ ವ್ಯವಸ್ಥೆ ಮಾಡಿಕೊಂಡು, ಸ್ಥಳೀಯ ದೇವಸ್ಥಾನವೊಂದರಲ್ಲಿ ಅಡುಗೆ ತಯಾರಿಸಿ. ಅದರಿಂದ ಬಂದ ಹಣವನ್ನು ದೇವಸ್ಥಾನಕ್ಕೆ ದೇಣಿಗೆ ರೂಪದಲ್ಲಿ ನೀಡಲಾಗುತ್ತದೆ. ಇದು ಕಳೆದ ಕೆಲವು ವರ್ಷಗಳಿಂದ ಒಂದು ಆಚರಣೆಯಂತೆ ನಡೆದುಕೊಂಡು ಬಂದಿದೆ.

ಮತ್ತೊಂದು ಮುಖ್ಯವಾದ ವಿಚಾರ, ಕಡ್ಡಾಯ ಕನ್ನಡಕ್ಕಾಗಿ ಹೋರಾಟ. ಮುಚ್ಚುತ್ತಿರುವ ಕನ್ನಡ ಶಾಲೆಗಳು, ಹೆಚ್ಚಾಗುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳ ಜನಪ್ರಿಯತೆಯಿಂದ ಒಂದಿಡೀ ತಲೆಮಾರು ಕನ್ನಡ ಭಾಷೆಯಿಂದ ನಂಟು ಕಳೆದುಕೊಳ್ಳಬೇಕಾ ಗಬಹುದು ಎಂಬ ಕಳವಳಕಾರಿ ಸಂಗತಿಯನ್ನು ಅರಿತು, ಕರ್ನಾಟಕದ ಶಾಲೆಗಳಲ್ಲಿ ಕನ್ನಡ ಕಡ್ಡಾಯ ಕರ್ನಾಟಕದ ಎಲ್ಲ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಅಧಿಸೂಚನೆ ಹೊರಡಿಸಿರುವ ಕರ್ನಾಟಕ ಸರಕಾರದ ನಿರ್ಧಾರಕ್ಕೆ, ಸಂಗೀತ ಕನ್ನಡ ಕೂಟದ ಮಿನ್ನೇಸೋಟ ಕನ್ನಡಿಗರು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಇನ್ನು ಸಾಂಸ್ಕೃತಿಕ ಕಾರ್ಯಕ್ರಮಗಳ ವಿಷಯಕ್ಕೆ ಬಂದರೇ, ಪ್ರತಿವರ್ಷ ಯುಗಾದಿ ಸಂಭ್ರಮ, ವಾರ್ಷಿಕ ವಿಹಾರ, ಗಣೇಶೋತ್ಸವ ಮತ್ತು ದೀಪಾವಳಿ ಸಡಗರ. ಅದರಲ್ಲೂ ಮುಖ್ಯವಾಗಿ ರಾಜ್ಯೋತ್ಸವ ವನ್ನು ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಈ ಕಾರ್ಯ ಕ್ರಮಗಳನ್ನು ಸಂಗೀತ ಕನ್ನಡ ಕೂಟ ಬಹಳ ಅಚ್ಚುಕಟ್ಟಾಗಿ ಆಯೋಜಿಸುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಹಬ್ಬದೂಟ ಈ ಕಾರ್ಯಕ್ರಮಗಳ ಮುಖ್ಯ ಆಕರ್ಷಣೆ. ವಾರ್ಷಿಕ ವನಭೋಜನ, ಹೊರಾಂಗಣ ಕ್ರೀಡೆಗಳನ್ನು ಒಳಗೊಂಡಿರುತ್ತದೆ.

70ನೇ ಕನ್ನಡ ರಾಜ್ಯೋತ್ಸವ

ಪಂಪ ಕನ್ನಡ ಕೂಟ, ಡೆಟ್ರಾಯ್ಟ್

ಪಂಪ ಕನ್ನಡ ಕೂಟವನ್ನು ಡಾ.ಶ್ರೀಪಾದರಾಜು, ಡಾ.ಮಾಯಣ್ಣಗೌಡ ಕೃಷ್ಣಪ್ಪ ಮತ್ತು ಎಸ್. ಎನ್.ಪ್ರಕಾಶ್ ಅವರು ಮಾರ್ಚ್ 1971ರಲ್ಲಿ ಯುಗಾದಿ ಹಬ್ಬದ ದಿನದಂದು ಸ್ಥಾಪಿಸಿದರು. ಪ್ರತಿಯೊಬ್ಬರ ಹೆಸರೂ ಕನ್ನಡಿಗರ ಹೃದಯದಲ್ಲಿ ಉಳಿದಿದೆ. ಹಾಲಿನಲ್ಲಿ ಸಕ್ಕರೆ ಬೆರೆತಂತೆ, ತಾವು ಬದುಕಿದ ಸಮುದಾಯದ ಜೀವನಕ್ಕೆ ತಮ್ಮನ್ನು ತಾವು ಹೊಂದಿಕೊಂಡು, ಇವನಾರವ, ಇವನಾರವ ಎನ್ನದೆ ಇವ ನಮ್ಮವ, ಇವ ನಮ್ಮವ ಎಂದು ಭಾವಿಸಿ ತಮ್ಮ ಕನ್ನಡ ಒಗ್ಗಟ್ಟನ್ನು ತೋರಿಸಿದರು.

ಕನ್ನಡ ಸಂಘ ಸ್ಥಾಪನೆಗೂ ಮುನ್ನ ಅಮೆರಿಕ, ಕೆನಡಾದಲ್ಲಿ ನೆಲೆಸಿರುವ ಹಲವು ಕನ್ನಡಿಗರ ವಿಳಾಸ ಸಂಗ್ರಹಿಸಿ, ಕನ್ನಡ ಸಂಘಟನೆ ಸ್ಥಾಪನೆಯ ಸಭೆಗೆ ಎಲ್ಲರನ್ನೂ ಆಹ್ವಾನಿಸಿ, ಹೆಸರೇನಿರಬೇಕು ಎಂಬ ಬಗ್ಗೆ ಅಭಿಪ್ರಾಯ ಸಂಗ್ರಹವನ್ನೂ ನಡೆಸಲಾಗಿತ್ತು. ಕನ್ನಡ ಸಂಘಟನೆಯ ಹಲವು ಹೆಸರುಗಳನ್ನು ಸೂಚಿಸಲಾಗಿದೆ. ಉದಾಹರಣೆಗೆ: 'ಸಾಗರೋತ್ತರ ಕನ್ನಡಿಗರು', 'ಕನ್ನಡ ಸಂಘ', 'ಕನ್ನಡ ಕೂಟ', ಹೀಗೆ ಅನೇಕರ ಅಭಿಪ್ರಾಯ 'ಕನ್ನಡ ಕೂಟ'. ಅದೇ ರೀತಿ ಕನ್ನಡದ ಮೊದಲ ಸಂಘಟನೆಗೆ ಬಹುಸಂಖ್ಯಾತರು ಆಯ್ಕೆ ಮಾಡಿದ ಹೆಸರು ಪಂಪ ಕನ್ನಡ ಕೂಟ.

ಅಮೇರಿಕಾದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಯ ಬೆಳವಣಿಗೆಗೆ ರಾಷ್ಟ್ರಕವಿ ಕುವೆಂಪು ಅವರ ಪ್ರಸಾದವಾಣಿ ಹೀಗಿತ್ತು: ನಿಮ್ಮ ಎಲ್ಲ ಅಭಿವೃದ್ಧಿ ಕಾರ್ಯಗಳು ಮಂಗಳದಿಂದ ಮಂಗಳಕ್ಕೆ ಬೆಳೆಯಲಿ ಮಹಾಕವಿಯ ಮಾತು ಸದಾ ಪಂಪ ಕನ್ನಡ ಕೂಟಕ್ಕೆ ರಕ್ಷಾಕವಚ. ಪಂಪ ಕನ್ನಡ ಕೂಟವು ಮಿಚಿಗನ್ನಲ್ಲಿ ನೆಲೆಸಿರುವ ಕರ್ನಾಟಕ ರಾಜ್ಯದ ಕನ್ನಡ ಮಾತನಾಡುವ ಜನರನ್ನು ಪ್ರತಿನಿಧಿಸುವ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಕನ್ನಡ ಮಾತನಾಡುವ ಜನರಲ್ಲಿ ಕನ್ನಡ ಭಾಷೆ, ಸಂಸ್ಕೃತಿ, ಸಂಗೀತ, ನೃತ್ಯ, ನಾಟಕವನ್ನು ಉತ್ತೇಜಿಸುವುದು. ನಮ್ಮ ಶ್ರೀಮಂತ ಸಂಸ್ಕೃತಿಯನ್ನು ಕನ್ನಡೇತರರಿಗೆ ಪ್ರದರ್ಶಿಸುವುದು ಈ ಸಂಸ್ಥೆಯ ಉದ್ದೇಶವಾಗಿದೆ.

ಗ್ರೇಟರ್ ಲ್ಯಾನ್ಸಿಂಗ್ ಕನ್ನಡ ಸಂಘ, ಮಿಚಿಗನ್

ಗ್ರೇಟರ್ ಲಾನ್ಸಿಂಗ್ ಕನ್ನಡ ಸಂಘ ಮಿಚಿಗನ್ ರಾಜ್ಯದ ರಾಜಧಾನಿಯಾದ ಲಾನ್ಸಿಂಗ್ ಪ್ರದೇಶ ಮತ್ತು ಅಕ್ಕ ಪಕ್ಕದ ಉಪನಗರಗಳಲ್ಲಿ, ಹಲವಾರು ವರುಷಗಳಿಂದ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿತ್ತು. ಆದರೆ 2019ರಲ್ಲಿ ಇದನ್ನು ಅಧಿಕೃತವಾಗಿ ಲಾಭರಹಿತ ಸಂಸ್ಥೆ ಎಂದು ನೋಂದಾಯಿಸಲಾಯಿತು. ಕೆಲವೇ ಕೆಲವು ಕನ್ನಡದ ಜನರಿಂದ ಪ್ರಾರಂಭಗೊಂಡ ಈ ಸಂಸ್ಥೆ ಈಗ ಸುಮಾರು 100 ಸದಸ್ಯರನ್ನೊಳಗೊಂಡಿದೆ. ಅಲ್ಲದೆ ಭಾರತದ ಇತರ ಸಂಸ್ಥೆಗಳೊಂದಿಗೆ ಮತ್ತು ಅಕ್ಕ ಪಕ್ಕದ ಊರಿನ ಕನ್ನಡ ಸಂಸ್ಥೆಗಳೊಂದಿಗೆ ಸಹಯೋಗಿಸಿ ಅನೇಕ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೂಟಗಳಲ್ಲಿ ಪಾಲುಗೊಳ್ಳುತ್ತಿದೆ. ಇದಲ್ಲದೆ ಸಂಘವು ಹಲವು ಸಾಮಾಜಿಕ ಏಳಿಗೆಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ ಮತ್ತು ಪಾಲ್ಗೊಳ್ಳುತ್ತಿದೆ.

ಪ್ರತಿ ವರ್ಷ ಸಂಘದ ವತಿಯಿಂದ ಯುಗಾದಿ ಹಬ್ಬವನ್ನು ವಿಜೃಂಭಣೆಯಿಂದ ಸಡಗರಿಸಲಾಗುತ್ತದೆ. ಸಂಘದ ಸದಸ್ಯರಿಂದ ಹಲವು ಬಗೆಯ ನೃತ್ಯ, ಹಾಡು, ನಾಟಕ ಹಾಗು ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತವೆ. ಇದಲ್ಲದೆ ಹೊರನಾಡಿನ ಕನ್ನಡದ ಕಲಾವಿದರಿಂದ ಮತ್ತು ಪ್ರತಿಭೆಗಳಿಂದ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕಳೆದ ವರ್ಷದ ಯುಗಾದಿಯಲ್ಲಿ ಯಕ್ಷ ಹೆಜ್ಜೆ ಕಲಾವಿದರಿಂದ ಯಕ್ಷಗಾನವನ್ನು ಆಯೋಜಿಸಲಾಗಿತ್ತು. ಈ ಅನನ್ಯ ಕಲಾ ಪ್ರದರ್ಶನವು ಕರಾವಳಿ ತೀರದ ಕನ್ನಡಿಗರನ್ನಲ್ಲದೆ, ಎಲ್ಲಾ ಕನ್ನಡಿಗರನ್ನೂ ಮತ್ತು ಕನ್ನಡೇತರ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತ್ತು. ಬೇಸಿಗೆಯ ಸಮಯದಲ್ಲಿ ನಮ್ಮ ಸಂಸ್ಥೆಯು ಪಿಕ್ನಿಕ್ಕನ್ನು ಆಯೋಜಿಸುತ್ತದೆ. ಈ ಕೂಟದಲ್ಲಿ ಅನೇಕ ಗ್ರಾಮೀಣ ಕ್ರೀಡಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕನ್ನಡದ ಮನೆಯಿಂದ ಬಂದಿರುವ ವಿವಿಧ ಭಗೆಯ ತಿಂಡಿ ತಿನಿಸುಗಳನ್ನು ಸವಿದು, ಕುಣಿದು, ಮಕ್ಕಳು, ಇಳಿ ವಯಸ್ಸಿನವರೆನ್ನದೆ ಎಲ್ಲರು ತುಂಬಾ ಹರುಷದಿಂದ ಪಾಲ್ಗೊಳ್ಳುತ್ತಾರೆ. ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿಯನ್ನು ಪ್ರತಿ ನವೆಂಬರ್ ನಲ್ಲಿ ಸಡಗರದಿಂದ ಆಚರಿಸಲಾಗುತ್ತದೆ. ಇದರ ಪ್ರಯುಕ್ತವಾಗಿಯೂ ಅನೇಕ ಸಾಂಸ್ಕೃತಿಕ ಮತ್ತು ಮೋಜಿನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಸಂಘದ ಮತ್ತೊಂದು ಪ್ರಾಮುಖ್ಯ ಕಾರ್ಯಕ್ರಮ ಕನ್ನಡ ಕಲಿ ಯೋಜನೆಯನ್ನು ಕನ್ನಡ ಅಕಾಡೆಮಿ ಸಹಯೋಗದಿಂದ 2023ರಿಂದ ಪ್ರಾರಂಭಿಸಲಾಗಿದೆ ಮತ್ತು ಇದು ತುಂಬಾ ಯಶಸ್ವಿಯಾಗಿ ಚಾಲನೆಯಲ್ಲಿದೆ. ಲಾನ್ಸಿಂಗ್ ನಗರದ ಕನ್ನಡಿಗರಿಗೆ ಕನ್ನಡದ ಸೊಗಡನ್ನು ನೀಡುವ ಕಾರ್ಯ ನಿರಂತರವಾಗಿ ಜರುಗಲಿದೆ.

ವಿಶ್ವವಾಣಿ ಬೆಂಗಳೂರು 04-11-2025 ಮಂಗಳವಾರ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
@vishwavaninews

ಜೀಕು ಪೀಠೋಪಕರಣದ ಗಮ್ಮತ್ತು

● ಕೆ.ಎಸ್.ಸೋಮೇಶ್ವರ, ಬೆಂಗಳೂರು

ಪೀಠೋಪಕರಣಗಳು ಪ್ರತಿ ಮನೆಯ ಬಹುಮುಖ್ಯ ಮತ್ತು ಅಗತ್ಯವಾದ ಸಲಕರಣೆಗಳು. ಇಂದಿನ ಮಾರುಕಟ್ಟೆಯಲ್ಲಿ ಮನೆಯನ್ನು ಅಲಂಕರಿಸಲೆಂದೇ ಹಲವು ಬಗೆಯ ಪೀಠೋಪಕರಣಗಳಿವೆ. ಪ್ರಾಚೀನ ಕಾಲದ ಕಲಾವಂತಿಕೆಯ ಮರುಸೃಷ್ಟಿಯಿಂದ ಮೊದಲಾಗಿ ಹೊಸತನವನ್ನು ಬಿಂಬಿಸುವ ಹಲವು ಆಯ್ಕೆಗಳು ಇಂದು ಗ್ರಾಹಕರಿಗೆ ದೊರೆಯುತ್ತಿವೆ. ಇದರಲ್ಲಿ ಸ್ವಿಂಗ್ ಅಥವಾ ಜೀಕುವ ಪೀಠೋಪಕರಣಕ್ಕೆ ಬಹು ಬೇಡಿಕೆ ಇದೆ. ಇದು ಕೂಡ ಆಧುನಿಕತೆಯ ಸ್ಪರ್ಶಕ್ಕೆ ಸಿಲುಕಿ ತೂಗಿ-ಬೀಗುತ್ತಿದೆ.

ಹಿಂದೆಲ್ಲಾ, ಉಯ್ಯಾಲೆ ಇರುವ ಮನೆ ದೊಡ್ಡದಾಗಿರುತ್ತಿತ್ತು. ಸುಂದರವಾದ ಕೆತ್ತನೆಯುಳ್ಳ ಉಯ್ಯಾಲೆಗಳನ್ನು ಎರಡೂ ಬದಿಯಲ್ಲಿ ಬಲವಾದ ಉಕ್ಕಿನ ಸರಪಳಿಗಳಿಂದ ನೇತುಹಾಕಿರಲಾಗುತ್ತಿತ್ತು. ಮಾಳಿಗೆಗೆ ಭದ್ರವಾದ ಕುಣಿಕೆಗಳನ್ನು ಹಾಕುವುದೂ ಒಂದು ಕಸುಬುದಾರಿಕೆಯೇ. ಇಂದಿನ ದಿನಮಾನದಲ್ಲಿ ನಗರಗಳಲ್ಲಿ ಅಷ್ಟು ದೊಡ್ಡ ಮನೆಗಳನ್ನು ನಿರ್ಮಿಸುವುದು ಸ್ವಲ್ಪ ಕಷ್ಟವೇ ಸರಿ. ಆದಾಗ್ಯೂ ಲಭ್ಯ ಅವಕಾಶದಲ್ಲೇ ಉಯ್ಯಾಲೆಗೆ ಅಥವಾ ತೂಗುಮಂಚಕ್ಕೆ ಪರ್ಯಾಯವಾದ ಜೀಕು ಪೀಠೋಪಕರಣಗಳನ್ನು ಅನೇಕರು ಮನೆಗಳಿಗೆ ತರುತ್ತಿದ್ದಾರೆ. ಇವು ವಿವಿಧ ಅಳತೆಗಳು ಮತ್ತು ಶೈಲಿಯಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿವೆ. ಹಿಂದೆ ಮರದ ದೊಡ್ಡ ಹಲಗೆಗಳಿಂದ ಮಾಡಿದ ಉಯ್ಯಾಲೆಗಳನ್ನಷ್ಟೇ ಕಾಣುತ್ತಿದ್ದವು. ಈಗ ಎರಡು ಸ್ತಂಭಗಳನ್ನು ಆಧರಿಸಿಕೊಂಡ, ಸುಂದರ ಕೆತ್ತನೆಯಿರುವ ಮರದ ಉಯ್ಯಾಲೆಗಳು ಹೆಚ್ಚು ಜನಪ್ರಿಯ. ಮಾಳಿಗೆಗೆ ನೇತುಹಾಕುವ ಅಗತ್ಯವಿಲ್ಲದ ಇವು ಸುರಕ್ಷತೆಯ ದೃಷ್ಟಿಯಿಂದ ಗ್ರಾಹಕರಿಗೆ ಮೆಚ್ಚಿನ ಆಯ್ಕೆಯಾಗಿವೆ. ಬೆಂಗಳೂರು ಸೇರಿದಂತೆ ಅನೇಕ ನಗರಗಳಲ್ಲಿ ನಡೆಯುವ ಕರಕುಶಲ ಪೀಠೋಪಕರಣ ಮೇಳಗಳಲ್ಲಿ ಇಂಥ ಉಯ್ಯಾಲೆಗಳು ವಿವಿಧ ಶೈಲಿಯಲ್ಲಿ ಪ್ರದರ್ಶನಗೊಳ್ಳುತ್ತವೆ.

ಈಗಿನ ಕಾಲದ ಟ್ರೆಂಡ್

ಎರಡೂ ಬದಿಯಲ್ಲಿ ಉಕ್ಕಿನ ಆಧಾರ ಇರುವ ಸೋಫಾ ತರಹದ ಜೀಕು ಉಯ್ಯಾಲೆ ಇಂದಿನ ಟ್ರೆಂಡ್ ಎನ್ನಬಹುದಾಗಿದೆ. ಇಂಗ್ಲಿಷ್‌ನ 'ಎ' ಆಕಾರದ ಫ್ರೇಮ್‌ಗಳು ಆಧಾರವಾಗಿ ಇರುತ್ತವೆ. 2-3 ಜನರು ಆರಾಮವಾಗಿ ಕುಳಿತುಕೊಳ್ಳುವ ಅವಕಾಶ ಇದರಲ್ಲಿರುತ್ತದೆ. ಚಿಕ್ಕ ಸ್ವರೂಪದ್ದಾದರೆ ಒಬ್ಬ ದೊಡ್ಡವರು ಮತ್ತು ಮಗು ಕೂರುವ ಅಳತೆಯಲ್ಲೂ ಇದು ಲಭ್ಯವಿರುತ್ತದೆ. ಮನೆಯಲ್ಲಿ ಒಳಾಂಗಣದ ಅಳತೆಗೆ ತಕ್ಕಂತೆ ಮಾಡಿಕೊಡುವ ಸೌಕರ್ಯವೂ ಇರುತ್ತದೆ. ಗ್ರಾಹಕರ ಅವಶ್ಯಕತೆಗೆ ತಕ್ಕಂತೆ ರೂಪಿಸುವ ನುರಿತ ಕಸುಬುದಾರರೂ ಇರುತ್ತಾರೆ. ಮನೆಯ ಬಾಲ್ಕನಿ, ಮನೆ ಮುಂದಿನ ಕೈ ತೋಟದ ನಡುವಿನ ಹುಲ್ಲು ಹಾಸಿನಲ್ಲಿ ಕೂಡ ಇವುಗಳನ್ನು ಜೋಡಿಸಿ ಇರಿಸುವ ಸೌಲಭ್ಯ ಇರುತ್ತದೆ. ಇನ್ನು ಕೆಲವರು ಈ ಪೀಠೋಪಕರಣವನ್ನು ಪ್ರತ್ಯೇಕ ಚಾವಣಿ ಮೂಲಕ ಜೋಡಿಸಿಕೊಳ್ಳುತ್ತಾರೆ.

ಬಿದಿರಿನಿಂದ ಮಾಡಿದ ಜೀಕು ಉಪಕರಣ ಇಂದಿನ ದಿನಮಾನದಲ್ಲಿ ಹೆಚ್ಚಿನ ಬೇಡಿಕೆ ಉಳ್ಳದ್ದಾಗಿದೆ. ತೂಕ ತಾಳಿಕೊಳ್ಳಬಲ್ಲ ಗಟ್ಟಿಯಾದ ಸ್ಪ್ರಿಂಗ್‌ಗೆ ಜೋತುಹಾಕಿದ ಬಿದಿರಿನ ಜೀಕು ಕುರ್ಚಿಯ ಮೇಲೆ ಒಬ್ಬರೇ ಕುಳಿತುಕೊಳ್ಳುವುದನ್ನು ಅನೇಕ ಮನೆಗಳಲ್ಲಿ ಕಾಣಬಹುದು. ತೆರೆದ ಬಾಲ್ಕನಿ, ಕೋಣೆಗಳು ಹೀಗೆ ಇದು ಮನೆಯ ಒಳಾಂಗಣದಲ್ಲಿ ಎಲ್ಲಿ ಬೇಕಾದರೂ ಇದ್ದು ಸೌಂದರ್ಯಕ್ಕೆ ಹೆಚ್ಚಿನ ಮೆರುಗು ನೀಡಬಹುದಾಗಿದೆ. ಲೋಹದ ಜೀಕು ಕುರ್ಚಿಯನ್ನು ಕಡಿಮೆ ಬೆಲೆಯಲ್ಲಿ ಮಾಡಿಸಿ ಅದಕ್ಕೆ ಸೊಗಸಾದ ಕುಷನ್ ದಿಂಬುಗಳು ಅಥವಾ ಮೆತ್ತೆಯಿಂದ ಅಲಂಕರಿಸುವುದು ಇನ್ನು ಕೆಲವರ ಆಯ್ಕೆ. ಇಂಥ ಜೀಕು ಉಯ್ಯಾಲೆಗಳಲ್ಲಿ ಕೂರುವುದರಿಂದ ಯೌವನ ಮರುಕಳಿಸುತ್ತದೆ ಮತ್ತು ಖುಷಿಯಾಗುತ್ತದೆ ಎನ್ನುವುದು ಅನೇಕ ಗ್ರಾಹಕರ ಅಭಿಪ್ರಾಯ.

ಮುಂಜಾವಿನ ವಾಯುವಿಹಾರ ದಿನದ ಶುಭಾರಂಭಕ್ಕೆ ಉತ್ತಮ ಸಾಧನ

● ಸಿದ್ದಣ್ಣ ಸಿ. ವಾಡೇದ, ಕಲಬುರಗಿ

ಮುಂಜಾವಿನಲ್ಲಿ ವಾಯುವಿಹಾರಕ್ಕೆ ಹೊರಡುವುದು ಎಂದರೆ ಯಾರಿಗೆ ಇಷ್ಟವಿಲ್ಲ ಹೇಳಿ; ಸ್ವಚ್ಛವಾದ ವಾತಾವರಣದಲ್ಲಿ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಾ, ಶುದ್ಧಗಾಳಿಯನ್ನು ಸೇವಿಸುತ್ತಾ ವಿಹರಿಸುವಾಗಿನ ಖುಷಿಯೇ ಬೇರೆ ಅಲ್ಲವೇ? ದಿನವೂ ಎದುರಾಗುವ ಹಲವಾರು ಕೆಲಸಗಳು ಮತ್ತು ಒತ್ತಡದ ಬದುಕು ನಮ್ಮನ್ನು ಹೈರಾಣು ಮಾಡುವುದರಲ್ಲಿ ಎರಡು ಮಾತಿಲ್ಲ. ಆದರಿಂದ ಹೊರಬಂದು ಉತ್ಸಾಹಭರಿತ ಮನಸ್ಸು ಕಟ್ಟಿಕೊಳ್ಳುವ ಸಮಯವೇ ಮುಂಜಾನೆ. ಹೀಗಾಗಿ, ದಿನದ ಶುಭಾರಂಭವಾಗಲು ಇದೊಂದು ಉತ್ತಮ ಕಾಲಾವಧಿಯಾಗಿರುತ್ತದೆ.

ನಸುಕಿನ ಸಮಯದಲ್ಲಿ ನಿದ್ದೆಯಿಂದ ಏಳಲು ಮನಸ್ಸು ಕೊಂಚ ಆಲಸ್ಯ ತೋರುವುದು ಸಹಜ.



ಆದರೆ ಎದ್ದು ವಾಯುವಿಹಾರಕ್ಕೆ ಹೊರಟಾಗ ಅದೆಲ್ಲ ಮಾಯವಾಗಿ ಚೈತನ್ಯದ ಚಿಲುಮೆ ಉಕ್ಕಿ ಹರಿಯುತ್ತದೆ. ಇದು ದಿನಪೂರ್ತಿ ನಮ್ಮನ್ನು ಕ್ರಿಯಾಶೀಲವಾಗಿ ಇಡುವ ಒಂದು ಔಷಧಿಯೇ ಸರಿ. ಹಲವು ಬಾರಿ ಪ್ರಕೃತಿಯಿಂದ ದೂರವಾಗಿ ನಮ್ಮ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಮುಳುಗಿ, ಮನಸ್ಸು ಭಾರ ಎನಿಸುವುದೂ ಉಂಟು. ಆದರೆ, ಬೆಳಗಿನ ಸೂರ್ಯೋದಯವನ್ನು ಕಣ್ತುಂಬಿಕೊಳ್ಳುತ್ತಾ ಒಂದಷ್ಟು ವಾಕ್ ಮಾಡಿದರೆ ಎಲ್ಲವೂ ನಿರಾಳ ಹಾಗೂ ಆನಂದ ಎನಿಸುವುದರಲ್ಲಿ ಸಂಶಯವಿಲ್ಲ.

ಹೆಜ್ಜೆಯ ಮೇಲೆ ಹೆಜ್ಜೆಯ ಹಾಕುತ ತಣ್ಣನೆ ಗಾಳಿಯ ನಡುವೆ ತೂರಿಕೊಂಡು ನಡೆಯುವಾಗ, 'ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ! ಜಗ್ಗದೆಯೆ ಕುಗ್ಗದೆಯೆ, ಹಿಗ್ಗಿ ನಡೆ ಮುಂದೆ' ಎಂಬ ವಿಶ್ವಮಾನವ ಸಂದೇಶ ಮನದಲಿ ಸುಳಿಯದೆ ಇರದು, ಹೊಸ ಚಿಂತನೆ ಮೂಡದೆ ಇರದು. ನಮ್ಮ ದಿನನಿತ್ಯದ ಚಟುವಟಿಕೆಗಳ ಬಗ್ಗೆ ಮೆಲುಕುಹಾಕುತ್ತಾ, ತಪ್ಪು ಒಪ್ಪುಗಳ ವಿಮರ್ಶೆಯನ್ನು ಮಾಡುವ ಮನಸ್ಸು, ಹೊಸ ಆಶಯದೊಂದಿಗೆ ನುಗ್ಗಿ ನಡೆಯುವ ಭರವಸೆಯನ್ನು ಕಾಣುವುದು ಈ ಸಂದರ್ಭದಲ್ಲೇ. 'ಸದೃಢ ದೇಹದಲ್ಲಿ ಸದೃಢ ಮನಸ್ಸು' ಇರುವಂತೆ ದೈಹಿಕ ಆರೋಗ್ಯದ ಜತೆ ಜತೆಗೆ ಮಾನಸಿಕ ಆರೋಗ್ಯದ ಅವಳಿ ಲಾಭ ಪಡೆಯುವ ಸುಸಂದರ್ಭವಿದು.

ಮುಂಜಾನೆಯ ವಾಕ್ ಮಾಡುವಾಗ ಸಮುದಾಯದೊಂದಿಗೆ ಬೆರೆಯುವ, ಸಮುದಾಯವನ್ನು ಅರಿಯುವ ಅವಕಾಶ ದೊರೆಯುತ್ತದೆ. ಹಾಗೆಯೇ ವಾಕ್ ಮುಗಿಸಿಕೊಂಡು ತರಕಾರಿ, ದಿನಸಿ ಇತ್ಯಾದಿಗಳನ್ನು ಮನೆಗೆ ಕೊಂಡೊಯ್ಯುವುದು ಆರೋಗ್ಯದ ದೃಷ್ಟಿಯಿಂದ ಲಾಭದಾಯಕ ಆಗಿದೆ ಎಂದರೆ ತಪ್ಪಾಗಲಾರದು. ಆರೋಗ್ಯವಂತ ನಾಗರಿಕರು ದೇಶದ ದೊಡ್ಡ 'ಆಸ್ತಿ' ಆಗಿರುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. 'ಆರೋಗ್ಯವೇ ಭಾಗ್ಯ' ಎಂದು ಭಾವಿಸಿ ದಿನಾಲೂ ವಾಕಿಂಗ್, ವ್ಯಾಯಾಮ, ಯೋಗಾ ಭ್ಯಾಸದಂಥ ಆರೋಗ್ಯಕರ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಆಗಲೇ ದೇಹವೂ ಫಿಟ್, ಮನಸ್ಸೂ ಫಿಟ್...!

ಚಿತ್ತವಿಹಾರ

ನಿದ್ದೆಗೊಂದು ಸರಳಸೂತ್ರ

ನಿದ್ದೆ ಮಾಡಿರೆಂದು ರವಿಯು
ಎದ್ದು ಪಯಣ ಮುಗಿಸಿ ಇಳಿದ,
ಮೊದ್ದು ಜನರೆ ಬರಿದೆ ಇಂತು
ಬುದ್ಧಿಗೆಟ್ಟು ಬಳಲುತಿಹಿರಿ.

ಕದಿವ ನಿದಿರೆ ಯೋಚನೆಗಳು
ಕುದಿವ ಮನಕೆ ತೃಪ್ತಿಯಿರದೆ,
ಉದರದುರಿಯು ಅಟ್ಟುತಿಹುದು
ಸದರವೇನು ಶಾಂತಿಗೆಡೆಯೆ.

ನೋವಿರದಿಹ ಬಾಳದೆಲ್ಲಿ
ಬೇವು ಬೆಲ್ಲ ಬೆಸೆದೆಯಿರಲು,
ಅವಿತುಕೊಂಡು ಮೇಲೆಕೆಳಗೆ
ಕವಿದು ಮೇಲಕೆರಗುತಿಹವು.
ಸಾವು ಬರದೆಯಿರದು ಬರಿದೆ
ಸಾವ ನೆನದು ಭೀತಿಗೊಳಲು,
ಸೋವಿಯಲ್ಲ ಮನುಜ ಜನುಮ
ಭಾವಿಸುವೊಡೆ ಶ್ರೇಯಕಲ್ತೆ.

ಹಿಂದದೇನನರಿತರಿಲ್ಲ
ಮುಂದೆ ಬಹುದ ಕಾಂಬರಿಲ್ಲ,
ಇಂದು ಈಗಲೀಗ ಹಿಡಿದು
ಚೆಂದ ಬಾಳದಿರಲು ಕೆಟ್ಟೆ.

ಬದ್ಧವೈರಿ ವೃಂದವನ್ನು
ಒದ್ದು ಭ್ರಮೆಯ ನೀಗಿಕೊಂಡ,
ಶುದ್ಧ ಹಾಲಿನಂಥ ಮನವೆ
ಮದ್ದು ಗಾಢ ನಿದ್ದೆ ಖಚಿತ.
ಜತೆಗೆ ಕಾಯದೊಳಗು ಹೊರಗು
ಸತತ ಸೌಖ್ಯದಿಂದಲಿರಲು,
ಹಿತದ ಮಿತದ ಅನ್ನಪಾನ
ವಿತತದಂಗ ಸಾಧನೆಗಳು.

ಇಷ್ಟು ಸಾಧಿಸಿರಲು ಜಗದಿ
ಕಷ್ಟ ಭವವ ದಾಟಿಸೆಂದು,
ಇಷ್ಟ ಮನದಿ ಶರಣೆನ್ನುವ
ಹೃಷ್ಟಮನಕೆ ನಿದಿರೆ ಬಂಧು.

● **ನಾಗರತ್ನ ಸಾಲಗಾಮೆ**

ಕಣಕಣದೆ ಭಾವನೆ, ಕಲೆತಿಹುದು ಕಾಣದೆ?

● ಮಾಯಾ ಬಾಲಚಂದ್ರ

ನಮ್ಮಲ್ಲಿನ ರೋಗನಿರೋಧಕ ಶಕ್ತಿಗೂ, ಆಲೋಚನಾಕ್ರಮಕ್ಕೂ ನೇರ ಸಂಬಂಧವಿದೆ ಎನ್ನುವುದು ಎಲ್ಲರೂ ಒಪ್ಪುವ ವಿಚಾರ. ಅದಕ್ಕಾಗಿಯೇ, ರೋಗನಿರೋಧಕ ಶಕ್ತಿ ಕಡಿಮೆಯಿದ್ದು ಚಿಕಿತ್ಸೆ ಪಡೆದುಕೊಳ್ಳುತ್ತಿರುವ ರೋಗಿಗಳಿಗೆ ವಿಶ್ರಾಂತಿ ಪಡೆಯುವಂತೆ ವೈದ್ಯರು ಸೂಚಿಸುತ್ತಾರೆ. ಈ ವಿಶ್ರಾಂತಿಯು ದೇಹಕ್ಕೆ ಮಾತ್ರವಲ್ಲದೆ ಮನಸ್ಸಿಗೂ ಸಂಬಂಧಿಸಿರುತ್ತದೆ.

ರೋಗವನ್ನು ದಮನಿಸುವ ಜೀವಕೋಶಗಳು, ಆಲೋಚಿಸುವ ಜೀವಕೋಶಗಳೂ ಹೌದು. ನಮ್ಮಲ್ಲಿ ಮೂಡುವ ಅನುಭೂತಿಗಳು ನ್ಯೂರೋ ಪೆಪ್ಟೈಡ್ ಕಣಗಳಾಗಿ ಪರಿವರ್ತಿತವಾಗುತ್ತವೆ. ಇವು ಕೇವಲ ಮಿದುಳಿನ ಕುಳಿಗಳಲ್ಲಿ ಮಾತ್ರವಲ್ಲದೆ, ಶರೀರದ ಇತರ ಜೀವಕೋಶಗಳ ಭಿತ್ತಿಗೂ ಅಂಟಿಕೊಳ್ಳುವ ಸಾಮರ್ಥ್ಯವನ್ನು ಪಡೆದಿವೆ. ರೋಗನಿರೋಧಕ ಜೀವಕೋಶಗಳಲ್ಲೂ ಈ ಯೋಚನೆಗಳನ್ನು ಗ್ರಹಿಸುವ ಸಾಮರ್ಥ್ಯವಿದೆ. ಇವು ನಮ್ಮಲ್ಲಿ ಮೂಡುವ ಎಲ್ಲಾ ಆಲೋಚನೆಗಳಿಗೂ, ಗ್ರಹಿಕೆಗೆ ಬರುವ ಎಲ್ಲಾ ಅನುಭೂತಿಗಳಿಗೂ ಕಿವಿಯಾಗಿರುತ್ತವೆ. ಸಣ್ಣ ಕರುಳು, ಹೃದಯದ ಗೋಡೆ ಮುಂತಾದ ಎಲ್ಲೆಡೆಯೂ ಈ ಕಣಗಳಿವೆ ಎಂದು ಜೀವವಿಜ್ಞಾನಿಗಳು ಗುರುತಿಸುತ್ತಾರೆ.

ಚಿಂತನೆಯ ಸಂದರ್ಭದಲ್ಲಿ ಮಿದುಳು ಬಿಡುಗಡೆ ಮಾಡುವ ರಾಸಾಯನಿಕವನ್ನು ಇವೆಲ್ಲವೂ ತಯಾರಿಸುತ್ತವೆ. ಅಂದರೆ, ಆಲೋಚನಾಕ್ರಮವು ಕೇವಲ ಮಿದುಳಿನಲ್ಲಷ್ಟೇ ನಡೆಯುವುದಿಲ್ಲ ಮತ್ತು ದೇಹದ ಉಳಿದ ಅಂಗಗಳು ಆಲೋಚನೆಯಿಂದ ದೂರ ಉಳಿದಿಲ್ಲ ಎಂದರ್ಥ. ನೇರವಾಗಿ ಕರುಳಿನ ಸಂಬಂಧವನ್ನೇ ಹೊಂದಿರುವ ತನ್ನ ಮಗುವಿನ ಬಗ್ಗೆ ತಾಯಿಯಲ್ಲಿ ಉದಿಸುವ ಭಾವನೆಗಳು, ಕರುಳಿನಿಂದಲೇ ಮೂಡಿ ಮಗುವಿನೆಡೆಗೆ ಹರಿಯಬಹುದು. ಅದಕ್ಕೇ ಇರಬೇಕು ಅದನ್ನು 'ಕರುಳಿನ ಕೂಗು' ಎನ್ನುವುದು. ಇನ್ನು, ಪ್ರೇಮಿಗಳ ಭಾವ ಹೊಮ್ಮಿ ಗೀತೆಯಾಗುವುದು ಹೃದಯದಿಂದಲೇ ಮತ್ತು ಆ ಹೃದಯಗೀತೆ ತಲುಪುವುದು ಇನ್ನೊಂದು ಹೃದಯದ ಕಿವಿಯನ್ನೇ. ಹೃದಯ ಮತ್ತು ಬೇರೆಲ್ಲ ಅಂಗಗಳಲ್ಲೂ ವಿಚಾರಮಂಥನ ನಡೆದು, ಆ ಮಂಥನಕ್ಕೆ ತಕ್ಕಂಥ ಸ್ಪಂದನೆಯನ್ನು ಅವು ನೀಡುತ್ತವೆ. ಗಾಢನಿದ್ರೆಯಲ್ಲಿ ಇದ್ದವರಿಗೆ ಸೂಜಿಯಿಂದ ಚುಚ್ಚಿದರೆ, ಹಾಗೆ ಚುಚ್ಚಿಸಿಕೊಂಡ ಭಾಗವು ನೋವಿನಿಂದ ಚೀರಿ ಎಚ್ಚಿಸಿಬಿಡುತ್ತದೆ. ಈ ಸಂಕೇತಗಳಿಗೆ ಅನುಗುಣವಾಗಿ ಅದೇ ಕ್ಷಣದಲ್ಲಿ ಮಿದುಳಿನಲ್ಲೂ ಅಂಥದೇ ರಾಸಾಯನಿಕಗಳು ಉತ್ಪತ್ತಿಯಾಗುತ್ತವೆ. ಶರೀರದ ಬೇರೆ ಬೇರೆ ಅಂಗ ಗಳು ಏಕಕಾಲದಲ್ಲಿ ಜಾಗೃತವಾಗಿ ಇಂಥದೇ ಕಣ ಗಳನ್ನು ಬಿಡುಗಡೆ ಮಾಡುತ್ತವೆ. ಮಿದುಳು ನೀಡುವ ರೀತಿಯಲ್ಲೇ ದೇಹದ ಪ್ರತಿಕಣವೂ ಪ್ರಚೋದನೆಯನ್ನು ನೀಡುತ್ತದೆ. ಅಲ್ಲಿಗೆ 'ಪ್ರಜ್ಞೆ'ಯು ಕೇವಲ ಮಿದುಳಿಗೆ ಸೀಮಿತವಾಗದೆ, ಸಂಪೂರ್ಣ ಶರೀರವನ್ನು ಆವರಿಸಿದೆ ಎಂದಾ ಯಿತು. ಈ 'ಪ್ರಜ್ಞೆ'ಯು ಶರೀರವನ್ನು ಮೀರಿ ಸಮಷ್ಟಿಯನ್ನು ಆವರಿಸಿರುವುದನ್ನು, ಆಧುನಿಕ ವಿಜ್ಞಾನ ಮತ್ತು ಅಧ್ಯಾತ್ಮ ಎರಡೂ ಒಮ್ಮತದಿಂದ ಒಪ್ಪಿಕೊಳ್ಳುತ್ತವೆ. ಶರೀರದೊಳಗಿನ 'ಪ್ರಜ್ಞೆ'ಯು ಹೊರಗಿನ 'ಪ್ರಜ್ಞೆ'ಗೆ ಸದಾ ಸ್ಪಂದಿಸುತ್ತಿರುತ್ತದೆ. ಹಾಗೆಂದ ಮಾತ್ರಕ್ಕೆ ಎರಡೂ ಪ್ರಜ್ಞೆಗಳು ಬೇರೆ ಬೇರೆ ಅಂತಲ್ಲ; ಅದು ಎಲ್ಲೆಡೆ ಹರವಿಕೊಂಡ, ಅಖಂಡವಾದ ಒಂದೇ 'ಪ್ರಜ್ಞೆ'. ನಮ್ಮ ಭೌತಿಕ ಸ್ಥಿತಿಯ ಅಭಿವ್ಯಕ್ತಿಯಾಗುವುದು ಈ ಪ್ರಜ್ಞಾಶಕ್ತಿ ಯಿಂದಾಗಿಯೇ. ಜೀವವಿಜ್ಞಾನಿಗಳು ಕಂಡುಕೊಂಡ ಈ ಎಲ್ಲ ವಿಚಾರಗಳಿಂದ ನಾವು ತಿಳಿಯ ಬಹುದಾದ ಸತ್ಯ ವೆಂದರೆ, ನಮ್ಮ ದೇಹದ ಪ್ರತಿ ಕಣದಲ್ಲೂ ಮಾನಸಿಕ ಪ್ರಕ್ರಿಯೆಯು ನಡೆಯುತ್ತಲೇ ಇರುತ್ತದೆ. ಇದರಿಂದ ಉದ್ಭವವಾಗುವ ಭಾವನೆಗಳಿಗೆ ತಕ್ಕಂತೆ ನಮ್ಮ ಶರೀರದ ಕಣಕಣಗಳು ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತಲೇ ಇರುತ್ತವೆ. ನಮ್ಮ ಮನಸ್ಸು ಶಾಂತವಾಗಿದ್ದಾಗ ಕಣಕಣಗಳಿಂದಲೂ ಬಿಡುಗಡೆಯಾಗುವ 'ವೇಲಿ ಯಂ' ಎಂಬ ರಾಸಾಯನಿಕದಿಂದಾಗಿ ಜೀವಕೋಶ ಗಳು ನಿರಾಳವಾಗಿ, ಹೆಚ್ಚು ಕ್ಷಮತೆಯಿಂದ ಕಾರ್ಯೋನ್ಮುಖವಾಗುತ್ತವೆ. ಒತ್ತಡರಹಿತ ಮಾನಸಿಕ ಸ್ಥಿತಿಯಿಂದ ನಿರ್ವಹಿಸುವ ಕೆಲಸದಿಂದಾಗಿ ಯಶಸ್ಸಿನ ದಾರಿ ತೆರೆದುಕೊಳ್ಳುತ್ತದೆ.

ಪುಟ್ಟ ಕಥೆಗಳು

ಬೆಳಕಿನ ಕೆಳಗೆ ಕತ್ತಲು

ಇಡೀ ಊರಿಗೆ ಉಪದೇಶ ಮಾಡುತ್ತ ದೊಡ್ಡ ಮನುಷ್ಯ ಎನಿಸಿಕೊಂಡಿದ್ದ ರಾಜಣ್ಣನ ಮನೆಯಲ್ಲಿ ನಿತ್ಯ ಕಿತ್ತಾಟ, ಜಗಳ, ಮನಸ್ತಾಪ ಜರುಗುತ್ತಿರುವುದು ಜನರ ಗಮನಕ್ಕೆ ಬಂದ ಮರುಗಳಿಗೆಯಲ್ಲೇ ಆತ ಅವರ ಎದುರು ಸಣ್ಣವನಾಗಿದ್ದ.

ಉಕ್ಕಿ ಬಂದ ಕಣ್ಣೀರು

ಅದೊಂದು ದಿನ ವೃದ್ಧಾಶ್ರಮದಲ್ಲಿ ಮಾಧವರಾಯರು ಆರಾಮಾಗಿ ಊಟ ಮಾಡುತ್ತಿದ್ದಾಗ, ಅವರ ಸೆಲ್ ಫೋನ್‌ಗೆ ಮಗನಿಂದ Wish you happy father's day ಎನ್ನುವ ಸಂದೇಶ ಬಂತು. ಅದನ್ನು ಓದುತ್ತಿದ್ದಂತೆ ರಾಯರಿಗೆ ಕಣ್ಣೀರು ಉಕ್ಕಿ ಬಂದು, ಮಾಡುತ್ತಿದ್ದ ಊಟವನ್ನು ಅರ್ಧಕ್ಕೇ ನಿಲ್ಲಿಸಿ ಎದ್ದುಹೋದರು.

ಒಳ ಮನಸ್ಸು

ಆತ ತುಂಬಾ ಶ್ರಮವಹಿಸಿ ಕೂಡಿಟ್ಟಿದ್ದ ಒಂದಿಷ್ಟು ಹಣದಿಂದ ಕಟ್ಟಿಕೊಂಡ ಪುಟ್ಟ ಮನೆಯು, ನಿರಂತರ ಸುರಿಯುತ್ತಿದ್ದ ಮಳೆಗೆ ಸಿಲುಕಿ ಆತನೆದುರೇ ಕುಸಿದುಹೋಯಿತು. ಇದನ್ನು ಕಂಡು ಕಂಬನಿ ಸುರಿಸುತ್ತ ಕುಳಿತಾಗ ಆತನ ಒಳಮನಸ್ಸು, 'ಅಯ್ಯೋ ಹುಚ್ಚಪ್ಪಾ, ಕುಸಿದಿದ್ದು ಮನೆ ಅಷ್ಟೇ, ಮನ ಅಲ್ಲವಲ್ಲ' ಎಂದಿತು.

● **ಅರವಿಂದ ಜಿ. ಜೋಷಿ,** ಮೈಸೂರು

ಎಲ್ಲಿ ಮರೆಯಾದೆ ಮರಗುಣಿ...

● ವಿ.ಎಸ್. ಕಳಸೇಶ್ವರ, ಬೆಂಗಳೂರು

ಈಗೆಲ್ಲಾ, ಹಿತ್ತಾಳೆ-ತಾಮ್ರದ ಪಾತ್ರೆಗಳ ಜಾಗವನ್ನು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳೂ, ರುಬ್ಬುವ ಕಲ್ಲನ್ನು ಮಿಕ್ಸರ್/ಗ್ರೈಂಡರ್‌ಗಳೂ ಆಕ್ರಮಿಸಿರುವಂತೆ ಹಳೆಯ ಸ್ವರೂಪದ ಕೆಲವು ವಸ್ತುಗಳ ಬದಲಿಗೆ ಹೊಸ ತೆರನಾದವು ಬಂದಿವೆ. ನಮ್ಮ ಬಾಲ್ಯದಲ್ಲಿ ಕಂಡ ಎಷ್ಟೋ ವಸ್ತುಗಳು ಇಂದು ಕಾಲಚಕ್ರದಡಿ ಸಿಲುಕಿ ನಶಿಸಿಹೋಗಿವೆ. ಅಂಥ ಒಂದು ವಸ್ತುವೆಂದರೆ 'ಮರಗುಣಿ' ಅಥವಾ 'ಮರಗಿಣಿ'. ಮಲೆನಾಡಿನಲ್ಲಿ ಮಾತ್ರ ಇದರ ಸುಳಿವು-ಉಳಿವು ಎಲ್ಲಾ.

ಇದನ್ನು 'ಚಿಟ್ಟೆ' ಎಂದೂ ಕರೆಯುತ್ತಾರೆ. ಸರಳ ಅರ್ಥದಲ್ಲಿ ಇದನ್ನು 'ಬಿದಿರಿನ ಗಂಟೆ' ಎನ್ನಬಹುದು. ಮಲೆನಾಡಿನ ಗುಡ್ಡ-ಕಾಡುಗಳಲ್ಲಿ ಮೇಯುತ್ತಿರುವ ಗಿಡ್ಡ ತಳಿಯ ದನಕರುಗಳ ಕೊರಳಲ್ಲಿ ವಿವಿಧ ಗಾತ್ರದ ಮರಗುಣಿಯನ್ನು ನೋಡಬಹುದು, ಅದರ ಇಂಪಾದ ನಾದವನ್ನು ಕೇಳಿ ಸುಖಿಸಬಹುದು. ಇದು ಅಂಗಡಿಗಳಲ್ಲಿ ಮಾರಾಟಕ್ಕೆ ಸಿಗುವ ವಸ್ತುವಲ್ಲ, ಬದಲಿಗೆ ದನವನ್ನು ಮೇಯಿಸುವ ಸಮಯದಲ್ಲಿ ದನಗಾಹಿಗಳು ಮುತುವರ್ಜಿಯಿಂದ ತಯಾರಿಸುವ ಬಿದಿರಿನ ಗಂಟೆ.

ಬಿದಿರಿಗೂ ದನಕರುಗಳಿಗೂ ಅನಾದಿಕಾಲದಿಂದಲೂ ಇರುವ ನಂಟು ನಮಗೆಲ್ಲ ತಿಳಿದೇ ಇದೆ. ಬಿದಿರಿನ ಕೊಳಲಿನ ನಾದಕ್ಕೆ ಗೋವುಗಳು ತಲೆದೂಗುತ್ತಿದ್ದುದನ್ನು ಶ್ರೀಕೃಷ್ಣನ ಕಥೆಯಲ್ಲಿ ಕಾಣಬಹುದು. ಬಿದಿರಿನಲ್ಲಿ ಸಣ್ಣ ಕೊಳವೆಯಂತಿರುವ 'ವಾಟೆ ಬಿದಿರು' ಎಂಬುದೊಂದು ಪ್ರಭೇದವಿದೆ. ಇದು ಕೊಳಲು, ಉದ್ದನೆಯ ದೋಟಿಕೋಲು, ಬುಟ್ಟಿ ಇತ್ಯಾದಿಗಳ ತಯಾರಿಕೆಗೆ ಉಪಯುಕ್ತ. ಮಲೆನಾಡು ಪ್ರದೇಶದಲ್ಲಿ ವಾಟೆ ಬಿದಿರು ಅಪರೂಪ, ದಪ್ಪನೆಯ ಬಿದಿರು ಸಮೃದ್ಧ. ಭದ್ರಾನದಿಯ ಇಕ್ಕೆಲಗಳಲ್ಲೂ ಬಿದಿರುಡಿ (ಬಿದಿರು ಮೆಳೆ) ಹೇರಳವಾಗಿ ಬೆಳೆಯುತ್ತದೆ. ಬಾಳೆಯ ದಿಂಡಿನಂತಿರುವ ಇದರ ಚಿಗುರುಸುಳಿಯನ್ನು 'ಕಳಲೆ' ಎಂದು ಕರೆಯುತ್ತಾರೆ; ಪಲ್ಯ-ಹುಳಿ ಇತ್ಯಾದಿಗಳನ್ನು ತಯಾರಿಸುವ ತರಕಾರಿಯಾಗಿ ಇದನ್ನು ಬಳಸಲಾಗುತ್ತದೆ. ಬಲಿತ ಬಿದಿರಿನ ದಪ್ಪನೆಯ ತುಂಡಿನಿಂದ ಮರಗುಣಿಯನ್ನು ತಯಾರಿಸುತ್ತಾರೆ.

ದಪ್ಪನೆಯ ಬಿದಿರಿನ ತುಂಡಿನ ಗಣ್ಣಿನ ಭಾಗದಿಂದ 2-3 ಇಂಚು ಕೆಳಗೆ ಸುಮಾರು ಎರಡು ಬೆರಳಿನಷ್ಟು ಅಗಲದ ಭಾಗವನ್ನು ಎರಡೂ ಪಾರ್ಶ್ವಗಳಲ್ಲಿ ಸಮಾನಾಂತರವಾಗಿ ಕತ್ತರಿಸಿ ಸೀಳಿ ತೆಗೆದರೆ, ಮರಗುಣಿಯ ಹಂದರ

ಸಿದ್ಧವಾದಂತೆ. ಅದರ ಗಣ್ಣಿನ ಭಾಗದಲ್ಲಿ ಹಗ್ಗವನ್ನು ಕಟ್ಟಲು ಅನುಕೂಲವಾಗುವಂತೆ ಗೊಣೆ ಕೆತ್ತಿ, ಎರಡೂ ಪಕ್ಕದಲ್ಲೂ ಮರದ ಲೋಲಕಗಳನ್ನು ನೇತುಹಾಕಿದಾಗ ಮರಗುಣಿ (ಕೊರಳುಗಂಟೆ) ಸಿದ್ಧವಾದಂತೆ. ಲೋಲಕಗಳು ಬಿದಿರಿನ ಅಂಡೆಗೆ ಬಡಿದಾಗ, ಈ ಗಂಟೆಯ ಆಳ-ಅಗಲಕ್ಕೆ ಅನುಗುಣವಾಗಿ ಇಂಪಾದ ನಾದ ಹೊಮ್ಮುತ್ತದೆ. ಲೋಹದ ಗಂಟೆಯೊಳಗೆ ಒಂದೇ ಲೋಲಕವಿದ್ದರೆ, ಈ ಮರಗುಣಿಯು ಡಮರುಗದಂತೆ ಎರಡು ಪಕ್ಕದಲ್ಲೂ ಒಂದೊಂದು ಲೋಲಕವಿರುತ್ತದೆ (ಮರಗುಣಿಯನ್ನು 'ನೀನಾಸಂ'ನಂಥ ರಂಗ ತರಬೇತಿ ಸಂಸ್ಥೆಗಳಲ್ಲಿ ರಂಗಪ್ರಯೋಗಗಳಲ್ಲಿ ತಾಳವಾದ್ಯಗಳೊಂದಿಗೆ ಬಳಸುವುದುಂಟು).

ಈ ಮರಗುಣಿಯನ್ನು ಕುತ್ತಿಗೆಗೆ ಕಟ್ಟಿಸಿಕೊಂಡ ದನಕರುಗಳು ಹುಲ್ಲು ಮೇಯುವಾಗ, ಓಡಾಡುವಾಗ ಲಯಬದ್ಧವಾಗಿ ಗಂಟೆ ಹೊಡೆದಂತೆ ಶಬ್ದ ಬರುತ್ತದೆ. ದನಕರುಗಳ ಮಂದೆಯಲ್ಲಿ ಹಲವು ಗಾತ್ರದ ಮರಗುಣಿಗಳಿಂದ ಒಟ್ಟಿಗೆ ನಾದವು ಹೊಮ್ಮಿದಾಗ ಕೇಳಲು ತುಂಬಾ ಮಧುರವಾಗಿರುತ್ತದೆ. ಹಿಂದೆಲ್ಲಾ ಬಹುತೇಕ ಕೃಷಿಕರ ಮನೆಯಲ್ಲಿ ದನ-ಕರುಗಳು ಇರುತ್ತಿದ್ದವು, ಅವನ್ನು ಕಾಡುಮೇಡುಗಳಲ್ಲಿ ಅಲೆಯುವುದಕ್ಕೆ ಬಿಡುತ್ತಿದ್ದರು. ಅಂಥ ವೇಳೆ ಒಂದೊಮ್ಮೆ ಯಾವುದಾದರೂ ದನ-ಕರು ತಪ್ಪಿಸಿಕೊಂಡರೆ, ಅವುಗಳ ಕೊರಳಲ್ಲಿರುವ ಮರಗುಣಿಯ ದನಿಯಿಂದ ಅವನ್ನು ಹುಡುಕುವುದು ಸುಲಭವಾಗುತ್ತಿತ್ತು. ಆದರೆ ಬರುಬರುತ್ತಾ ಇಂಥ ಅನುಭವಗಳೆಲ್ಲ ಅಪರೂಪವಾಗಿದೆ. 'ಕಾಡು' ಕಡಿತಕ್ಕೊಳಗಾಗಿ 'ನಾಡು' ಆಗುತ್ತಿದೆ. ದನ-ಕರುಗಳು ಸ್ವಚ್ಛಂದವಾಗಿ ತಿರುಗಾಡಿಕೊಂಡು ಮೇಯುತ್ತಿದ್ದ ಗೋಮಾಳ/ಹುಲ್ಲುಗಾವಲುಗಳು ಕಡಿಮೆಯಾಗಿವೆ. ಕೃಷಿ ಪದ್ಧತಿಯಲ್ಲೂ ಸಾಕಷ್ಟು ಬದಲಾವಣೆಯಾಗಿದೆ. ಕೃಷಿ/ಗೋಪಾಲನೆ ಕಡಿಮೆಯಾಗುತ್ತಿದೆ. ಪರಿಣಾಮವಾಗಿ ದನ-ಕರುಗಳ ಕೊರಳಲಂಕಾರವಾಗಿ ಕೇಳುತ್ತಿದ್ದ ಮರಗುಣಿಯ ನಾದವೂ ಅಪರೂಪವಾಗಿದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

3. ಹಣವಿರುವ ಸೆರೆಮನೆ (3)
5. ಕೆಳಕ್ಕೆ ಬಿದ್ದವನು (3)
7. ಕಠಿಣವಾದ ಪಠ್ಯ ವಿಷಯ (3)
9. ದಣಿವಾದರೂ ಅಡುಗೆ ಮಾಡಿದ ಬಾಣಸಿಗ (4)
11. ರಂಗ ಹೋಗಿರುವುದು ಯುದ್ಧಭೂಮಿಗಾ? (4)
13. ಹಳದಿ ರೋಗದಲ್ಲಿದೆ ಸರ (3)
14. ಬಾಯಿಗೆ ಕಹಿಯಾದ ಒಂದು ತರಕಾರಿ (3)
15. ಮೋಸ, ವಂಚನೆಗೆ ಮತ್ತೊಂದು ಹೆಸರು (4)
16. ಹಕ್ಕಿಗಳ ಮಧುರವಾದ ಧ್ವನಿ (4)
18. ವಸ್ತುಗಳನ್ನು ಭದ್ರವಾಗಿಡುವ ಬೀರು (3)
20. ಕರುವಿನ ನಡುವೆ ಇದೆ ಬೆನ್ನೆಲುಬು (3)
22. ಗುಂಪಾಗಿ ಮಾಡಿದ ಎಣಿಕೆ (3)

ಮೇಲಿಂದ ಕೆಳಕ್ಕೆ

1. ಇದೊಂದು ಕಡಿಮೆ ಬೆಲೆಯ, ಹಳೆಯ ಕಾಲದ ಚಿನ್ನದ ನಾಣ್ಯ (3)
2. ಮಂಡೂಕ ಇದ್ದಂಥ ಬಾವಿ (2)
4. ಧಣಿ ಕೊಟ್ಟ ಭೂಮಿಯಿದು (3)
6. ನೀರಿನಲ್ಲಿ ಉಂಟಾದ ಅಲೆ (3)
8. ತಂಟೆ ಅಥವಾ ಕೆಲಸಕ್ಕೆ ಬಾರದ ಎಂದರ್ಥ (3)
10. ಅಸ್ತವ್ಯಸ್ತವಾಗಿ ಬಂದಿರುವ ಬಲಿಷ್ಠವಾದ ಗಂಡಾನೆ (3)
12. ಜೋರಾದ ಗದ್ದಲ ಅಥವಾ ಕೋಲಾಹಲ (3)
13. ಕೈಲಾಸ ತೋರಿಸಬಲ್ಲ ಕೆಲಸ (3)
14. ಚಿನ್ನಕ್ಕೆ ಮತ್ತೊಂದು ಹೆಸರು (3)
15. ಈ ಆತುರ ಅತಿಯಾಯಿತೇನೋ (3)
17. ಶ್ರೀರಾಮನೊಂದಿಗೆ ವನವಾಸಕ್ಕೆ ಹೋದ ಸಹೋದರ (3)
19. ರೂಪಾಯಿಯ ನಾಲ್ಕನೆಯ ಒಂದು ಭಾಗವಿದು (3)
21. ಶಿವನಿಗೆ ಕೋಪ ಬಂದಂತಿದೆ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
3.ಬಂಧನ 5.ಪತಿತ 7.ಗಣಿತ
9.ರಂದಣಿಗ 11.ರಣರಂಗ
13.ಕಾಮಾಲೆ 14.ಹಾಗಲ
15.ತಟವಟ 16.ಕಲರವ
18.ಕಪಾಟು 20.ಕಶೇರು 22.ಗಣತಿ

ಮೇಲಿಂದ ಕೆಳಕ್ಕೆ
1.ದುಗ್ಗಾಣಿ 2.ಕೂಪ 4.ಧರಣಿ
6.ತರಂಗ 8.ತರಲೆ 10.ಗಸಲ
12.ರಂಪಾಟ 13.ಕಾಯಕ
14.ಹಾಟಕ 15.ತವಕ 17.ಲಕ್ಷ್ಮಣ
19.ಪಾವಲಿ 21.ರುದ್ರ

ಬದುಕಿರುವ ಕೊನೆಯ ಕ್ಷಣದವರೆಗೂ ಕಲಿಕೆ ನಿಲ್ಲುವುದಿಲ್ಲ

ಒಂದು ದಿನ ಬುದ್ಧನು ಶಿಷ್ಯ ಆನಂದನೊಡನೆ ಕಾಡಿನ ಮೂಲಕ ಹಾದು ಹೋಗುತ್ತಿದ್ದ. ಅದು ಶರತ್ಕಾಲದ ಸಂಜೆಯಾಗಿದ್ದರಿಂದ ಕಾಡಿನ ತುಂಬ ಒಣ ಎಲೆಗಳು ರಾಶಿ ರಾಶಿಯಾಗಿ ಬಿದ್ದಿದ್ದವು. ಸಂಜೆಯ ಗಾಳಿ ಆ ಎಲೆಗಳನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಕೊಂಡೊಯ್ಯುತ್ತ ಮಧುರ ಸಂಗೀತವನ್ನು ಕಾಡಿನ ತುಂಬ ಹರಡಿತ್ತು. ಆ ಒಣಗಿದ ಎಲೆಗಳ ಮೇಲೆ ನಡೆಯುವುದೇ ಒಂದು ದಿವ್ಯ ಅನುಭವವಾಗಿತ್ತು.

ಬುದ್ಧನನ್ನು ಉದ್ದೇಶಿಸಿ ಆನಂದನು, ''ಬಹಳ ದಿನಗಳಿಂದ ನನ್ನ ಮನಸ್ಸಿನಲ್ಲೊಂದು ಪ್ರಶ್ನೆ ಕಾಡುತ್ತಿದೆ. ಇಂದು ನಮ್ಮ ಸುತ್ತಮುತ್ತ ಬೇರೆ ಯಾರೂ ಇಲ್ಲ, ಇಂಥ ಸಮಯ ನನಗೆ ಅಪರೂಪಕ್ಕೆ ಸಿಕ್ಕಿದೆ. ದಿನದ ಇಪ್ಪತ್ನಾಲ್ಕು ಗಂಟೆಯೂ ನಾನು ನಿನ್ನ ಜತೆ ಇರುತ್ತೇನಾದರೂ, ಬೇರೆ ಯಾರಾದರೊಬ್ಬರು ನಮ್ಮ ನಡುವೆ ಬಂದೇ ಬರುತ್ತಾರೆ ಮತ್ತು ಪ್ರಶ್ನೆ ಕೇಳುವ ಆದ್ಯತೆ ಯಾವಾಗಲೂ ಅವರದಾಗಿರುತ್ತದೆ. ನಾನು ಸದಾ ನಿನ್ನ ಜತೆ ಇರುತ್ತೇನಾದ್ದರಿಂದ ಇವತ್ತು ಕೇಳಿದರಾಯ್ತು ನಾಳೆ ಕೇಳಿದರಾಯ್ತು ಎಂದು ಈ ಪ್ರಶ್ನೆ ನನ್ನೊಳಗೇ ಉಳಿದುಕೊಂಡುಬಿಟ್ಟಿದೆ. ಇವತ್ತು ನಮ್ಮ ಸುತ್ತ ಬೇರೆ ಯಾರೂ ಇಲ್ಲವಾದ್ದರಿಂದ ಪ್ರಶ್ನೆಯನ್ನ ಕೇಳಿಯೇಬಿಡುತ್ತೇನೆ. ಅದೇನೆಂದರೆ- ನಿನಗೆ ಗೊತ್ತಿರುವ ಎಲ್ಲವನ್ನೂ ನೀನು ಹೇಳಿಬಿಟ್ಟಿದ್ದೀಯಾ? ಅಥವಾ ಕೆಲವಾದರೂ ಸಂಗತಿಗಳನ್ನು ನಮಗೆ ಹೇಳದೆ ನಿನ್ನೊಳಗೇ ಇಟ್ಟುಕೊಂಡಿದ್ದೀಯಾ?'' ಎಂದು ಕೇಳಿದ.

ಬುದ್ಧ ಒಂದು ಜಾಗದಲ್ಲಿ ನಿಂತು ಕೆಳಗೆ ಬಿದ್ದಿದ್ದ ಒಣಗಿದ ಎಲೆಗಳನ್ನ ತನ್ನ ಮುಷ್ಟಿಯಲ್ಲಿ ತುಂಬಿಕೊಂಡ. ''ಏನು ಮಾಡುತ್ತಿದ್ದೀಯ ತಥಾಗತ?'' ಆನಂದ ಬುದ್ಧನನ್ನು ಮತ್ತೆ ಪ್ರಶ್ನೆ ಮಾಡಿದ. ''ನಿನ್ನ ಪ್ರಶ್ನೆಗೆ ಉತ್ತರ ಕೊಡುವ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಕೈಯೊಳಗೆ ನಿನಗೆ ಏನು ಕಾಣಿಸುತ್ತಿದೆ?'' ಬುದ್ಧ ಆನಂದನನ್ನು ಕೇಳಿದ.

''ಕೆಲವು ಒಣಗಿದ ಎಲೆಗಳು'' ಎಂದ ಆನಂದ. ''ಮತ್ತು ಈ ಕಾಡಿನ ತುಂಬ ನಿನಗೆ ಏನು ಕಾಣಿಸುತ್ತಿದೆ?'' ಎಂದು ಬುದ್ಧ ಕೇಳಿದ್ದಕ್ಕೆ, ''ಕೋಟ್ಯಂತರ ಒಣ ಎಲೆಗಳು'' ಎಂದು ಆನಂದ ಉತ್ತರಿಸಿದ. ''ನಾನು ಜಗತ್ತಿಗೆ ಹೇಳಿದ್ದು ನನ್ನ ಕೈಯಲ್ಲಿರುವ ಒಣ ಎಲೆಗಳಷ್ಟು ಮಾತ್ರ. ನಾನು ಹೇಳದೇ ಇರುವುದು ಇಡೀ ಕಾಡಿನ ತುಂಬ ತುಂಬಿ ಕೊಂಡಿರುವ ಎಲೆಗಳಷ್ಟು. ನನ್ನ ಬಯಕೆ ನಿಮಗೆ ಮುಷ್ಟಿ ತುಂಬ ಎಲೆಗಳನ್ನು ಕೊಡುವುದಲ್ಲ; ನನ್ನ ಆಸೆ ನಿಮಗೆ ಇಡೀ ಕಾಡಿನ ಪರಿಚಯ ಮಾಡಿಸುವುದು, ಕಾಡಿನ ಸಂಗೀತವನ್ನು ಕೇಳುವಂತೆ ಮಾಡುವುದು. ಮಕ್ಕಳಂತೆ ನೀವು ಕಾಡಿನ ಒಣ ಎಲೆಗಳ ಮೇಲೆ ಓಡಾಡಿ ಕಾಡಿನ ಸಮಸ್ತದೊಂದಿಗೆ ಒಂದಾಗಬೇಕು. ನನ್ನ ಕೆಲವು ಮಾತುಗಳನ್ನ ಹಿಡಿದುಕೊಂಡು ಹಿಂಜುತ್ತಾ ಅದೇ ಸಮಸ್ತ ಎನ್ನುವ ಭ್ರಮೆಯಲ್ಲಿ ಬೀಳಬೇಡಿ. ಸ್ವತಃ ನೀವು ಕಾಡಿನ ಜತೆ ಒಂದಾಗಿ, ಆಗ ನಿಮ್ಮ ಪ್ರಶ್ನೆಗಳೇ ಇಲ್ಲವಾಗುತ್ತವೆ'' ಎಂದು ಬುದ್ಧನು ಆನಂದನ ಪ್ರಶ್ನೆಗೆ ಸಮಾಧಾನ ಹೇಳಿದ.

ಓಶೋ ಅವರು ಹೇಳಿದ ಈ ಬುದ್ಧನ ಕಥೆ ನಮ್ಮೆಲ್ಲರಿಗೂ ಸಲ್ಲುತ್ತದೆ. ವಿದ್ಯಾಭ್ಯಾಸ ಕೇವಲ ಒಂದು ಹಿಡಿಯಷ್ಟು ಜ್ಞಾನವನ್ನು ನಮಗೆ ನೀಡುತ್ತದೆ. ಆದರೆ ಬದುಕಿನ ಅನುಭವಗಳು, ಪ್ರಪಂಚದ ಜನರ ಜತೆಗಿನ ಒಡನಾಟ, ಬೇರೆ ಬೇರೆ ಪರಿಸ್ಥಿತಿಗಳಲ್ಲಿ ನಾವು ಕಲಿಯುವ ಪಾಠಗಳು ನೂರು ಪಟ್ಟು ಜೀವನ ಕೌಶಲವನ್ನು ನಮಗೆ ಕಲಿಸುತ್ತವೆ. ಡಿಗ್ರಿಗಳನ್ನು ಪಡೆದು ಯಾರು ಕೂಡ ಜ್ಞಾನಿಗಳು ಎಂದು ಬೀಗಲು ಸಾಧ್ಯವಿಲ್ಲ. ದೇಶ ಸುತ್ತಿ, ಕೋಶ ಓದಿ, ನೂರಾರು ಜನರ ಬದುಕುಗಳಿಗೆ ಸ್ಪಂದಿಸಿದಾಗ ಮಾತ್ರ ಜೀವನದ ಒಂದು ಪ್ರತಿಶತ ನಮಗೆ ಅರ್ಥವಾಗಬಹುದೇನೋ! ಕಲಿಕೆಗೆ ಕೊನೆಯೆಂಬುದು ಇಲ್ಲವೇ ಇಲ್ಲ. ಬದುಕಿನುದ್ದಕ್ಕೂ ಹೊಸ ಹೊಸ ವಿಷಯಗಳನ್ನು, ಬದುಕನ್ನು ಅರ್ಥಪೂರ್ಣವಾಗಿ ಬದುಕುವ ಕೌಶಲವನ್ನು ನಾವು ಕಲಿಯುತ್ತಲೇ ಇರಬಹುದು. ಆದ್ದರಿಂದಲೇ ಎನಗಿಂತ ಕಿರಿಯರಿಲ್ಲ ಎನ್ನುವ ಬಸವಣ್ಣನವರ ವಚನದಂತೆ ಸದಾ ವಿನಯದಿಂದ, ಏನನ್ನಾದರೂ ಕಲಿಯುವ ಉತ್ಸಾಹದಿಂದ ಪ್ರತಿ ದಿನವನ್ನು ಸ್ವಾಗತಿಸೋಣ. ಪ್ರತಿಯೊಬ್ಬರಿಂದಲೂ ನಮಗೆ ಹೊಸದೇನೋ ಕಲಿಯಲು ಸಿಗುತ್ತದೆ. ಅದನ್ನು ಸೂಕ್ಷ್ಮವಾಗಿ ಗಮನಿಸುವ ಮನಸ್ಸು ನಮಗಿರಬೇಕಷ್ಟೇ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಿಷಭ್ 90, ಭಾರತ ಎಗೆ 3 ವಿಕೆಟ್ ಜಯ

ಬೆಂಗಳೂರು: ದ.ಆಫ್ರಿಕಾ ಎ ತಂಡದ ವಿರುದ್ಧದ 4 ದಿನಗಳ ಮೊದಲ ಪಂದ್ಯದಲ್ಲಿ ಭಾರತ ಎ ತಂಡ 3 ವಿಕೆಟ್ ಜಯ ಸಾಧಿಸಿದೆ. ಬೆಂಗಳೂರಿನ ಕೌಶಲ್ಯ ಕೇಂದ್ರ ಮೈದಾನದಲ್ಲಿ ನಡೆದಿದ್ದ ಈ ಪಂದ್ಯದಲ್ಲಿ ರಿಷಭ್ ಪಂತ್ ಅರ್ಧ ಶತಕದ ಬಲದಿಂದ ಭಾರತ ಎ ತಂಡ, ದಕ್ಷಿಣ ಆಫ್ರಿಕಾ ಎ ನೀಡಿದ್ದ 275 ರನ್‌ಗಳ ಗುರಿಯನ್ನು 7 ವಿಕೆಟ್ ಕಳೆದುಕೊಂಡು ಚೇಸ್ ಮಾಡಿತು. ಈ ಗೆಲುವಿನ ಮೂಲಕ ಭಾರತ ಎ ತಂಡ, ಎರಡು ಪಂದ್ಯಗಳ ಸರಣಿಯಲ್ಲಿ 1-0 ಅಂತರದಲ್ಲಿ ಮುನ್ನಡೆ ಸಾಧಿಸಿತು. ಮೂರನೇ ದಿನದಾಟದಂತ್ಯಕ್ಕೆ ನಾಲ್ಕು ವಿಕೆಟ್ ಕಳೆದುಕೊಂಡು 119 ರನ್ ಕಲೆಹಾಕಿದ್ದ ಭಾರತ ಎ ತಂಡಕ್ಕೆ ಕೊನೆಯ ದಿನ ಗೆಲುವಿಗೆ 166 ರನ್ ಅಗತ್ಯವಿತ್ತು. ಈ ವೇಳೆ ಕಠಿಣ ಹೋರಾಟ ನಡೆಸಿದ ರಿಷಬ್ (90), ಆಯುಷ್ ಬದೋನಿ (47) ತಂಡವನ್ನು ಗೆಲುವಿನ ಸಮೀಪಕ್ಕೆ ಕೊಂಡೊಯ್ದರು. ಇದಕ್ಕೂ ಮುನ್ನ ದ.ಆಫ್ರಿಕಾ 1ನೇ ಇನಿಂಗ್ಸ್‌ನಲ್ಲಿ 309 ರನ್, ಭಾರತ ಎ 234 ರನ್‌ಗಳಿಸಿತ್ತು. 2ನೇ ಇನಿಂಗ್ಸ್‌ನಲ್ಲಿ ಆಫ್ರಿಕಾ 199 ರನ್‌ಗೆ ಆಲೌಟ್ ಆಯಿತು.

ರಣಜಿ: ಕರ್ನಾಟಕ, ಕೇರಳ ಪಂದ್ಯ ರೋಚಕ

ಮಂಗಳಾಪುರಂ: 2025-26ನೇ ಸಾಲಿನ ರಣಜಿ ಟ್ರೋಫಿಯ ಕರ್ನಾಟಕ-ಕೇರಳ ನಡುವಿನ ಪಂದ್ಯ ರೋಮಾಂಚಕ ಘಟ್ಟಕ್ಕೆ ತಲುಪಿದೆ. ನಾಲ್ಕು ದಿನಗಳ ಪಂದ್ಯ 3 ದಿನಗಳನ್ನು ಮುಗಿಸಿದ್ದು, ಇನ್ನೊಂದು ದಿನ ಬಾಕಿಯಿದೆ. ಮಂಗಳವಾರ ಕರ್ನಾಟಕ ಗೆಲ್ಲುತ್ತಾ, ಪಂದ್ಯ ಡ್ರಾಗೊಳ್ಳುತ್ತ ಎಂದು ಕಾದು ನೋಡಬೇಕು. 1ನೇ ಇನಿಂಗ್ಸ್‌ನಲ್ಲಿ ಕರ್ನಾಟಕ 5 ವಿಕೆಟ್‌ಗೆ 586 ರನ್ ಗಳಿಸಿ ಡ್ರಾ ಮಾಡಿಕೊಂಡಿತ್ತು. ಇದಕ್ಕೆ ಪ್ರತಿಯಾಗಿ 1ನೇ ಇನಿಂಗ್ಸ್‌ನಲ್ಲಿ ಕೇರಳ 238 ರನ್‌ಗಳಿಗೆ ಆಲೌಟಾಗಿದೆ. ಫಾಲೋಆನ್ ಪಡೆದಿರುವ ಅದು 2ನೇ ಇನಿಂಗ್ಸ್ ಆರಂಭಿಸಿದ್ದು ವಿಕೆಟ್ ನಷ್ಟವಿಲ್ಲದೇ 10 ರನ್ ಗಳಿಸಿದೆ. ಮಂಗಳವಾರ ಕೇರಳ ಬಾಕಿ 338 ರನ್‌ಗಳೊಳಗೆ ಆಲೌಟಾದರೆ ರಾಜ್ಯ ಗೆಲ್ಲಲಿದೆ. ಇಲ್ಲವಾದರೆ ಪಂದ್ಯ ಡ್ರಾಗೊಳ್ಳಲಿದೆ.

ಭಾರತ ಟಿ20 ತಂಡ: ಕುಲದೀಪ್ ಬಿಡುಗಡೆ

ನವದೆಹಲಿ: ಭಾರತ ಟಿ20 ತಂಡದಿಂದ ಲೆಗ್‌ಸ್ಪಿನ್ನರ್ ಕುಲದೀಪ್ ಯಾದವ್‌ರನ್ನು ಬಿಡುಗಡೆ ಮಾಡಲಾಗಿದೆ. ಬೆಂಗಳೂರಿನ ಬಿಸಿಸಿಐ ಕೌಶಲ್ಯ ಕೇಂದ್ರದಲ್ಲಿ ಭಾರತ ಎ ಮತ್ತು ದಕ್ಷಿಣ ಆಫ್ರಿಕಾ ಎ ನಡುವಿನ ಎರಡನೇ ಚತುರ್ದಿನ ಟೆಸ್ಟ್ ಪಂದ್ಯದಲ್ಲಿ ಭಾಗವಹಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ದಕ್ಷಿಣ ಆಫ್ರಿಕಾ ಎ ವಿರುದ್ಧದ ಎರಡನೇ ನಾಲ್ಕು ದಿನಗಳ ಪಂದ್ಯ, ಗುರುವಾರ, ನವೆಂಬರ್ 6ರಂದು ಆರಂಭವಾಗಲಿದೆ. ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ತಂಡ ಎರಡು ಟೆಸ್ಟ್, ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳ ಸರಣಿಯನ್ನು ಆಯೋಜಿಸಲಿದೆ.

ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಘೋಷಣೆ | ಮೊದಲ ಬಾರಿ ಏಕದಿನ ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿದ ಭಾರತ

ವಿಶ್ವಕಪ್ ಗೆದ್ದ ಮಹಿಳಾ ತಂಡಕ್ಕೆ 125 ಅಲ್ಲ 51 ಕೋಟಿ ರು.

ಮುಂಬೈ: ಭಾರತೀಯ ಮಹಿಳಾ ಕ್ರಿಕೆಟ್ ತಂಡವು 2005 ಮತ್ತು 2017ರ ವಿಶ್ವಕಪ್ ಫೈನಲ್ ಪಂದ್ಯಗಳ ಸೋಲಿನ ನೋವನ್ನು ಮರೆತು ಭಾನುವಾರ ಏಕದಿನ ವಿಶ್ವಕಪ್ ಜಯಿಸಿದೆ. ದ.ಆಫ್ರಿಕಾ ವಿರುದ್ಧ 52 ರನ್ ಗಳಿಂದ ಗೆದ್ದ ಅದು ಚೊಚ್ಚಲ ವಿಶ್ವಕಪ್ ಗೆದ್ದಿದೆ. ಈ ಐತಿಹಾಸಿಕ ಸಾಧನೆಗಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಿಜೇತ ತಂಡಕ್ಕೆ 51 ಕೋಟಿ ರು. ನಗದು ಬಹುಮಾನ ಘೋಷಿಸಿದೆ. ಇದಕ್ಕೂ ಮುನ್ನ 125 ಕೋಟಿ ರು. ನೀಡಬಹುದೆಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ಈ ಬಹುಮಾನವನ್ನು ಪ್ರಕಟಿಸಿದ್ದು, ಆಟಗಾರ್ತಿಯರು, ಕೋಚ್‌ಗಳು ಮತ್ತು ಸಹಾಯಕ ಸಿಬ್ಬಂದಿ ಎಲ್ಲರಿಗೂ ಈ ಮೊತ್ತವನ್ನು ಹಂಚಲಾಗುವುದು ಎಂದು ತಿಳಿಸಿದ್ದಾರೆ. ಟ್ರೋಫಿ ಗೆದ್ದ ಭಾರತ ತಂಡಕ್ಕೆ ಐಸಿಸಿ ಕಡೆಯಿಂದಲೂ 39 ಕೋಟಿ ರು. ನಗದು ಬಹುಮಾನ ಸಿಕ್ಕಿದ್ದು, ಒಟ್ಟು ನಗದು ಬಹುಮಾ ಮೊತ್ತ 90 ಕೋಟಿ ರು.ಗೆ ತಲುಪಿದೆ.

1983ರಲ್ಲಿ ಕಪಿಲ್ ದೇವ್ ಅವರು ವಿಶ್ವಕಪ್ ಗೆಲ್ಲುವ ಮೂಲಕ ಕ್ರಿಕೆಟ್‌ನಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿದ್ದರು. ಇಂದು ನಮ್ಮ ಮಹಿಳಾ ತಂಡ ಅದೇ ರೀತಿಯ ಸಂಚಲನವನ್ನು ಸೃಷ್ಟಿಸಿದೆ ಎಂದು ದೇವಜಿತ್ ಸೈಕಿಯಾ ಹೇಳಿದ್ದಾರೆ. ಹರ್ಮನ್‌ಪ್ರೀತ್ ಕೌರ್ ಮತ್ತು ಅವರ ತಂಡ ಕೇವಲ ಟ್ರೋಫಿ ಗೆದ್ದಿಲ್ಲ, ಬದಲಾಗಿ ಎಲ್ಲಾ ಭಾರತೀಯರ ಹೃದಯವನ್ನು ಗೆದ್ದಿದ್ದಾರೆ. ಮುಂದಿನ ಪೀಳಿಗೆಯ ಮಹಿಳಾ ಕ್ರಿಕೆಟಿಗರಿಗೆ ಇವರು ಮಾದರಿ ನಿರ್ಮಿಸಿದ್ದಾರೆ ಎಂದು ಅವರು ಶ್ಲಾಘಿಸಿದ್ದಾರೆ.

ಮಹಿಳಾ ಕ್ರಿಕೆಟ್‌ನ ಬೆಳವಣಿಗೆಗೆ ಜಯ್ ಶಾ ಅವರ ಕೊಡುಗೆಯನ್ನು ಸ್ಮರಿಸಿದ ಸೈಕಿಯಾ, 2019ರಿಂದ 2024ರವರೆಗೆ ಬಿಸಿಸಿಐ ಕಾರ್ಯದರ್ಶಿಯಾಗಿ ಜಯ್ ಶಾ ಅಧಿಕಾರ ವಹಿಸಿಕೊಂಡ ನಂತರ, ಅವರು ಮಹಿಳಾ ಕ್ರಿಕೆಟ್‌ನಲ್ಲಿ ಅನೇಕ ಪರಿವರ್ತನೆಗಳನ್ನು ತಂದಿದ್ದಾರೆ. ವೇತನ ಸಮಾನತೆಯನ್ನು ಜಾರಿಗೊಳಿಸಲಾಗಿದೆ. ಕಳೆದ ತಿಂಗಳು, ಐಸಿಸಿ ಅಧ್ಯಕ್ಷರಾಗಿ ಅವರು ಮಹಿಳಾ ಕ್ರಿಕೆಟ್‌ನ ಬಹುಮಾನದ ಮೊತ್ತವನ್ನು ಶೇ.300ರಷ್ಟು ಹೆಚ್ಚಿಸಿದ್ದಾರೆ. ಈ ಮೊದಲು ಬಹುಮಾನದ ಮೊತ್ತ 2.88 ಮಿಲಿಯನ್ ಡಾಲರ್ ಇತ್ತು, ಈಗ ಅದನ್ನು 14 ಮಿಲಿಯನ್ ಡಾಲರ್‌ಗೆ ಏರಿಸಲಾಗಿದೆ. ಈ ಎಲ್ಲಾ ಕ್ರಮಗಳು ಮಹಿಳಾ ಕ್ರಿಕೆಟ್‌ಗೆ ಹೆಚ್ಚಿನ ಉತ್ತೇಜನ ನೀಡಿವೆ ಎಂದು ಅವರು ವಿವರಿಸಿದರು.

ಬ್ಯಾಟಿಂಗ್, ಬೌಲಿಂಗ್‌ನಲ್ಲಿ ಮಿಂಚಿದ ಶಫಾಲಿ ವರ್ಮಾ: ಇನ್ನು ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತದ ಪರ ಸ್ಮೃತಿ ಮಂಧಾನಾ (58 ಎಸೆತಗಳಲ್ಲಿ 45 ರನ್) ಮತ್ತು ಶಫಾಲಿ ವರ್ಮಾ ಶತಕದ ಜೊತೆಯಾಟದಿಂದ ಭಾರತ ಸವಾಲಿನ ಮೊತ್ತ ಪೇರಿಸಿತು. ಶಫಾಲಿ ವರ್ಮಾ (78 ಎಸೆತಗಳಲ್ಲಿ 87 ರನ್), ದೀಪ್ತಿ ಶರ್ಮಾ (58 ಎಸೆತಗಳಲ್ಲಿ 58 ರನ್) ನೆರವಿನಿಂದ ಭಾರತ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 298 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ದಕ್ಷಿಣ ಆಫ್ರಿಕಾ ಪರ ಅಯಬೊಂಗಾ ಖಾಕಾ (3/58) ಯಶಸ್ವಿ ಬೌಲರ್ ಎನಿಸಿದರು.

ಬೃಹತ್ ಮೊತ್ತವನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾಕ್ಕೆ ನಾಯಕಿ ಲಾರಾ ವೋಲ್ವಾರ್ಟ್ (98 ಎಸೆತಗಳಲ್ಲಿ 101 ರನ್) ಶತಕ ಸಿಡಿಸಿ ಆಸರೆಯಾದರು.

ಆದರೆ ಭಾರತದ ಶಿಸ್ತಿನ ಬೌಲಿಂಗ್ ದಾಳಿಗೆ ಇತರ ಆಟಗಾರ್ತಿಯರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ನಿರ್ಣಾಯಕ ಹಂತದಲ್ಲಿ ವಿಕೆಟ್ ಪಡೆದ ಶಫಾಲಿ ವರ್ಮಾ (2/36) ಮತ್ತು ಶ್ರೀಚರಣಿ ಪಂದ್ಯಕ್ಕೆ ತಿರುವು ನೀಡಿದರು.

ಅಂತಿಮವಾಗಿ, ದೀಪ್ತಿ ಶರ್ಮಾ (5/39) ಐದು ವಿಕೆಟ್ ಗೊಂಚಲು ಪಡೆದು ಮಿಂಚಿದರು. ವಿಶ್ವಕಪ್ ಫೈನಲ್‌ನಲ್ಲಿ ಐದು ವಿಕೆಟ್ ಪಡೆದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು. ದಕ್ಷಿಣ ಆಫ್ರಿಕಾ ತಂಡ 246 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಭಾರತ 52 ರನ್‌ಗಳ ಜಯ ಸಾಧಿಸಿ ಇತಿಹಾಸ ನಿರ್ಮಿಸಿತು.

ವೇಗಿ ಕ್ರಾಂತಿಗೆ ಮಧ್ಯಪ್ರದೇಶ ಸರಕಾರ ದಿಂದ 1 ಕೋಟಿ ರು.

ಭೋಪಾಲ್: ವಿಶ್ವಕಪ್ ತಂಡದಲ್ಲಿ ಟೀಂ ಇಂಡಿಯಾದ ಭಾಗವಾಗಿದ್ದು, ಉತ್ತಮ ಪ್ರದರ್ಶನ ತೋರಿದ ವೇಗಿ ಕ್ರಾಂತಿ ಗೌಡ್ ಅವರಿಗೆ ಮಧ್ಯಪ್ರದೇಶ ಸರ್ಕಾರ ₹1 ಕೋಟಿ ಬಹುಮಾನ ನೀಡುವುದಾಗಿ ಘೋಷಿಸಿದೆ. ಭಾರತ ಮಹಿಳಾ ತಂಡ ನವಿ ಮುಂಬೈನಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ 52 ರನ್‌ಗಳ ಅಂತರದಲ್ಲಿ ಜಯ ಸಾಧಿಸಿ ತನ್ನ ಚೊಚ್ಚಲ ಟ್ರೋಫಿ ಗೆದ್ದುಕೊಂಡಿದೆ. ಭಾರತ ತಂಡದ ಗೆಲುವಿನ ಕುರಿತು ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿದ ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್, ನಮ್ಮ ರಾಜ್ಯದ ಮಗಳು ಸೇರಿದಂತೆ ದೇಶದ ಹೆಣ್ಣುಮಕ್ಕಳು ಭಾನುವಾರ ಕ್ರಿಕೆಟ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ ರೀತಿಗೆ ಅಭಿನಂದನೆ ಸಲ್ಲಿಸಲು ಬಯಸುತ್ತೇನೆ ಎಂದಿದ್ದಾರೆ.

22 ವಿಕೆಟ್, 215 ರನ್: ದೀಪ್ತಿ ಶರ್ಮಾ ವಿಶ್ವದಾಖಲೆ!

ಫೈನಲ್ ಪಂದ್ಯದಲ್ಲಿ 5 ವಿಕೆಟ್ ಪಡೆದ ಆಲ್‌ರೌಂಡರ್ ದೀಪ್ತಿ ಶರ್ಮಾ ವಿಶ್ವಕಪ್ ಕ್ರಿಕೆಟ್‌ನಲ್ಲಿ ವಿಶ್ವದಾಖಲೆ ನಿರ್ಮಿಸಿದ್ದಾರೆ. ಈ ಬಾರಿಯ ಟೂರ್ನಿಯಲ್ಲಿ 22 ವಿಕೆಟ್ ಪಡೆಯುವ ಮೂಲಕ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಅಷ್ಟೇ ಅಲ್ಲದೇ 9 ಪಂದ್ಯಗಳ 7 ಇನಿಂಗ್ಸ್ ಆಡಿ 215 ರನ್ ಹೊಡೆದಿದ್ದಾರೆ. ವಿಶ್ವಕಪ್ ಟೂರ್ನಿಯೊಂದರಲ್ಲಿ 215 ರನ್ ಬಾರಿಸಿ, 22 ವಿಕೆಟ್ ಕಿತ್ತ ಮೊದಲ ಕ್ರಿಕೆಟರ್ ದೀಪ್ತಿ ಶರ್ಮಾ. ಪುರುಷರ ಮಾದರಿಯೂ ಯಾವುದೇ ಕ್ರಿಕೆಟಿಗ ಇಂತಹ ಸಾಧನೆ ಮಾಡಿಲ್ಲ. ಫೈನಲ್ ಪಂದ್ಯದಲ್ಲಿ ಶರ್ಮಾ 58 ರನ್ (58 ಎಸೆತ, 3 ಬೌಂಡರಿ, 1 ಸಿಕ್ಸ್) ಹೊಡೆದರೆ ಬೌಲಿಂಗ್‌ನಲ್ಲಿ 9.3 ಓವರ್ ಬೌಲ್ ಮಾಡಿ 39 ರನ್ ನೀಡಿ 5 ವಿಕೆಟ್ ಪಡೆಯುವ ಮೂಲಕ ಭಾರತ ಚಾಂಪಿಯನ್ ಆಗಿ ಹೊರಹೊಮ್ಮಲು ಕಾರಣರಾಗಿದ್ದಾರೆ.

ತಂಡಕ್ಕೆ ಸೂರತ್ ಉದ್ಯಮಿಯಿಂದ ವಜ್ರದ ಉಡುಗೊರೆ

ಸೂರತ್: ಮಹಿಳಾ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿಯರಿಗೆ ವಜ್ರದ ಆಭರಣ ಹಾಗೂ ಸೋಲಾರ್ ಪ್ಯಾನೆಲ್‌ಗಳನ್ನು ಉಡುಗೊರೆ ನೀಡುತ್ತೇನೆಂದು ಉದ್ಯಮಿ ಹಾಗೂ ರಾಜ್ಯಸಭಾ ಸದಸ್ಯ ಗೋವಿಂದ ಧೋಲಾಕಿಯಾ ಪ್ರಕಟಿಸಿದ್ದಾರೆ. ಶ್ರೀರಾಮಕೃಷ್ಣ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಸ್ಥಾಪಕ ಹಾಗೂ ಮುಖ್ಯಸ್ಥರಾಗಿರುವ ಗೋವಿಂದ ಧೋಲಾಕಿಯಾ ಅವರು ಪತ್ರ ಬರೆದಿದ್ದಾರೆ.

ಭಾರತದ ಪರ ಆಡದಿದ್ದರೂ ವಿಶ್ವಕಪ್ ಗೆಲ್ಲಿಸಿದ ಕೋಚ್ ಮಜುಮ್ದಾರ್

ಭಾರತ ಮಹಿಳಾ ತಂಡದ ವಿಶ್ವಕಪ್ ಗೆಲುವಿನ ಸೂತ್ರಧಾರ ಕೋಚ್ ಅಮೋಲ್ ಮಜುಮ್ದಾರ್. ಭಾರತ ತಂಡದ ಪರ ಆಡದಿದ್ದರೂ ಅವರು ಕೋಚ್ ಆಗಿ ವಿಶ್ವಕಪ್ ಗೆದ್ದದ್ದು ಇತಿಹಾಸ. ವಿಶ್ವಕಪ್ ಗೆಲುವಿನ ಹಿಂದೆ ಮಜುಮ್ದಾರ್ ಪಾತ್ರ ಪ್ರಮುಖವಾದದ್ದು. 2023ರ ಅಕ್ಟೋಬರ್‌ನಲ್ಲಿ ಅವರು ತಂಡಕ್ಕೆ ಮುಖ್ಯ ಕೋಚ್ ಆಗಿ ಬಂದಾಗ ಎಲ್ಲವೂ ಸರಿಯಿರಲಿಲ್ಲ. ಹರ್ಮನ್‌ಪ್ರೀತ್ ಕೌರ್ ಅವರು ನಾಯಕತ್ವ ವಹಿಸಿಕೊಂಡು ಸ್ವಲ್ಪ ಸಮಯವಾಗಿತ್ತು. ಇದಕ್ಕೂ ಮುನ್ನ ಕೋಚ್ ಆಗಿದ್ದ ರಮೇಶ್ ಪವಾರ್ ಜತೆ ಆಟಗಾರ್ತಿಯರು ಭಿನ್ನಾಭಿಪ್ರಾಯ ಹೊಂದಿದ್ದರು. ಹೀಗಾಗಿ ತಂಡದ ಪ್ರದರ್ಶನ ಅತ್ಯಂತ ಕಳಪೆ ಮಟ್ಟದಿಂದ ಕೂಡಿತ್ತು. ಆಟಗಾರ್ತಿಯರಲ್ಲಿ ಸಮನ್ವಯತೆ ಸಾಧಿಸುವುದು ಸವಾಲಾಗಿತ್ತು.

ಅಮೋಲ್ ತಮ್ಮ ಸಭ್ಯ ನಡವಳಿಕೆ ಮತ್ತು ಚಾಣಾಕ್ಷತೆಯಿಂದ ಪ್ರತಿಯೊಬ್ಬ ಆಟಗಾರ್ತಿಯ ಸಾಮರ್ಥ್ಯ ಮತ್ತು ಪ್ರತಿಭೆಗೆ ಅನುಗುಣವಾಗಿ ಹೊಣೆಗಳನ್ನು ನೀಡಿದರು. ಹರ್ಮನ್, ಸ್ಮೃತಿ ಮಂಧಾನಾ, ಜೆಮಿಮಾ, ರೇಣುಕಾ ಸಿಂಗ್, ಶಫಾಲಿ ವರ್ಮಾ ಅವರಂತಹ ಅನುಭವವುಳ್ಳ ಆಟಗಾರ್ತಿಯರ ವಿಶ್ವಾಸ ಗಳಿಸಿದರು. ಕ್ರಾಂತಿ ಗೌಡ್, ಅರುಂಧತಿ, ಪ್ರತೀಕಾ ರಾವಲ್, ರಿಚಾ ಘೋಷ್ ಮತ್ತು ಅನ್ಮೋಲ್ ಜೋತ್ ಕೌರ್ ಅವರಂತಹ ಉದಯೋನ್ಮುಖ ಪ್ರತಿಭೆಗಳಿಗೆ ಅವಕಾಶಗಳನ್ನು ಕೊಟ್ಟರು. ಇದು ಫಲ ನೀಡಿತು. ಭಾರತ ಚೊಚ್ಚಲ ವಿಶ್ವಕಪ್ ಮುಡಿಗೇರಿಸಿಕೊಂಡಿತು.

ಕೋಚ್ ಆಗಿ ಎಲ್ಲವನ್ನು ಸಾಧಿಸಿದರು: ಅಮೋಲ್ ಮುಜುಮ್ದಾರ್ ಕ್ರಿಕೆಟ್ ಬದುಕಿನ ಬಗ್ಗೆ ಹೇಳುವುದಾದರೆ ಅದೃಷ್ಟವಂತನಾಗಿರಲಿಲ್ಲ. ಏಕೆಂದರೆ ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ 11 ಸಾವಿರಕ್ಕೂ ಹೆಚ್ಚು ರನ್ ಹೊಡೆದ ಕಲಾತ್ಮಕ ಬ್ಯಾಟರ್ ಅಮೋಲ್‌ಗೆ ಭಾರತ ತಂಡದಲ್ಲಿ ಕನಿಷ್ಠ ಒಂದೇ ಒಂದು ಪಂದ್ಯ ಆಡುವ ಅವಕಾಶವೂ ಸಿಗಲಿಲ್ಲ. ಸಚಿನ್ ತೆಂಡುಲ್ಕರ್, ವಿನೋದ್ ಕಾಂಬ್ಳಿ ಅವರ ಜತೆ ಮುಂಬೈ ತಂಡದ ಪರ ಅನೇಕ ಸಾಧನೆ ಮಾಡಿದರೂ ಕೂಡ ಅವರಿಗೆ ಭಾರತ ತಂಡದ ಬಾಗಿಲು ತೆರೆಯಲೇ ಇಲ್ಲ. ಭಾರತ ಪರ ಆಡುವ ಯೋಗ್ಯತೆ ಇದ್ದರೂ ಅವರಿಗೆ ಅದೃಷ್ಟ ಕೈಕೊಡುತ್ತಿತ್ತು. 1978ರಿಂದ ವಿಶ್ವಕಪ್ ಆಡುತ್ತಿರುವ ಭಾರತ ಮಹಿಳಾ ತಂಡಕ್ಕೆ ಕೋಚ್ ಆಗಿ ಬರೋಬ್ಬರಿ 47 ವರ್ಷಗಳ ಬಳಿಕ ಚೊಚ್ಚಲ ವಿಶ್ವಕಪ್ ತಂದುಕೊಟ್ಟಿದ್ದಾರೆ. ಕೋಚನ್ನು ಆಟಗಾರ್ತಿಯರು ಗೌರವಿಸಿದ್ದಾರೆ.

ವಿಟಾಕೀಸ್

ಪೆದ್ದಿಯಲ್ಲಿ ಅಚ್ಚಿಯಾದ ಜಾನ್ವಿ

ರಾಮ್ ಚರಣ್ ಅಭಿನಯದ ಬಹು ನಿರೀಕ್ಷಿತ ಪೆದ್ದಿ ಸಿನಿಮಾದ ಶೂಟಿಂಗ್ ಭರದಿಂದ ಸಾಗುತ್ತಿದೆ. ಉಪ್ಪೆನ ಸಿನಿಮಾವನ್ನು ನಿರ್ದೇಶನ ಮಾಡಿದ್ದ ಬುಚ್ಚಿಬಾಬು ಸನಾ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಪೆದ್ದಿ ಸಿನಿಮಾದಲ್ಲಿ ರಾಮ್ ಚರಣ್‌ಗೆ

ಜತೆಯಾಗಿ ಬಾಲಿವುಡ್ ನಟಿ ಜಾನ್ವಿ ಕಪೂರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಇದೀಗ ಚಿತ್ರತಂಡ ಜಾನ್ವಿ ಕಪೂರ್ ಅವರ ಫಸ್ಟ್ ಲುಕ್ ಬಿಡುಗಡೆ ಮಾಡಿದೆ. ಈ ಚಿತ್ರದಲ್ಲಿ ಜಾನ್ವಿ ಅಚಿಯಮ್ಮನ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಫಸ್ಟ್ ಲುಕ್ ಪೋಸ್ಟರ್‌ನಲ್ಲಿ ಜಾನ್ವಿ ಬೋಲ್ಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಜೀಪಿನ ಮೇಲೆ ನಿಂತಿರುವ ಜಾನ್ವಿ ಕೈ ಎತ್ತಿ ಮುಗಿಯುತ್ತಿರುವ ಲುಕ್ ಅಭಿಮಾನಿಗಳ ಮನಗೆದ್ದಿದೆ.

ಪೆದ್ದಿ ಸಿನಿಮಾದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಕೂಡ ಅಭಿನಯಿಸಿದ್ದು, ಶಿವಣ್ಣ ಖಡಕ್ ರೋಲ್‌ನಲ್ಲಿ ಅಭಿನಯಿಸಿದ್ದಾರೆ. ಅವರ ಪಾತ್ರದ ಲುಕ್ ಈ ಹಿಂದೆಯೇ ಬಿಡುಗಡೆಯಾಗಿತ್ತು, ಅಭಿಮಾನಿಗಳ ಮನಗೆದ್ದಿತ್ತು. ಜಗಪತಿ ಬಾಬು, ದಿವೇಂದು ಶರ್ಮ ಮುಂತಾದವರು ಪೆದ್ದಿಯ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಪೆದ್ದಿ ಕ್ರೀಡಾ ಸ್ಫೂರ್ತಿ ಸಾರುವ ಕಥೆಯನ್ನು ಒಳಗೊಂಡಿದ್ದು, ಆ್ಯಕ್ಷನ್ ಡ್ರಾಮಾ ಕೂಡ ಬೆರೆತಿದೆ. ಈ ಚಿತ್ರಕ್ಕೆ ಎ.ಆರ್.ರೆಹಮಾನ್ ಸಂಗೀತ ನಿರ್ದೇಶನವಿದ್ದು, ಆರ್.ರತ್ನವೇಲು ಛಾಯಾಗ್ರಹಣ ಮಾಡುತ್ತಿದ್ದಾರೆ. ಪೆದ್ದಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ವೃದ್ಧಿ ಸಿನಿಮಾಸ್ ಬ್ಯಾನರ್‌ನಲ್ಲಿ ವೆಂಕಟ ಸತೀಶ್ ಕಿಲಾರು ನಿರ್ಮಾಣ ಮಾಡುತ್ತಿದ್ದಾರೆ. ಪೆದ್ದಿ 2026ರ ಮಾರ್ಚ್ 27ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

45ನ ಅಫ್ರೊ ಟಪಾಂಗ್ ಸಾಂಗ್

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ 45 ಚಿತ್ರದ ಮೂಲಕ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಚೊಚ್ಚಲ ನಿರ್ದೇಶನದಲ್ಲಿಯೇ ಹೊಸ ದಾಖಲೆ ಬರೆಯಲು ಮುಂದಾಗಿದ್ದಾರೆ. ಈ ಚಿತ್ರದಲ್ಲಿ ಅಫ್ರೋ ಟಫಾಂಗ ಪ್ರಮೋಷನಲ್ ಸಾಂಗ್ ಪ್ರಮುಖವಾಗಿದ್ದು ಕನ್ನಡ ರಾಜ್ಯೋತ್ಸವದಂದು ಹಾಡು ಬಿಡುಗಡೆಯಾಗಿದೆ. ಉಗಾಂಡ ದೇಶದ ಜಿಟೊ ಕಿಡ್ಸ್ ಈ ಹಾಡಿನಲ್ಲಿ ಕುಣಿದಿದ್ದು, ಇವರ ಜತೆಗೆ ಶಿವರಾಜ ಕುಮಾರ್, ಉಪೇಂದ್ರ, ಹಾಗೂ ರಾಜ್.ಬಿ.ಶೆಟ್ಟಿ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಎಂ.ಸಿ.ಬಿಜ್ಜು ಸಾಹಿತ್ಯದ ಹಾಡಿಗೆ, ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದು, ಜಾನಿ ನೃತ್ಯ ನಿರ್ದೇಶನ ಮಾಡಿದ್ದಾರೆ. ಸದ್ಯ ಬಿಡುಗಡೆಯಾಗಿರುವ ಈ ಹಾಡಿಗೆ ಭರ್ಜರಿ ರೆಸ್ಪಾನ್ಸ್ ವ್ಯಕ್ತವಾಗುತ್ತಿದೆ.

ನಮ್ಮ ಚಿತ್ರದ ಅಫ್ರೊ ಟಪಾಂಗ.. ಪ್ರಮೋಷನ್ ಸಾಂಗ್ ಅದ್ದೂರಿಯಾಗಿ ಮೂಡಿಬಂದಿದೆ. ಇದೇ ಮೊದಲ ಬಾರಿಗೆ ಈ ಹಾಡಿಗೆ ನೃತ್ಯ ಮಾಡಲು ಉಗಾಂಡದಿಂದ ಜಿಟೊ ಕಿಡ್ಸ್ ನೃತ್ಯಗಾರರು ಭಾರತಕ್ಕೆ

ಬಂದಿದ್ದಾರೆ. ಅವರು ಅಭಿನಯಿಸಿರುವ ಮೊದಲ ಭಾರತೀಯ ಚಿತ್ರ ನಮ್ಮದು ಎಂಬ ಹೆಮ್ಮೆ ಇದೆ. ಯಾವುದೇ ಕೊರತೆ ಬಾರದ ಹಾಗೆ ಈ ಹಾಡನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದೇವೆ. ತೆರೆಯ ಮೇಲೆ ನೋಡಿದಾಗ ಹಾಡು ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ನಿರ್ಮಾಪಕ ರಮೇಶ್ ರೆಡ್ಡಿ ಸಂತಸದಿಂದ ನುಡಿದರು. ಅನೇಕ ಹಾಲಿವುಡ್ ಚಿತ್ರಗಳಿಗೆ ವಿ.ಎಫ್.ಎಕ್ಸ್ ಮಾಡಿರುವ ಕನಡಾದ ಯಶ್ ಶೆಟ್ಟಿ, 45 ಚಿತ್ರಕ್ಕೂ ವಿಎಫ್‌ಎಕ್ಸ್ ಮಾಡಿದ್ದಾರೆ. ಅವರು ವಿ.ಎಫ್.ಎಕ್ಸ್ ಮಾಡಿರುವ ಮೊದಲ ಕನ್ನಡದ ಸಿನಿಮಾ ಇದಾಗಿದೆ. ಡಿಸೆಂಬರ್ 25ರಂದು 45 ವಿಶ್ವಾದ್ಯಂತ ತೆರೆಗೆ ಬರಲಿದೆ.

45 ಬರೀ ಕರ್ನಾಟಕ ಮಾತ್ರವಲ್ಲ ಭಾರತದಾದ್ಯಂತ ಸದ್ದು ಮಾಡಲಿದೆ. ಯಾಕೆಂದರೆ ಅದ್ಭುತ ಕಂಟೆಂಟ್ ಈ ಸಿನಿಮಾದಲ್ಲಿದೆ. ಅರ್ಜುನ್ ಜನ್ಯ ಈ ಚಿತ್ರದ ಕಥೆ ಹೇಳಿದಾಗ ನೀವೆ ನಿರ್ದೇಶನ ಮಾಡಿ ಎಂದು ಹೇಳಿದ್ದೆ. ಈಗ ಈ ಹಾಡು ನೋಡಿದಾಗ ಅವರ ನಿರ್ದೇಶನದ ಬಗ್ಗೆ ಮೆಚ್ಚುಗೆಯಿದೆ. ನಾನು, ಉಪೇಂದ್ರ ಹಾಗೂ ರಾಜ್.ಬಿ.ಶೆಟ್ಟಿ ಮೂರು ಜನ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇವೆ. ಎಲ್ಲರಿಗೂ ಸಮಾನವಾದ ಅವಕಾಶವಿದೆ.

-ಶಿವರಾಜ್ ಕುಮಾರ್

ನಮ್ಮ ಚಿತ್ರದಲ್ಲಿ ಹಾಡಿಲ್ಲ, ಹಾಗಾಗಿ ಪ್ರಮೋಷನಲ್ ಸಾಂಗ್ ಮಾಡಬೇಕೆಂಬ ಆಸೆ ಇತ್ತು. ಎಲ್ಲಾ ಸಿನಿಮಾದ ರೀತಿ ಬೇಡ ಅಂದುಕೊಂಡೆವು. ಆಗ ನನಗೆ ಉಗಾಂಡದ ಜಿಟೊ ಕಿಡ್ಸ್ ಈ ಪ್ರಮೋಷನ್ ಸಾಂಗ್ ನಲ್ಲಿ ಅಭಿನಯಿಸಿದರೆ ಚೆಂದ ಅನಿಸಿತು. ಕಷ್ಟಪಟ್ಟು ಅವರನ್ನು ಸಂಪರ್ಕ ಮಾಡಿದೆವು. ಇವರ ಜತೆಗೆ ಶಿವಣ್ಣ, ಉಪೇಂದ್ರ, ರಾಜ್ ಶೆಟ್ಟಿ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ.

-ಅರ್ಜುನ್ ಜನ್ಯ ನಿರ್ದೇಶಕ

ಸವಿಯಲು ಸಿದ್ಧವಾದ ಫುಲ್ ಮೀಲ್ಸ್

ವೆಡ್ಡಿಂಗ್ ಫೋಟೋಗ್ರಾಫರ್ ಜೀವನದ ಕುರಿತಾದ ಕಥೆಯನ್ನು ಒಳಗೊಂಡ ಫುಲ್ ಮೀಲ್ಸ್ ತೆರೆಗೆ ಬರಲು ಸಿದ್ದವಾಗಿದೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಭರವಸೆ ಮೂಡಿಸಿದೆ. ವೆಡ್ಡಿಂಗ್ ಫೋಟೋಗ್ರಾಫರ್ ಒಬ್ಬ ಪ್ರೀ ವೆಡ್ಡಿಂಗ್ ಶೂಟ್‌ಗೆಂದು ಹೋದಾಗ, ಆ ಮದುವೆಯ ಹುಡುಗಿಗೆ ಫೋಟೋಗ್ರಾಫರ್ ಮೇಲೆ ಪ್ರೀತಿ ಮೂಡುತ್ತದೆ. ಅಲ್ಲಿಂದ ಯಾವೆಲ್ಲಾ ಸವಾಲುಗಳು ಕಾಡುತ್ತವೆ ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ತ್ರಿಕೋನಾ ಪ್ರೇಮಕಥೆಯ ಸುತ್ತ ಸಾಗುವ ರೊಮ್ಯಾಂಟಿಕ್ ಕಾಮಿಡಿ ಸ್ಟೋರಿ ಸಿನಿಮಾದಲ್ಲಿದೆ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ. ಲಿಖಿತ್ ಶೆಟ್ಟಿ ನಾಯಕನಾಗಿ ನಟಿಸಿದ್ದ, ಖುಷೀ ರವಿ, ತೇಜಸ್ವಿನಿ ಶರ್ಮ ನಾಯಕಿಯರಾಗಿ ಕಾಣಸಿಕೊಂಡಿದ್ದಾರೆ. ಎನ್. ವಿನಾಯಕ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಫ್ಯಾಮಿಲಿ ಪ್ಯಾಕ್ ಚಿತ್ರಗಳ ಮೂಲಕ ನಾಯಕನಾಗಿ ನಟಿಸಿದ್ದ ಲಿಖಿತ್ ಶೆಟ್ಟಿ ಫೋಟೋಗ್ರಾಫರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೆ. ದಿಯಾ ಖ್ಯಾತಿಯ ಖುಷೀ ರವಿ ಮದುವೆ ಹುಡುಗಿಯಾಗಿ ಕಂಗೊಳಿಸಿದ್ದಾರೆ. ಮೇಕಪ್ ಹುಡುಗಿಯ ಪಾತ್ರದಲ್ಲಿ ತೇಜಸ್ವಿನಿ ಶರ್ಮ ನಟಿಸಿದ್ದಾರೆ. ರಂಗಾಯಣ ರಘು, ಸೂರಜ್ ಲೋಕ್ರೆ, ವಿಜಯ್ ಚಂಡೂರ್, ರವಿ ಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಚಂದ್ರಕಲಾ ಮೋಹನ್, ಹೂನ್ನವಳ್ಳಿ ಕೃಷ್ಣ, ರಮೇಶ್ ಪಂಡಿತ್, ಗಣೇಶ್ ರಾವ್, ಕೋಟೆ ಪ್ರಭಾಕರ್, ಚೇತನ್ ದುರ್ಗಾ, ನಾಗೇಂದ್ರ ಅರಸ್, ಮೂಗು ಸುರೇಶ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಗುರು ಕಿರಣ್ ಸಂಗೀತ ನಿರ್ದೇಶನ, ದೀಪು ಎಸ್ ಕುಮಾರ್ ಸಂಕಲನ, ಮನೋಹರ್ ಜೋಷಿ ಛಾಯಾಗ್ರಹಣ, ಹರೀಶ್ ಗೌಡ ಸಂಭಾಷಣೆ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ, ಅರ್ಜುನ್ ರಾಜ್ ಸಾಹಸ ನಿರ್ದೇಶನ, ಕವಿರಾಜ್ ಮತ್ತು ಪ್ರಮೋದ್ ಮರವಂತೆ ಸಾಹಿತ್ಯ ಈ ಚಿತ್ರಕ್ಕಿದೆ. ಲಿಖಿತ್ ಶೆಟ್ಟಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಮೈ ನೇಮ್ ಇಸ್ ಕೆಡಿಯ ಟ್ರೇಲರ್

ಗ್ರಾಮೀಣ ಕಥೆಯನ್ನು ಒಳಗೊಂಡ ಈಗ ಮೈ ನೇಮ್ ಈಸ್ ಕೆಡಿ ಚಿತ್ರ ತೆರೆಗೆ ಸಿದ್ಧವಾಗಿದೆ. ಸದ್ಯ ಚಿತ್ರತಂಡ, ಟ್ರೇಲರ್ ರಿಲೀಸ್ ಮಾಡಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಬಾ.ಮ.ಹರೀಶ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕೆ.ಜೆ. ಚಿಕ್ಕು ಮೈ ನೇಮ್ ಇಸ್ ಕೆಡಿ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಕನಕನಹಳ್ಳಿ ದಾಸೇಗೌಡರ ಮಗ ಎಂಬುದನ್ನು ಚಿಕ್ಕದಾಗಿ ಕೆಡಿ ಎಂದು ಹೆಸರನ್ನು ಇಡಲಾಗಿದೆ. ಗ್ರಾಮೀಣ ಭಾಗದ ಹಿನ್ನೆಲೆಯಲ್ಲಿ ಚಿತ್ರದ ಕಥೆ ಸಾಗಲಿದೆ. ಅಮ್ಮನನ್ನು ಉಳಿಸಿಕೊಳ್ಳುವ ಸಲುವಾಗಿ ಏಳನೇ ತರಗತಿ ಓದುತ್ತಿರುವ ಮಗ ಶಾಸಕನ ಬಳಿ ಸಹಾಯ ನಿರೀಕ್ಷಿಸುತ್ತಾನೆ. ಆದರೆ ಆತ ಅವಮಾನ ಮಾಡುತ್ತಾನೆ. ಇದರಿಂದ ಕುಪಿತಕೊಂಡು, ಮುಂದೆ ತಾನೂ ಎಂಎಲ್ಎ ಆಗಬೇಕೆಂದು ಪಣ ತೊಡುತ್ತಾನೆ. ಅದಕ್ಕಾಗಿ ಯಾವ ರೀತಿಯ ಸವಾಲುಗಳನ್ನು ಎದಿರಿಸುತ್ತಾನೆ. ಅಂತಿಮವಾಗಿ ತನ್ನ ಹಾದಿಯಲ್ಲಿ ಯಶಸ್ಸು ಗಳಿಸುತ್ತಾನಾ ಎಂಬುದೇ ಚಿತ್ರದ ಸಾರಾಂಶವಾಗಿದೆ. ಕಾಮಿಡಿ, ಡ್ರಾಮಾ ಜಾನರ್‌ನಲ್ಲಿ ಸಿನಿಮಾದ ಸ್ಟೋರಿ ಸಾಗುತ್ತದೆ.

ಆರ್ಯನ್ ವೆಂಕಟೇಶ್ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆಯುವ ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಭವಾನಿ ನಾಯಕಿಯಾಗಿ ಬಣ್ಣಹಚ್ಚಿದ್ದು, ಉಳಿದಂತೆ ಹೊನ್ನವಳ್ಳಿ ಕೃಷ್ಣ, ಗಿರೀಶ್ ಜತ್ತಿ, ವಿಶ್ವ, ಅರಸು, ಸುಪ್ರೀತ್ ಕಾಟಿ, ರೋಹಿಣಿ, ಮುಂತಾದವರು ತಾರಾಗಣದಲ್ಲಿದ್ದಾರೆ. ಎಸ್‌ಎಸ್‌ಕೆಬಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಡಿ.ವೆಂಕಟೇಶ್ ಚಿತ್ರ ನಿರ್ಮಾಣ ಮಾಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ಪುನೀತ್ ರಂಗನಾಥ್, ಮನು ದೇವನಹಳ್ಳಿ ಸಾಹಿತ್ಯದ ಗೀತೆಗಳಿಗೆ ಹಿತನ್ ಹಾಸನ್ ಸಂಗೀತ ಸಂಯೋಜಿಸಿದ್ದಾರೆ. ಸಂತೋಷ ಪಂಡಿ ಛಾಯಾಗ್ರಹಣ, ಕಿರಣ್ ಕುಮಾರ್ ಸಂಕಲನ, ಗಣೇಶ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಕನಕಪುರ, ಹೆಸರುಘಟ್ಟ, ಆನೇಕಲ್, ಬೆಂಗಳೂರು ಸುತ್ತಮುತ್ತ ಕಾಲ ಚಿತ್ರೀಕರಣ ನಡೆಸಲಾಗಿದೆ. ಡಿಸೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.